# ಕಾರ್ಮಿಕ ದೃಷ್ಟಿಕೋನ

**ಒಳ ಪುಟಗಳಲ್ಲಿ............**


ಜನಸಂಖ್ಯಾ ಏರಿಕೆಗೆ ಮುಸಲ್ಮಾನ ಸಮುದಾಯ ಹೊಣೆ ಎಂಬ ಸುಳ್ಳು ಆರೋಪ! ......3
ಮಧ್ಯಪ್ರಾಚ್ಯದ ಇತ್ತೀಚಿನ ಕದನದ ತಾಣ -ಯೆಮೆನ್ ......4
ಇಸ್ರೇಲ್ ಮೇಲೆ ಇರಾನ್ ಕ್ಷಿಪಣಿ ದಾಳಿ ......6
ಲಡಾಕ್:ಪರಿಸರ, ಅಸ್ತಿತ್ವ ಹಾಗೂ ನ್ಯಾಯಯುತ ಹಕ್ಕುಗಳಿಗಾಗಿ ಹೋರಾಟ ......7
ವಿನಾಯಕ ದಾಮೋದರ್ ಸಾವರ್ಕರ್ ಅವರ "ದೇಶಪ್ರೇಮ"! ......8



ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯುನಿಸ್ಟ್ SUCI(C)
ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ
ಸಂಪುಟ: 37 ಸಂಚಿಕೆ: 04
ಜೂನ್ 2024 ಬೆಲೆ: ರೂ. 7/–


## ಎನ್‌ಇಪಿ–2020ರ ಅನುಷ್ಠಾನವನ್ನು ಹಿಂಪಡೆದ ಮೊದಲ ರಾಜ್ಯ – ಜನ ಸಂಘರ್ಷಕ್ಕೆ ದೊರೆತ ಪ್ರತಿಫಲ

ಕರ್ನಾಟಕ ರಾಜ್ಯ ಸರ್ಕಾರವು ನಾಲ್ಕು ವರ್ಷದ ಪದವಿ ಅನುಷ್ಠಾನವನ್ನು ಹಿಂಪಡೆದಿದೆ. ಈ ಮೂಲಕ ಕರ್ನಾಟಕವು ಎನ್‌ಇಪಿ–2020ರ ಅನುಷ್ಠಾನವನ್ನು ಹಿಮ್ಮೆಟ್ಟಿಸಿದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ನೀತಿಯ ವಿರುದ್ಧ ರಾಜ್ಯವ್ಯಾಪಿ ಬೆಳೆದ ಜನ ಸಂಘರ್ಷಕ್ಕೆ ದೊರೆತ ಪ್ರತಿಫಲ ಇದಾಗಿದೆ. ಆಳುವ ಸರ್ಕಾರಗಳು ದೇಶದ ಬಂಡವಾಳಗಾರರ ಲಾಭವೃದ್ಧಿಗಾಗಿ ಶಿಕ್ಷಣವನ್ನು ಖಾಸಗೀಕರಣ–ವ್ಯಾಪಾರೀಕರಣಗೊಳಿಸಿ, ಬಜೆಟ್‌ನಲ್ಲಿ ಅನುದಾನವನ್ನು ಕಡಿತಗೊಳಿಸುವುದು, ಶುಲ್ಕ ವಿನಾಯಿತಿ– ವಿದ್ಯಾರ್ಥಿ ವೇತನಗಳನ್ನು ಕ್ರಮೇಣ ಕೈಬಿಡುವುದು, ಸರ್ಕಾರಿ ಶಾಲಾ–ಕಾಲೇಜುಗಳನ್ನು ಬಂದ್ ಮಾಡುವುದು ಸೇರಿದಂತೆ 'ಸಾರ್ವಜನಿಕ ಶಿಕ್ಷಣ'ವನ್ನು ಬಲಿಕೊಡುತ್ತಿವೆ. ಇಂತಹ ಸಂದರ್ಭದಲ್ಲಿ ದೊರೆತಿರುವ ಈ ಜಯವು, ಸರ್ಕಾರದ ನೀತಿಗಳಿಂದಾಗಿ ಶಿಕ್ಷಣದಿಂದ ವಂಚಿತವಾಗುತ್ತಿರುವ ವಿದ್ಯಾರ್ಥಿ ಸಮೂಹಕ್ಕೆ ಹಾಗೂ ಬದುಕಿನ ಬವಣೆಗಳಿಗೆ ಸಿಲುಕಿ ಬಸವಳಿದಿರುವ ಜನಸಮೂಹಕ್ಕೆ, ಕಾರ್ಮೋಡದ ನಡುವೆ ಸುಳಿದ ಭರವಸೆಯ ಬೆಳಕಿನಂತಿದೆ! ಅನ್ಯಾಯ ಮತ್ತು ಅಸತ್ಯದೊಂದಿಗೆ ಯಾವುದೇ ಕಾರಣಕ್ಕೂ ರಾಜಿ ಮಾಡಿಕೊಳ್ಳದೆ, ನಿರಂತರ ಹೋರಾಟವನ್ನು ನಡೆಸಬೇಕೆಂಬ ನೇತಾಜಿ ಸುಭಾಷ್ ಚಂದ್ರ ಬೋಸರ ಸಮರವಾಣಿಯಿಂದ ಪ್ರೇರಿತಗೊಂಡ ಹೋರಾಟದಿಂದ ಇದು ಸಂಭವಿಸಿದೆ! ಹೋರಾಟವೊಂದೇ ಎಲ್ಲ ಸಮಸ್ಯೆಗಳ ಪರಿಹಾರಮಾರ್ಗ ಎಂಬ ನಂಬಿಕೆಯನ್ನು ಇದು ನೂರ್ಮಡಿಗೊಳಿಸಿದೆ! ಸರಿಯಾದ ವಿಚಾರಧಾರೆಯೊಂದಿಗೆ, ಸಮರ್ಥ ನಾಯಕತ್ವದ ಅಡಿಯಲ್ಲಿ ನಡೆಯುವ ಹೋರಾಟದ ಬಾಹುಬಲಕ್ಕೆ ಇದು ನಿದರ್ಶನವಾಗಿದೆ!!

ರಾಜ್ಯದಲ್ಲಿ ಅಪ್ರಜಾತಾಂತ್ರಿಕವಾಗಿ ಹಿಂದಿನ ಬಿಜೆಪಿ ಸರ್ಕಾರದಿಂದ ಹೇರಲ್ಪಟ್ಟ ಎನ್‌ಇಪಿ–2020 ರ ಭಾಗವಾಗಿ ನಾಲ್ಕು ವರ್ಷದ ಪದವಿಯನ್ನು ಅನುಷ್ಠಾನಕ್ಕೆ ತರಲಾಯಿತು. ಇದರ ವಿರುದ್ಧ 03 ಡಿಸೆಂಬರ್ 2021ರಂದು ಎಐಡಿಎಸ್‌ಓ ನಾಯಕತ್ವದಲ್ಲಿ ಮೈಸೂರಿನ ವಿದ್ಯಾರ್ಥಿಗಳಿಂದ ಮೊದಲುಗೊಂಡ ಐತಿಹಾಸಿಕ ಹೋರಾಟವು, ರಾಜಧಾನಿ ಬೆಂಗಳೂರು, ಬಳ್ಳಾರಿ, ಗುಲ್ಬರ್ಗಾ ಧಾರವಾಡ, ರಾಯಚೂರು, ದಾವಣಗೆರೆ ಸೇರಿದಂತೆ ರಾಜ್ಯದ ಎಲ್ಲ ಜಿಲ್ಲೆಗಳಿಗೂ ವ್ಯಾಪಿಸಿತು. ಸಾರ್ವಜನಿಕ ಶಿಕ್ಷಣವನ್ನು ಉಳಿಸಲು ಆಗ್ರಹಿಸಿ ಎನ್‌ಇಪಿ–2020ರ ವಿರುದ್ಧ ದೆಹಲಿಯ ಜಂತರ್ ಮಂತರ್ ನಲ್ಲಿ ರಾಷ್ಟ್ರಮಟ್ಟದ ಧರಣಿಯನ್ನು ಎಐಡಿಎಸ್‌ಓ ಸಂಘಟಿಸಿತು. ಶಿಕ್ಷಣದ ವ್ಯಾಪಾರೀಕರಣ ಮತ್ತು ಕಾರ್ಪೊರೇಟೀಕರಣದ ನೀಲಿನಕ್ಷೆಯಾಗಿರುವ ಈ ನೀತಿಯ ವಿರುದ್ಧ ದೇಶವ್ಯಾಪಿ ಬಲಿಷ್ಠ ಹೋರಾಟಗಳನ್ನು ಸಂಘಟಿಸಬೇಕೆಂಬ ಎಐಡಿಎಸ್‌ಓ ಅಖಿಲ ಭಾರತ ಸಮಿತಿಯ ಕರೆಯ ಮೇರೆಗೆ ದೇಶವ್ಯಾಪಿ ಒಂದು ಕೋಟಿ ಸಹಿ ಸಂಗ್ರಹ ಅಭಿಯಾನವನ್ನು ಆರಂಭಿಸಲಾಯಿತು. ಎಲ್ಲೆಡೆ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡ ಈ ಅಭಿಯಾನಕ್ಕೆ ಕರ್ನಾಟಕದ ವಿದ್ಯಾರ್ಥಿಗಳು ಅಭೂತಪೂರ್ವವಾಗಿ ಸ್ಪಂದಿಸಿದರು. ಕರ್ನಾಟಕದ ಅಂದಿನ ಬಿಜೆಪಿ ರಾಜ್ಯ ಸರ್ಕಾರವು ಎನ್‌ಈಪಿ 2020ನ್ನು ಹಠಾತ್ತಾಗಿ ಅನುಷ್ಠಾನಗೊಳಿಸಿ

2ನೇ ಪುಟಕ್ಕೆ....



ಎನ್‌ಇಪಿ 2020 ಭಾಗವಾದ ನಾಲ್ಕು ವರ್ಷಗಳ ಪದವಿ ರದ್ದತಿಯ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಸಂಘಟಿಸಿದ ರಾಜ್ಯ ಮಟ್ಟದ ವಿಜಯೋತ್ಸವದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು

## ಲೋಕಸಭಾ ಚುನಾವಣೆಯ ಕುರಿತು ಎಸ್‌ಯುಸಿಐ(ಸಿ) ಹೇಳಿಕೆ

**ಸಂಸತ್ ಚುನಾವಣೆಯ ಫಲಿತಾಂಶದ ಕುರಿತು ಎಸ್‌ಯುಸಿಐ(ಸಿ) ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಪ್ರವಾಶ್ ಘೋಷ್ ಅವರು ಈ ಕೆಳಗಿನ ಹೇಳಿಕೆಯನ್ನು ನೀಡಿದ್ದಾರೆ:**

"ಆಳುವ ಬಂಡವಾಳಶಾಹಿ ವರ್ಗವು ನಾಮನಿರ್ದೇಶಿತ ಚುನಾವಣಾ ಆಯೋಗದ ಮೌನ ಸಮ್ಮತಿಯೊಂದಿಗೆ, ಭಾರಿ ಹಣಬಲ, ಆಡಳಿತಾಧಿಕಾರದ ಅಬ್ಬರದ ಬಳಕೆ, ಮಾಧ್ಯಮ ಬಲವನ್ನು ಖರೀದಿಸುವುದರ ಜೊತೆಗೆ ಹಿಂದೂ ಧಾರ್ಮಿಕ ಕೋಮುವಾದವನ್ನು ಮತ್ತು ಜಾತಿ ವಿಭಜನೆಯನ್ನು ಪ್ರಚೋದಿಸುವ ಮೂಲಕ ಮತ್ತೊಮ್ಮೆ ತನ್ನ ನಿಷ್ಠಾವಂತ ಸೇವಕ ಬಿಜೆಪಿಯನ್ನು ಅಧಿಕಾರದಲ್ಲಿ ಸ್ಥಾಪಿಸುವಲ್ಲಿ ಯಶಸ್ವಿಯಾಗಿದೆ.

'ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ'ಎಂಬ ಬೊಗಳೆ ಮಿತಿಯಿಲ್ಲದ ವಂಚನೆಯೇ ಹೊರತು ಬೇರೇನೂ ಅಲ್ಲ ಎಂದು ಮತ್ತೊಮ್ಮೆ ಸಾಬೀತುಪಡಿಸಿದೆ. ಆದಾಗ್ಯೂ ಬಿಜೆಪಿಗೆ ಪೂರ್ಣ ಬಹುಮತ ನೀಡದ ದೇಶದ ಜನರಿಗೆ ಪಕ್ಷವು ಅಭಿನಂದನೆ ಸಲ್ಲಿಸುತ್ತದೆ.

ಈ ಚುನಾವಣೆಯು ಅತ್ಯಂತ ಭಯಾನಕ ಚಿತ್ರಣವನ್ನು ನೀಡಿದೆ. ಅಧಿಕಾರವನ್ನು ಹೇಗಾದರೂ ಕಬಳಿಸಬೇಕೆಂದು ಜಿದ್ದಾಜಿದ್ದಿ ನಡೆಸಿರುವ ಬೂರ್ಜ್ವಾ ಪಕ್ಷಗಳು, ನಿರ್ದಿಷ್ಟವಾಗಿ ಬಿಜೆಪಿ, ರಾಜಕೀಯ ಕೆಸರೆರಚಾಟ, ಅಸಹ್ಯ ನಿಂದನೆಗಳು, ಅಸಭ್ಯ ಮಾತುಕತೆಗಳು ಮತ್ತು ಕೊನೆಯಿಲ್ಲದ ವಂಚನೆ ಮತ್ತು ಸುಳ್ಳಿನಲ್ಲಿ ಎಲ್ಲಾ ಮಿತಿಗಳನ್ನು ದಾಟಿದೆ. ವೈಭವೀಕರಿಸಲ್ಪಟ್ಟಿರುವ ಬಂಡವಾಳಶಾಹಿ ಸಂಸದೀಯ ಪ್ರಜಾಪ್ರಭುತ್ವವು ಬಹಳವೇ ಕನಿಷ್ಠ ಮಟ್ಟಕ್ಕೆ ಇಳಿಸಲ್ಪಟ್ಟಿದ್ದು, ಫ್ಯಾಸಿಸ್ಟ್ ಸರ್ವಾಧಿಕಾರವು ಆ ಜಾಗವನ್ನು ಆಕ್ರಮಿಸಿದೆ ಎಂದು ಇದು ಮತ್ತೊಮ್ಮೆ ಸಾಬೀತುಪಡಿಸುತ್ತದೆ.

ಸೋಷಲ್ ಡೆಮಾಕ್ರಟಿಕ್ ಸುಧಾರಣಾವಾದಿ ಎಡ ಪಕ್ಷವಾಗಿ ಸಿಪಿಐ(ಎಂ), ಐಕ್ಯ ಎಡ ಹೋರಾಟವನ್ನು ಕೈಬಿಟ್ಟು ಪರ್ಯಾಯ ಬಂಡವಾಳಶಾಹಿ ಮೈತ್ರಿಕೂಟದ ಹಿಂಬಾಲಕನಾಗುವ ಮೂಲಕ ತನ್ನನ್ನು ತಾನು ಮತ್ತಷ್ಟು ಕಳಂಕಿತಗೊಳಿಸಿಕೊಂಡಿದೆ.

ಬಂಡವಾಳಶಾಹಿ ಆಡಳಿತದಲ್ಲಿ ಕೇವಲ ಸರ್ಕಾರದ ಬದಲಾವಣೆಯು ತಮ್ಮ ಅತ್ಯಂತ ಬಡತನದ ಜೀವನವನ್ನು ಬದಲಾಯಿಸುವುದಿಲ್ಲ ಮತ್ತು ತಾವು ಅನುಭವಿಸುತ್ತಿರುವ ಜ್ವಲಂತ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ ಎಂಬುದನ್ನು ಜನರು ಅರಿತುಕೊಳ್ಳಬೇಕು. ಆದ್ದರಿಂದ, ಬಂಡವಾಳಶಾಹಿ ಶೋಷಣೆಯ ಅಂತ್ಯಕ್ಕೆ ಮುನ್ನುಡಿಯಾಗಿ ಉನ್ನತ ಸಂಸ್ಕೃತಿ ಮತ್ತು ನೈತಿಕತೆಯ ಆಧಾರದಲ್ಲಿ ಕ್ರಾಂತಿಕಾರಿ ಕಾರ್ಮಿಕ ವರ್ಗದ ನಾಯಕತ್ವವು ವರ್ಗ ಮತ್ತು ಸಮೂಹ ಹೋರಾಟವನ್ನು ಸಂಘಟಿಸುವುದು ಮತ್ತು ಬೆಳೆಸುವುದು ಈ ಕಾಲದ ತುರ್ತು ಅಗತ್ಯವಾಗಿದೆ.

## ವಾಲ್ಮೀಕಿ ನಿಗಮದ ಭ್ರಷ್ಟಾಚಾರಕ್ಕೆ ಎಸ್‌ಯುಸಿಐ(ಸಿ) ಖಂಡನೆ

ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆಯಲಾಗಿದೆ ಎನ್ನಲಾದ ರೂ.187 ಕೋಟಿಗಳ ಅವ್ಯವಹಾರ ಖಂಡಿಸಿ ಎಸ್‌ಯುಸಿಐ(ಸಿ) ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಕಾ.ಕೆ.ಉಮಾರವರು 31–05–2024ರಂದು ನೀಡಿರುವ ಪತ್ರಿಕಾ ಹೇಳಿಕೆ:

ನಿಗಮದ ಅಧಿಕಾರಿಗಳ ಮತ್ತು ಪರಿಶಿಷ್ಠ ವರ್ಗಗಳ ಕಲ್ಯಾಣ ಸಚಿವರ ಕಚೇರಿಯ ಸಿಬ್ಬಂದಿಯ ಮೇಲೆ ಆರೋಪ ಹೊರಿಸಿ ಚಂದ್ರಶೇಖರ್ ಎಂಬ ಅಧಿಕಾರಿ ಆತ್ಮಹತ್ಯೆಗೆ ಶರಣಾಗಿರುವುದು ಆಘಾತಕಾರಿ ಘಟನೆಯಾಗಿದೆ. ನಿಗಮದ ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ ಬೇರೆ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸಿರುವುದು ದಾಖಲೆಯಲ್ಲಿದೆ. ಅಕ್ರಮ ನಡೆದಿರುವುದು ನಿಜ ಎಂದು ಸಚಿವರೇ ಹೇಳಿಕೆ ನೀಡಿದ್ದಾರೆ. ಪರಿಶಿಷ್ಠ ಪಂಗಡಗಳ ಅಭಿವೃದ್ಧಿಗೆ ಮೀಸಲಾದ ಈ ಹಣದ ದುರುಪಯೋಗ ಅತ್ಯಂತ ಖಂಡನೀಯ. ಹಿಂದಿನ ಬಿಜೆಪಿ ಸರ್ಕಾರದ ಭ್ರಷ್ಟಾಚಾರವನ್ನೇ ಮುಖ್ಯ ವಿಷಯವಾಗಿ ಮುಂದಿಟ್ಟು ಚುನಾವಣೆಯಲ್ಲಿ ಗೆದ್ದ ಕಾಂಗ್ರೆಸ್ ಸರ್ಕಾರದಲ್ಲಿಯೂ ಅದೇ ಪ್ರಮಾಣದಲ್ಲಿ ಭ್ರಷ್ಟಾಚಾರ ಮುಂದುವರಿದಿರುವುದು ಜನರಲ್ಲಿ ಆಕ್ರೋಶ ಮೂಡಿಸಿದೆ. ಈ ಹಗರಣದಲ್ಲಿ ಸಚಿವರೂ ಸೇರಿದಂತೆ ಯಾರೇ ಭಾಗಿಯಾಗಿದ್ದರೂ, ಸೂಕ್ತ ತನಿಖೆ ನಡೆಸಿ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು, ಅಲ್ಲಿಯ ತನಕ ಸಂಬಂಧಿತ ಸಚಿವರ ರಾಜೀನಾಮೆ ಪಡೆದು ತನಿಖೆ ನ್ಯಾಯಸಮ್ಮತವಾಗಿ ನಡೆಯಲು ಅವಕಾಶ ನೀಡಬೇಕು ಎಂದು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷವು ಆಗ್ರಹಿಸುತ್ತದೆ.

## ಹಾಸನದ ಲೈಂಗಿಕ ಹಗರಣ: ಸಂತ್ರಸ್ತೆಯರಿಗೆ ನ್ಯಾಯಕೊಡಿ: ಎಐಎಂಎಸ್‌ಎಸ್ ಸಂಘಟಿತ ಸಮಾವೇಶದ ಆಗ್ರಹ

ಹಾಸನದಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವ ಒಬ್ಬ ಹಾಲಿ ಸಂಸದ ನೂರಾರು ಹೆಣ್ಣುಮಕ್ಕಳ ಮೇಲೆ ಅತ್ಯಂತ ವಿಕೃತ ರೀತಿಯಲ್ಲಿ ದೌರ್ಜನ್ಯ ಎಸಗಿರುವ ಸ್ಫೋಟಕ ಹಾಗೂ ಆಘಾತಕಾರಿ ಘಟನೆಗಳು ಬೆಳಕಿಗೆ ಬಂದಿವೆ. ದೌರ್ಜನ್ಯಕ್ಕೊಳಗಾದ ಸಂತ್ರಸ್ತ ಹೆಣ್ಣುಮಕ್ಕಳಿಗೆ ರಕ್ಷಣೆ ಹಾಗೂ ನ್ಯಾಯವನ್ನು ಆಗ್ರಹಿಸಿ ಹಾಗೂ ಅಪರಾಧಿಗಳಿಗೆ ನಿದರ್ಶನೀಯ ಶಿಕ್ಷೆ ನೀಡಬೇಕೆಂದು ಒತ್ತಾಯಿಸಿ, ಮೇ ತಿಂಗಳ 14 ರಂದು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ರಾಜ್ಯ ಸಮಿತಿಯು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಸಮಾವೇಶವನ್ನು ಸಂಘಟಿಸಿತು. ಲೈಂಗಿಕ ದೌರ್ಜನ್ಯದ ಪ್ರಕರಣಕ್ಕೆ ಸಂಬಂಧಪಟ್ಟ ಆರೋಪಿಗಳನ್ನು ಕೂಡಲೇ ಬಂಧಿಸಬೇಕು, ತನಿಖೆಯನ್ನು ಸಮರೋಪಾದಿಯಲ್ಲಿ ಪೂರ್ಣಗೊಳಿಸಿ ಅಪರಾಧಿಗಳಿಗೆ ಉಗ್ರ ಶಿಕ್ಷೆಯನ್ನು ಖಾತ್ರಿ ಪಡಿಸಬೇಕು, ಸಂತ್ರಸ್ತೆಯರಿಗೆ ಆಪ್ತ ಸಮಾಲೋಚಕರನ್ನು ನೇಮಿಸಿ ಅಗತ್ಯ ವೈದ್ಯಕೀಯ ಕೌನ್ಸಿಲಿಂಗ್ ವ್ಯವಸ್ಥೆಯನ್ನು ಮಾಡಬೇಕು, ಅವರಿಗೆ ಸೂಕ್ತ ಭದ್ರತೆ ಖಾತ್ರಿ ಪಡಿಸಬೇಕು, ದೌರ್ಜನ್ಯದ ದೃಶ್ಯಗಳನ್ನೊಳಗೊಂಡ ಪೆನ್‌ಡ್ರೈವ್‌ಗಳನ್ನು ಹಾಸನದ ಹಾದಿಬೀದಿಗಳಲ್ಲಿ ಬಿಸಾಡಿದವರ ವಿರುದ್ಧ ಕಠಿಣಕ್ರಮ ಕೈಗೊಳ್ಳಬೇಕು ಎಂಬ ಹಕ್ಕೊತ್ತಾಯಗಳನ್ನು ಸಮಾವೇಶವು ಮಂಡಿಸಿತು.

**ಪ್ರಕರಣದಲ್ಲಿ ರಾಜಕೀಯ ತಳಕು ಹಾಕಿರುವುದೇ ದೊಡ್ಡ ದುರಂತ – ಸಿ.ಎಚ್.ಹನುಮಂತರಾಯ (ಹಿರಿಯ ನ್ಯಾಯವಾದಿಗಳು, ಕರ್ನಾಟಕ ಉಚ್ಚನ್ಯಾಯಾಲಯ)**

ಸಮಾವೇಶದಲ್ಲಿ ಮಾತನಾಡಿದ ಹಿರಿಯ ನ್ಯಾಯವಾದಿಗಳಾದ ಶ್ರೀ.ಸಿ.ಎಚ್. ಹನುಮಂತರಾಯರವರು ನ್ಯಾಯಾಲಯದ ವಿವಿಧ ಸೆಕ್ಷನ್‌ಗಳನ್ನು ಉಲ್ಲೇಖಿಸುತ್ತಾ, ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆಯಲು 41 ಸೆಕ್ಷನ್‌ಗಳಿದ್ದರೆ, ಪ್ರತಿ ದಿನ ಅವ್ಯಾಹತವಾಗಿ ನಡೆಯುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಕೇವಲ 24 ಸೆಕ್ಷನ್‌ಗಳಷ್ಟೇ ಇರುವುದನ್ನು ತಿಳಿಸುತ್ತಾ, ಕಾನೂನಿನಲ್ಲಿರುವ ಲೋಪವನ್ನು ಪ್ರಶ್ನಿಸಿದರು. ಈ

4ನೇ ಪುಟಕ್ಕೆ....



ಸಮಾವೇಶದಲ್ಲಿ ಭಾಗವಹಿಸಿದ ಉಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಶ್ರೀ ಸಿ.ಎಚ್. ಹನುಮಂತರಾಯ, ಎಐಎಂಎಸ್‌ಎಸ್ ರಾಷ್ಟ್ರೀಯ ಉಪಾಧ್ಯಕ್ಷರಾದ ಡಾ. ಸುಧಾ ಕಾಮತ್, ರಾಜ್ಯ ಅಧ್ಯಕ್ಷರಾದ ಮಂಜುಳಾ ಎಂ.ಎನ್., ರಾಜ್ಯ ಕಾರ್ಯದರ್ಶಿ ಎಸ್.ಶೋಭಾ ಮತ್ತಿತರರು

...1ನೇ ಪುಟದಿಂದ

ರಾಜ್ಯದ ಮೇಲೆ ಈ ಶಿಕ್ಷಣ ನೀತಿಯನ್ನು ಹೇರಿತು. ಸಾರ್ವಜನಿಕ ಶಿಕ್ಷಣವನ್ನು ದುರ್ಬಲಗೊಳಿಸುವ ಈ ನೀತಿಯ ಪಿತೂರಿಯಾಗಿ, ವಿಲೀನೀಕರಣದ ಹೆಸರಿನಲ್ಲಿ 13,800 ಸರ್ಕಾರಿ ಶಾಲೆಗಳು ಮುಚ್ಚಲು ಹೊರಟಿತು. ಈ ನಡೆಯನ್ನು ಎಐಡಿಎಸ್‌ಓ ನೇತೃತ್ವದಲ್ಲಿ ರಾಜ್ಯದ ವಿದ್ಯಾರ್ಥಿ ಸಮೂಹವು ತೀವ್ರವಾಗಿ ಪ್ರತಿರೋಧಿಸಿತು.

"ಒಂದು ವೇಳೆ ಬಡವರು ಶಿಕ್ಷಣದ ಬಳಿ ಬರದಿದ್ದರೆ, ಅವರು ಉಳುವ ಹೊಲಗಳಿಗೆ, ದುಡಿವ ಕಾರ್ಖಾನೆಗಳಿಗೆ, ಹೀಗೆ ಶಿಕ್ಷಣವೇ ಎಲ್ಲೆಡೆ ತಲುಪಬೇಕು" ಎಂಬ ವಿವೇಕಾನಂದರ ಆಶಯಗಳನ್ನು ಹೊತ್ತ ಸಾವಿರಾರು ವಿದ್ಯಾರ್ಥಿಗಳು ರೈತರ ಹೊಲಗಳಿಗೆ, ಬಡವರ ಜೋಪಡಿಗಳಿಗೆ, ದೂರದ ಹಳ್ಳಿಗಳಿಗೆ, ಕಾರ್ಮಿಕರ ಕಾರ್ಖಾನೆಗಳಿಗೆ, ಬೀದಿ, ಗಲ್ಲಿ, ಮಾರುಕಟ್ಟೆ, ಬಸ್- ರೈಲ್ವೆ ನಿಲ್ದಾಣ ... ಎಲ್ಲೆಡೆ ನೀರಿನಂತೆ ಹರಿದು ಜನರ ಸಹಿ ಸಂಗ್ರಹಿಸಿದರು. ಸಹಿಸಂಗ್ರಹಕ್ಕಾಗಿ ಬೀದಿಗಿಳಿದ ವಿದ್ಯಾರ್ಥಿಗಳು, ಸಂಜೆ ಕಾಲೇಜು ಮುಗಿಸಿ ರಾತ್ರಿವರೆಗೂ ಜನರನ್ನು ಭೇಟಿ ಮಾಡಿದರು, ಧರಿಸಲು ಚಪ್ಪಲಿ ಇರದೇ ಬರಿಗಾಲದಲ್ಲಿ ಹಳ್ಳಿಯಿಂದ ಹಳ್ಳಿಗೆ ನಡೆದರು, ಬಡವನ ಜೋಪಡಿಯಿಂದ ಹಿಡಿದು ಶ್ರೀಮಂತರ ಮನೆಯ ಬಾಗಿಲುಗಳನ್ನು ತಟ್ಟಿದರು.

ಗೆಳೆಯ-ಗೆಳತಿ, ಅಪ್ಪ-ಅಮ್ಮ, ಅಣ್ಣ-ತಮ್ಮ, ಅಜ್ಜಿ-ತಾತ, ಶಾಲೆಯ ಮೇಷ್ಟ್ರು, ಅಂಗನವಾಡಿ ಅಕ್ಕ, ಊರಿನ ಆಶಾ, ದೇವಸ್ಥಾನದ ಪೂಜಾರಿ ಎಲ್ಲರನ್ನೂ ಈ ವಿದ್ಯಾರ್ಥಿಗಳು ಹೋರಾಟದ ಭಾಗವಾಗಿಸಿದರು. ಎಲ್ಲರಿಗೂ ಶಿಕ್ಷಣ ದೊರಕಬೇಕೆಂಬ ನಮ್ಮ ದೇಶದ ನವೋದಯ ಚಳುವಳಿಯ ಹರಿಕಾರರಾದ ಈಶ್ವರ ಚಂದ್ರ ವಿದ್ಯಾಸಾಗರ್, ಫುಲೆ ಹಾಗೂ ಸ್ವಾತಂತ್ರ್ಯಸಂಗ್ರಾಮದ ಕ್ರಾಂತಿಕಾರಿಗಳಾದ ಭಗತ್ ಸಿಂಗ್, ನೇತಾಜಿ ಮುಂತಾದವರ ಆಶಯಗಳನ್ನು ಹೊತ್ತು ಸಹಿ ಸಂಗ್ರಹಿಸಲು ಬಂದ ವಿದ್ಯಾರ್ಥಿಗಳನ್ನು ಜನರು ಪ್ರೀತಿಯಿಂದ ಬರಮಾಡಿಕೊಂಡು ಸಹಿ ನೀಡಿದರು. ಸಾರ್ವಜನಿಕ ಶಿಕ್ಷಣವನ್ನು ಉಳಿಸುವ ಈ ಹೋರಾಟದಲ್ಲಿ ಭಾಗಿಯಾದ ಜನಸಾಮಾನ್ಯರು ಫಾರ್ಮ್‌ಗಳನ್ನು ಮುದ್ರಿಸಿ ಕೊಟ್ಟರು, ತಾವೂ ವಿದ್ಯಾರ್ಥಿಗಳೊಂದಿಗೆ ಸಹಿ ಸಂಗ್ರಹಿಸಿದರು, ಊಟ-ಉಪಹಾರ ನೀಡಿ ಸತ್ಕರಿಸಿದರು. 'ಸರ್ಕಾರವೇ ಶಿಕ್ಷಣವನ್ನು ನಾಶಗೊಳಿಸುತ್ತಿರುವಾಗ, ಶಿಕ್ಷಣವನ್ನು; ತನ್ಮೂಲಕ ಮಾನವತೆಯನ್ನು ಉಳಿಸುವ ನಿಮ್ಮ ಹೋರಾಟ ಯಶಸ್ವಿಯಾಗಲಿ' ಎಂದು ಜನರು ಮನದುಂಬಿ ಹರಸಿದರು. ವಿದ್ಯಾರ್ಥಿಗಳ ಈ ಮಹತ್ಕಾರ್ಯಕ್ಕೆ ಪಾಲಕರು ಹಾಗೂ ಶಿಕ್ಷಕರು ಬೆನ್ನೆಲುಬಾಗಿ ನಿಂತರು. ತತ್ಪರಿಣಾಮ, 40 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಸ್ವಯಂಸೇವಕರಾಗಿ, ರಾಜ್ಯದ ಜನತೆಯಿಂದ 36 ಲಕ್ಷಕ್ಕೂ ಹೆಚ್ಚು ಸಹಿ ಸಂಗ್ರಹಿಸಿ ಎನ್‌ಈಪಿ-2020ರ ಹೇರಿಕೆಯ ವಿರುದ್ಧ ಪ್ರಬಲ ಪ್ರತಿರೋಧವೊಡ್ಡಿದರು. ಸೆಪ್ಟೆಂಬರ್ 28 ಭಗತ್ ಸಿಂಗರ ಜನ್ಮದಿನದಂದು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಸೇರಿದ ಸಾವಿರಾರು ವಿದ್ಯಾರ್ಥಿಗಳು, 'ಎನ್‌ಈಪಿ-2020ನ್ನು ತೊಲಗಿಸಿ- ಸಾರ್ವಜನಿಕ ಶಿಕ್ಷಣ ಉಳಿಸಿ -ಮಾನವತೆ ಉಳಿಸಿ' ಘೋಷಣೆಗಳೊಂದಿಗೆ ಜನರ ಸಹಿಗಳನ್ನು ಸರ್ಕಾರಕ್ಕೆ ತಲುಪಿಸಿದರು.

ಈ ಹೋರಾಟದ ಕಾವಿನಿಂದ ಎನ್‌ಈಪಿ-2020 ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲಿ ಚರ್ಚೆಯ ವಿಷಯವಾಯಿತು. ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಈ ನೀತಿಯನ್ನು ಹಿಂಪಡೆಯುವುದಾಗಿ ಘೋಷಿಸಿತು. ಈ ಪ್ರಯುಕ್ತ ರಾಜ್ಯ ಸರ್ಕಾರವು ನೇಮಿಸಿದ ಸಮಿತಿಯನ್ನು ಹಲವು ಬಾರಿ ಸಂಧಿಸಿ ರಾಜ್ಯದಲ್ಲಿ, ವಿದ್ಯಾರ್ಥಿಗಳು, ಪಾಲಕರು, ಶಿಕ್ಷಕರು ಹಾಗೂ ತಜ್ಞರ ಅಭಿಪ್ರಾಯವನ್ನು ಸಂಗ್ರಹಿಸಿ 'ಜನಪರ ಶಿಕ್ಷಣ ನೀತಿ'ಯೊಂದನ್ನು ರೂಪಿಸುವಂತೆ ಎಐಡಿಎಸ್‌ಓ ಆಗ್ರಹಿಸಿತು. ರಾಜ್ಯದ ನಾಲ್ಕು ಕಂದಾಯ ವಲಯಗಳಲ್ಲಿ ನಡೆದ ಸಮಿತಿಯ ಸಭೆಗಳಲ್ಲಿ ರಾಜ್ಯದ ವಿದ್ಯಾರ್ಥಿಗಳ ಪ್ರಾತಿನಿಧ್ಯ ವಹಿಸಿ ಎಐಡಿಎಸ್‌ಓ ಭಾಗವಹಿಸಿತು. ಎನ್‌ಈಪಿ-2020ರ ಕರಾಳ ಅಂಶಗಳು, ಸರ್ಕಾರಿ ಶಾಲಾ -ಕಾಲೇಜುಗಳ ಪರಿಸ್ಥಿತಿ, ನಾಲ್ಕು ವರ್ಷದ ಪದವಿಯಲ್ಲಿರುವ ತಾರತಮ್ಯ ಸೇರಿದಂತೆ ಇಂದಿನ ಶೈಕ್ಷಣಿಕ ವ್ಯವಸ್ಥೆಯ ಜ್ವಲಂತ ಸಮಸ್ಯೆಗಳು ಹಾಗೂ ಶಿಕ್ಷಣದ ಮೂಲಭೂತ ಅವಶ್ಯಕತೆಗಳ ಕುರಿತು ಸಮಿತಿಯ ಸದಸ್ಯರ, ಶಿಕ್ಷಣತಜ್ಞರ, ಪ್ರಾಂಶುಪಾಲರ ಮತ್ತು ಉಪನ್ಯಾಸಕರ ಗಮನ ಸೆಳೆಯಲಾಯಿತು. ಜನಪರ ಶಿಕ್ಷಣ ನೀತಿಗಾಗಿ ರಾಜ್ಯವ್ಯಾಪಿ ಸಮೀಕ್ಷೆ ನಡೆಸಿ ವಿದ್ಯಾರ್ಥಿಗಳ ಅಭಿಪ್ರಾಯವನ್ನು ಸಂಗ್ರಹಿಸಲಾಯಿತು. 'ಶಿಕ್ಷಣದ ಆರ್ಥಿಕ ಜವಾಬ್ದಾರಿಯನ್ನು ಸರ್ಕಾರವೇ ವಹಿಸಬೇಕು', 'ನಾಲ್ಕು ವರ್ಷದ ಪದವಿ ಕೈ ಬಿಟ್ಟು ಮೂರು ವರ್ಷಕ್ಕೆ ಸೀಮಿತಗೊಳಿಸಬೇಕು', 'ಪಠ್ಯಕ್ರಮದಲ್ಲಿ ಸ್ವಾತಂತ್ರ ಸಂಗ್ರಾಮದ ಕ್ರಾಂತಿಕಾರಿಗಳ ಕುರಿತು ವಿಷಯಗಳನ್ನು ಸೇರಿಸಬೇಕು' ಎಂಬ ಅಂಶಗಳು ಸೇರಿದಂತೆ, ಒಟ್ಟಾರೆಯಾಗಿ ಶಿಕ್ಷಣವು ವೈಜ್ಞಾನಿಕ, ಧರ್ಮನಿರಪೇಕ್ಷ ಹಾಗೂ ಪ್ರಜಾತಾಂತ್ರಿಕ ಮೌಲ್ಯಗಳಿಂದ ಕೂಡಿರಬೇಕು ಎಂಬ ಅಭಿಪ್ರಾಯವನ್ನು ವಿದ್ಯಾರ್ಥಿಗಳು ನೀಡಿದರು. 25 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಭಿಪ್ರಾಯ ನೀಡಿದ ಸಮೀಕ್ಷೆಯ ವರದಿಯನ್ನು ಸರ್ಕಾರದ ರಾಜ್ಯ ಶಿಕ್ಷಣ ನೀತಿ ಆಯೋಗಕ್ಕೆ ಸಲ್ಲಿಸಲಾಯಿತು. ಎಐಡಿಎಸ್‌ಓ ನೇತೃತ್ವದಲ್ಲಿ ರಾಜ್ಯದ ವಿದ್ಯಾರ್ಥಿಗಳ ಎರಡು ವರ್ಷಗಳ ಅವಿರತ ಸಂಘರ್ಷದ ಫಲದಿಂದ ಎನ್‌ಈಪಿ-2020ರ ಅಂಶಗಳಲ್ಲೊಂದಾದ 4 ವರ್ಷದ ಪದವಿಯನ್ನು ರಾಜ್ಯ ಸರ್ಕಾರವು ಹಿಂಪಡೆದಿದೆ.

ಸ್ವಾತಂತ್ರ ಸಂಗ್ರಾಮದ ಕ್ರಾಂತಿಕಾರಿ ಹಾಗೂ ಈ ಯುಗದ ಓರ್ವ ಮಾರ್ಕ್ಸ್‌ವಾದಿ ಚಿಂತಕರಾದ ಶಿವದಾಸ್ ಘೋಷರ ವಿಚಾರಗಳ ಪ್ರೇರಣೆಯಿಂದ ಸ್ಥಾಪನೆಗೊಂಡಿರುವ ಎಐಡಿಎಸ್‌ಓ, ಅವರ ವೈಚಾರಿಕತೆಯ ಬಲದಿಂದ, ಎನ್‌ಈಪಿ-2020ರ ತಿರುಳನ್ನು ಅರಿತು, ನಾಗರಿಕತೆಯನ್ನು ನಾಶಗೊಳಿಸುವ ಈ ನೀತಿಯ ಕರಾಳತೆಯನ್ನು ಜನಸಮೂಹಕ್ಕೆ ಮನವರಿಕೆ ಮಾಡಿ, ಈ ಐತಿಹಾಸಿಕ ಚಳುವಳಿಯನ್ನು ಮುನ್ನಡೆಸಲು ಸಾಧ್ಯವಾಯಿತು. "ವಿದ್ಯಾರ್ಥಿಗಳು ಮತ್ತು ಯುವಜನರು ತಮ್ಮದೇ ಆದ ಸಂಘಟನೆಯಲ್ಲಿ ಒಂದುಗೂಡುವುದನ್ನು ನೋಡಲು, ಈ ದೇಶದ ಕೆಲವರು ಇಚ್ಛೆಪಡದಿರಬಹುದು. ಆದರೆ, ಈ ತರಹದ ಅಭಿಪ್ರಾಯಗಳು ಅಥವಾ ವರ್ತನೆಗಳು ಸಂಪೂರ್ಣವಾಗಿ ತಪ್ಪು ಎಂದು ನಾನು ನಂಬುತ್ತೇನೆ, ಇನ್ನಾವುದೇ ಜನರಂತೆ ವಿದ್ಯಾರ್ಥಿಗಳಿಗೂ ತಮ್ಮದೇ ಆದ ಹಕ್ಕುಗಳಿರಬೇಕು, ಸ್ವಾಭಿಮಾನಿ ಮಹಿಳೆಯರು ಮತ್ತು ಪುರುಷರಾಗಿ ಅವರು ಜೀವನ ನಡೆಸಬೇಕು. ಸಮಯ ಬಂದಾಗ ಸ್ವಾಭಿಮಾನಿ ವಿದ್ಯಾರ್ಥಿಗಳು, ಶೈಕ್ಷಣಿಕ ಅಧಿಕಾರಿಗಳೊಂದಿಗೆ ಮತ್ತು ಸರ್ಕಾರದೊಂದಿಗೆ ಕೂಡ ಸಂಘರ್ಷಕ್ಕೆ ಇಳಿಯಬೇಕು. ಅಂತಹ ಪರಿಸ್ಥಿತಿಯಲ್ಲಿ, ನಿಶ್ಚಯವಾಗಿ ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವುದೇ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದದ್ದು." ಎಂಬ ಮಹಾನ್ ನೇತಾಜಿಯವರ ಈ ಮಾತುಗಳಂತೆ, ರಾಜ್ಯದ ವಿದ್ಯಾರ್ಥಿಗಳ ಹೋರಾಟದ ಪರಿಣಾಮವೇ ಇಂದಿನ ಯಶಸ್ಸು!! ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಈ ಹೋರಾಟದಲ್ಲಿ ಭಾಗಿಯಾದ ರಾಜ್ಯದ ಪ್ರತಿಯೊಬ್ಬ ವಿದ್ಯಾರ್ಥಿ, ಹೋರಾಟಕ್ಕೆ ಬೆಂಬಲವಾಗಿ ನಿಂತ ಶಿಕ್ಷಕರು-ಪೋಷಕರು, ವಿದ್ಯಾರ್ಥಿಗಳ ನ್ಯಾಯಯುತ ಕೂಗನ್ನು ಎತ್ತಿ ಹಿಡಿದ ಶಿಕ್ಷಣತಜ್ಞರು ಹಾಗೂ ಸಾಹಿತಿಗಳು, ವಿದ್ಯಾರ್ಥಿಗಳ ಮೇಲೆ ಭರವಸೆ ಇಟ್ಟು ಪ್ರೋತ್ಸಾಹಿಸಿ ಸಹಿ ನೀಡಿ ಹೋರಾಟದಲ್ಲಿ ಭಾಗವಹಿಸಿದ ಲಕ್ಷಾಂತರ ರೈತ-ಕಾರ್ಮಿಕರು ಹಾಗೂ ಜನಸಾಮಾನ್ಯರಿಗೆ ಈ ಐತಿಹಾಸಿಕ ವಿಜಯದ ಶ್ರೇಯಸ್ಸು ಸಲ್ಲುತ್ತದೆ.



ವಿದ್ಯಾರ್ಥಿ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಎಐಡಿಎಸ್‌ಓ ಅಖಿಲ ಭಾರತ ಅಧ್ಯಕ್ಷರಾದ ಕಾಂ.ವಿ.ಎನ್. ರಾಜಶೇಖರ್, ವೇದಿಕೆಯ ಮೇಲೆ ಎಐಡಿಎಸ್‌ಓ ರಾಜ್ಯ ನಾಯಕರು

**ಫ್ರೀಡಂ ಪಾರ್ಕಿನಲ್ಲಿ ವಿದ್ಯಾರ್ಥಿಗಳ ವಿಜಯೋತ್ಸವ:**

ಮೇ 18ರಂದು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಈ ಹೋರಾಟದ ವಿಜಯೋತ್ಸವವನ್ನು ಹಮ್ಮಿಕೊಳ್ಳಲಾಯಿತು. ಎಐಡಿಎಸ್‌ಓನ ಅಖಿಲ ಭಾರತ ಅಧ್ಯಕ್ಷರಾದ ವಿ ಎನ್ ರಾಜಶೇಖರ್ ವಿದ್ಯಾರ್ಥಿಗಳನ್ನು ಅಭಿನಂದಿಸಿ, ದೇಶದಲ್ಲೆಡೆ ಎನ್‌ಇಪಿ 2020ನ್ನು ಸಂಪೂರ್ಣವಾಗಿ ಹಿಮ್ಮೆಟಿಸುವವರೆಗೂ ಹೋರಾಟವನ್ನು ಮುಂದುವರಿಸಲು ಕರೆ ನೀಡಿದರು. ರಾಜ್ಯ ಕಾರ್ಯದರ್ಶಿಗಳಾದ ಅಜಯ ಕಾಮತ್ ಮಾತನಾಡಿ, 1986ರ ಶಿಕ್ಷಣ ನೀತಿ (ಎನ್‌ಈಪಿ- 1986)ಯ ಮೂಲಕ ಅಂದಿನ ಕಾಂಗ್ರೆಸ್ ಸರ್ಕಾರವು ಶಿಕ್ಷಣದ ವ್ಯಾಪಾರೀಕರಣದ ದ್ವಾರಗಳನ್ನು ತೆರೆಯಿತು, ವಾಜಪೇಯಿ ನೇತೃತ್ವದ ಬಿಜೆಪಿ ಸರ್ಕಾರವು ಹಂತ ಹಂತವಾಗಿ ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಖಾಸಗೀಕರಣ ಮಾಡಲು ಹೊರಟಿತು, ಮನಮೋಹನ್ ಸಿಂಗ್ ಅವರ ಕಾಂಗ್ರೆಸ್ ಸರ್ಕಾರವು ಶಿಕ್ಷಣದ ಆರ್ಥಿಕ ಜವಾಬ್ದಾರಿಯನ್ನು ಸರ್ಕಾರ ವಹಿಸಬಾರದೆಂದು ಹೇಳಿತು. ಇವೆಲ್ಲದರ ಮುಂದುವರಿಕೆಯಾಗಿ, ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಎನ್‌ಇಪಿ-2020ನ್ನು ಅಪ್ರಜಾತಾಂತ್ರಿಕವಾಗಿ ದೇಶದ ಮೇಲೆ ಹೇರಿದೆ. ಈಗ ಕರ್ನಾಟಕದಲ್ಲಿ ವಿದ್ಯಾರ್ಥಿ ಚಳುವಳಿಯ ಪ್ರಭಾವದಿಂದ ಕಾಂಗ್ರೆಸ್ ಸರ್ಕಾರವು ಈ ನೀತಿಯನ್ನು ಹಿಂಪಡೆದಿದೆ ಎಂದು ಹೇಳಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಎಐಡಿಎಸ್‌ಓನ ರಾಜ್ಯ ಅಧ್ಯಕ್ಷರಾದ ಅಶ್ವಿನಿ ಕೆ.ಎಸ್., ಎನ್‌ಇಪಿ-2020ರ ವಿರುದ್ಧ ಹೋರಾಟ ಮತ್ತು ವಿಜಯದಿಂದ ಸ್ಫೂರ್ತಿ ಪಡೆದು, ಮುಂಬರುವ ಸವಾಲುಗಳನ್ನು ಎದುರಿಸಿ ಬಲಿಷ್ಠ ಹೋರಾಟಗಳನ್ನು ಸಂಘಟಿಸಲು ಕ್ರಾಂತಿಕಾರಿಗಳಾದ ಭಗತ್ ಸಿಂಗ್, ನೇತಾಜಿ ಹಾಗೂ ಕಾಮ್ರೇಡ್ ಶಿವದಾಸ್ ಘೋಷರ ಚಿಂತನೆಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕೆಂದು ಕರೆ ನೀಡಿದರು. ರಾಜ್ಯ ಉಪಾಧ್ಯಕ್ಷರಾದ ಅಭಯಾ ದಿವಾಕರ್, ಹನುಮಂತು ಎಸ್ ಹೆಚ್, ಚಂದ್ರಕಲಾ, ಅಪೂರ್ವಾ, ಖಜಾಂಚಿಗಳಾದ ಸುಭಾಷ್ ಬಿ ಜೆ, ಕಚೇರಿ ಕಾರ್ಯದರ್ಶಿ ಮಹಾಂತೇಶ್ ಸೇರಿದಂತೆ ಎಐಡಿಎಸ್‌ಓನ ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳು ವಿಜಯೋತ್ಸವದಲ್ಲಿ ಪಾಲ್ಗೊಂಡರು.

**ಮುಂದಿನ ದಾರಿ:**

ಅವಿರತ ಸಂಘರ್ಷದಿಂದ ಈ ಜಯವು ಲಭಿಸಿದೆ. ಆದರೆ ವಿದ್ಯಾರ್ಥಿಗಳ ಮುಂದಿನ ಸವಾಲುಗಳು ಇಲ್ಲಿಗೇ ಕೊನೆಗೊಂಡಿಲ್ಲ. ರಾಜ್ಯದ ಹಲವು ಶಾಲಾ-ಕಾಲೇಜುಗಳಲ್ಲಿ ಉಪನ್ಯಾಸಕರು- ಕಟ್ಟಡ ಸೇರಿದಂತೆ ಮೂಲಭೂತ ಅವಶ್ಯಕತೆಗಳ ಕೊರತೆ ಇದೆ, ಹಾಸ್ಟೆಲ್, ವಿದ್ಯಾರ್ಥಿವೇತನದಂತಹ ಸೌಕರ್ಯಗಳು ಸರಿಯಾಗಿ ವಿದ್ಯಾರ್ಥಿಗಳಿಗೆ ದೊರಕಬೇಕಿದೆ. ಆರ್ಥಿಕ ಸ್ವಾಯತ್ತ ಸಂಸ್ಥೆಗಳು ಕೊನೆಗೊಂಡು ಸರ್ಕಾರವೇ ಸಂಪೂರ್ಣ ಜವಾಬ್ದಾರಿ ತೆಗೆದುಕೊಳ್ಳಬೇಕಿದೆ, ಈ ನಿಟ್ಟಿನಲ್ಲಿ ಬಜೆಟ್ ನಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಅನುದಾನದ ಅವಶ್ಯಕತೆಯಿದೆ. ಒಟ್ಟಾರೆಯಾಗಿ, ಈ ಜಯದಿಂದ ಸ್ಫೂರ್ತಿ ಪಡೆದು, ನಮ್ಮ ಶೈಕ್ಷಣಿಕ ವ್ಯವಸ್ಥೆಯು ಎದುರಿಸುತ್ತಿರುವ ಎಲ್ಲ ಸಮಸ್ಯೆಗಳ ವಿರುದ್ಧ ನಾವು ಬಲಿಷ್ಠ ಹೋರಾಟಗಳನ್ನು ಕಟ್ಟಿ ಬೆಳೆಸಬೇಕಿದೆ. "....ಶಿಕ್ಷಣವು ಸಾರ್ವತ್ರಿಕವಾಗಿರಬೇಕು ಮತ್ತು ಅದೆಷ್ಟೇ ಹೆಚ್ಚಿನ ಸಂಖ್ಯೆ ಇದ್ದರೂ ಸಹ, ಅದು ಎಲ್ಲರಿಗೂ ತಲುಪುವಂತಿರಬೇಕು, ಹಾಗೂ ಇನ್ನು ಮೇಲೆ ಇದು ಸಾಧ್ಯವಾಗುತ್ತದೆ ಎಂದು ನಾನು ನಂಬಿದ್ದೇನೆ." ಎಂದು ಹೇಳಿದ ಮಹಾತ್ಮ ಫುಲೆಯವರ ಈ ಆಶಯವು ಸಾಕಾರಗೊಳ್ಳಬೇಕೆಂದರೆ, ವಿದ್ಯಾಸಾಗರ್, ರಾಜಾರಾಮ್ ಮೋಹನ್ ರಾಯ್ ರಂತಹ ನವೋದಯದ ಹರಿಕಾರರ ಹಾಗೂ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿಗಳಾದ ಭಗತ್ ಸಿಂಗ್, ನೇತಾಜಿಯವರ ಹೋರಾಟದ ಪತಾಕೆಯನ್ನು ವಿದ್ಯಾರ್ಥಿಗಳು ಹಿಡಿದು ಮುನ್ನಡೆಯಬೇಕಿದೆ. ಈ ಮೂಲಕ ಅವರ ನೈಜ ಉತ್ತರಾಧಿಕಾರಿಗಳಾಗಿ ಅವರ ಕನಸಿನ ಭಾರತವನ್ನು ನಿರ್ಮಿಸುವ ಸಂಕಲ್ಪವನ್ನು ತೊಡುವ ಜವಾಬ್ದಾರಿ ರಾಜ್ಯದ ವಿದ್ಯಾರ್ಥಿಗಳ ಮೇಲಿದೆ. ■

> "ತನ್ನ ಕಣ್ಣೆದುರೇ ಅನ್ಯಾಯ ನಡೆಯುತ್ತಿದ್ದರೂ ಅದನ್ನು ತಡೆಯಲು ಪ್ರಯತ್ನಿಸದ ವ್ಯಕ್ತಿಯೊಬ್ಬ ತನ್ನ ಮಾನವ ಸತ್ವಕ್ಕೆ ಮಾತ್ರವಲ್ಲದೆ, ತುಳಿತಕ್ಕೊಳಗಾದ ಪ್ರತಿಯೊಬ್ಬರ ಮಾನವ ಸತ್ವಕ್ಕೆ ಅಪಮಾನ ಎಸಗುತ್ತಾನೆ. ಅನ್ಯಾಯವಾಗದಂತೆ ತಡೆಯುವ ಪ್ರಯತ್ನದಲ್ಲಿ ತನ್ನ ಜೀವನವನ್ನೇ ಅಪಾಯಕ್ಕೆ ಒಡ್ಡಿಕೊಳ್ಳುವ,ಜೈಲು ಸೇರುವ ಅಥವಾ ಕಿರುಕುಳ ಅನುಭವಿಸುವ ವ್ಯಕ್ತಿಯೊಬ್ಬನು, ಆ ತ್ಯಾಗ ಮತ್ತು ಬಲಿದಾನದ ಮೂಲಕ ಮಾನವಸತ್ವದ ಹೆಮ್ಮೆಯ ಸ್ಥಾನವನ್ನು ಪಡೆಯುತ್ತಾನೆ. ಶಾಲೆ,ಕಾಲೇಜು,ಬೀದಿ,ಮನೆ ಸೇರಿದಂತೆ ಯಾವುದೇ ಜಾಗದಲ್ಲಿ ದಬ್ಬಾಳಿಕೆ, ಅನ್ಯಾಯ ಮತ್ತು ದುರ್ನಡತೆ ಕಂಡುಬಂದರೂ ಅದರ ವಿರುದ್ಧ ಧೈರ್ಯವಾಗಿ ಧ್ವನಿಯೆತ್ತಿ. ನನ್ನ ಈ ಸಾಧಾರಣ ಬದುಕಿನಲ್ಲಿ ನಾನೇನಾದರೂ ಸ್ಥೈರ್ಯವನ್ನು ಪಡೆಯಲು ಸಾಧ್ಯವಾಗಿದ್ದರೆ, ಅದು ಈ ಪ್ರಕ್ರಿಯೆಯ ಮೂಲಕ ಮಾತ್ರವೇ!"
>
> - ನೇತಾಜಿ ಸುಭಾಷ್ ಚಂದ್ರ ಬೋಸ್

## ಗ್ರಾಮೀಣ ಕ್ರೀಡಾ ಕೂಟ



ರಾಯಚೂರು ಜಿಲ್ಲೆಯ ಮಸ್ಲಲಾಪುರ ಗ್ರಾಮದಲ್ಲಿ ಎಐಡಿವೈಓ ಸಂಘಟಿಸಿದ ಗ್ರಾಮೀಣ ಕ್ರೀಡಾ-ಕೂಟದ ಒಂದು ರೋಮಾಂಚಕ ದೃಶ್ಯ

## ಸಂಗೀತ ಕಾರ್ಯಾಗಾರ




ಯುವ ಸಂಘಟನಾಕಾರರಿಗೆ ಬಳ್ಳಾರಿಯಲ್ಲಿ ಎಐಡಿವೈಓ ಏರ್ಪಡಿಸಿದ್ದ ಸಂಗೀತ ಕಾರ್ಯಾಗಾರದಲ್ಲಿ ಮಾತನಾಡುತ್ತಿರುವ ರಾಜ್ಯ ಅಧ್ಯಕ್ಷರಾದ ಕಾಂ.ಶರಣಪ್ಪ ಉದ್ಬಾಳ್. ಜಾನಪದ ಅಕಾಡೆಮಿ ಸದಸ್ಯರಾದ, ಗಾಯಕ ದೇವಾನಂದ ವರಪ್ರಸಾದ್ (ಮಧ್ಯದಲ್ಲಿ ಕುಳಿತಿರುವವರು) ಅವರು ಇದನ್ನು ನಡೆಸಿಕೊಟ್ಟರು.

# ಜನಸಂಖ್ಯಾ ಏರಿಕೆಗೆ ಮುಸಲ್ಮಾನ ಸಮುದಾಯ ಹೊಣೆ ಎಂಬ ಸುಳ್ಳು ಆರೋಪ!

2024ರ ಫೆಬ್ರವರಿ 1ರಂದು ಕೇಂದ್ರ ವಿತ್ತ ಸಚಿವೆ, 'ಜನಸಂಖ್ಯೆಯ ಬೆಳವಣಿಗೆ ಮತ್ತು ಜನಸಂಖ್ಯೆಯಲ್ಲಿನ ಬದಲಾವಣೆಗಳು ತಂದೊಡ್ಡಿರುವ ಸವಾಲುಗಳನ್ನು ಅಧ್ಯಯನ ಮಾಡಲು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗುವುದು' ಎಂದು ಬಜೆಟ್ ಮಂಡಿಸುತ್ತಾ ಹೇಳಿದರು. 2019ರಲ್ಲಿ ಕೆಂಪುಕೋಟೆಯ ಮೇಲಿನಿಂದ ಸ್ವಾತಂತ್ರ್ಯ ದಿನದ ಅಂಗವಾಗಿ ಮಾತನಾಡಿದ ಪ್ರಧಾನಿ ಮೋದಿ, 'ಜನಸಂಖ್ಯಾ ಸ್ಫೋಟದ ಕುರಿತು ಆತಂಕಗೊಳ್ಳುವ ಅಗತ್ಯವಿದೆ' ಎಂದಿದ್ದರು. 2017ರ ಸೆಪ್ಟೆಂಬರ್‌ನಲ್ಲಿ ಅಸ್ಸಾಂ ರಾಜ್ಯದ ಬಿಜೆಪಿ ಸರ್ಕಾರವು' 'ಜನಸಂಖ್ಯೆ ಮತ್ತು ಮಹಿಳಾ ಸಬಲೀಕರಣ ನೀತಿಯನ್ನು ಜಾರಿಗೊಳಿಸುವ ಮೂಲಕ, 'ನಮ್ಮ ಪ್ರಾಥಮಿಕ ಆದ್ಯತೆಯಾದ ಅಸ್ಸಾಂನ ಎಲ್ಲಾ ಜನರ ಉತ್ತಮಮಟ್ಟದ ಬದುಕಿನ ಖಾತ್ರಿ ಯೋಜನೆಗೆ ವೇಗವಾಗಿ ಬೆಳೆಯುತ್ತಿರುವ ಜನಸಂಖ್ಯೆಯು ಅಡ್ಡಗಾಲು ಹಾಕಿದೆ' ಎಂದು ಘೋಷಿಸಿತ್ತು. 2021ರ ಜುಲೈನಲ್ಲಿ ಉತ್ತರಪ್ರದೇಶದ ಬಿಜೆಪಿ ಸರ್ಕಾರವು, "ಜನಸಂಖ್ಯಾ ನಿಯಂತ್ರಣ ಮಸೂದೆಯನ್ನು ಸಾರ್ವಜನಿಕರ ಮುಂದೆ ಇಟ್ಟು, 'ಅಸಮಾನತೆಯೂ ಸೇರಿದಂತೆ ಎಲ್ಲಾ ದೊಡ್ಡ ಸಮಸ್ಯೆಗಳ ಮೂಲದಲ್ಲಿ ಜನಸಂಖ್ಯೆಯ ಬೆಳವಣಿಗೆ ಇದೆ. ಜನಸಂಖ್ಯಾ ನಿಯಂತ್ರಣವೇ ಮುಂದುವರಿದ ಸಮಾಜದ ಸ್ಥಾಪನೆಗೆ ಇರುವ ಪ್ರಾಥಮಿಕ ನಿಬಂಧನೆ" ಎಂದು ಪ್ರಚಾರ ಮಾಡಿತ್ತು.

ಈ ಮಾತುಗಳೆಲ್ಲ ವಾಸ್ತವದೊಂದಿಗೆ ತಾಳೆ ಆಗುತ್ತವೆಯೇ? ವಿಪರೀತ ಸಂಕಷ್ಟದ ನಡುವೆ ಯಾತನಾಮಯ ಬದುಕನ್ನು ನಡೆಸುತ್ತಿರುವ ಕೋಟ್ಯಂತರ ಜನರ ಬದುಕಿನ ಸಮಸ್ಯೆಗಳಿಗೆ ಮತ್ತು ಏರುತ್ತಿರುವ ಅಸಮಾನತೆಗೆ, ಉತ್ತಮ ಗುಣಮಟ್ಟದ ಬದುಕನ್ನು ಪಡೆಯಲು ಹೆಣಗಾಡುತ್ತಿರುವ ಜನರ ದು:ಖ-ದುಮ್ಮಾನಗಳಿಗೆ ಜನಸಂಖ್ಯೆಯ ಬೆಳವಣಿಗೆ ನಿಜವಾಗಿಯೂ ಹೊಣೆಯೇ? ಅಥವಾ ಇಂತಹ ಪ್ರಚಾರದ ಹಿಂದೆ ಇನ್ನಾವುದಾದರೂ ಹುನ್ನಾರವಿದೆಯೇ?

ಆರೆಸ್ಸೆಸ್ ಮುಖಂಡ ಮೋಹನ್ ಭಾಗವತ್, ಆಗ್ರಾ ಕಾಲೇಜಿನಲ್ಲಿ ನೆರೆದಿದ್ದ ಯುವ ಜೋಡಿಗಳ ಸಭೆಯೊಂದನ್ನು ಉದ್ದೇಶಿಸಿ, "ಭಾರತದಲ್ಲಿ ಹಿಂದೂಗಳ ಬೆಳವಣಿಗೆಯ ದರ 2.1 ಹಾಗೂ ಮುಸಲ್ಮಾನರದ್ದು 5.2 ಇದೆ. ಪರಿಸ್ಥಿತಿ ಹೀಗೆಯೇ ಇದ್ದರೆ 50 ವರ್ಷ ಕಳೆಯುವುದರ ಹೊತ್ತಿಗೆ ನಮ್ಮ ಹಿಂದೂ ರಾಷ್ಟ್ರದ ಗತಿ ಏನಾಗುತ್ತದೆ? ಇದು ಮುಸಲ್ಮಾನ ದೇಶವಾಗುವುದಿಲ್ಲವೇ?" ಎಂದು ಅಬ್ಬರಿಸಿದ್ದರು. 2022ರ ಡಿಸೆಂಬರ್ 5ರಂದು ದಸರಾ ಉತ್ಸವದ ಸಂದರ್ಭದಲ್ಲಿ, ಭಾಗವತ್ ಮತ್ತೊಮ್ಮೆ, ಧರ್ಮಾಧಾರಿತ ಅಸಮತೋಲನ ಮತ್ತು ಬಲವಂತದ ಮತಾಂತರಗಳ ಬಗ್ಗೆ ಮಾತಾಡಿದ್ದರು. 2017ರಲ್ಲಿ ಅಸ್ಸಾಂನ ವಿತ್ತ ಸಚಿವರಾಗಿದ್ದ ಮತ್ತು ಈಗ ಪ್ರಸಕ್ತ ಮುಖ್ಯಮಂತ್ರಿ ಆಗಿರುವ ಹಿಮಂತ ಬಿಸ್ವ ಶರ್ಮ, "ಹಿಂದೂಗಳ ಸಂಖ್ಯೆಯು ಕಡಿಮೆಯಾಗುತ್ತಿದೆ ಮತ್ತು ಅಲ್ಪಸಂಖ್ಯಾತರ ಸಂಖ್ಯೆ ತೀವ್ರವಾಗಿ ಏರಿದೆ ಎಂದು ಜನಗಣತಿ ವರದಿ ತೋರಿಸಿದೆ. ನಾವು ಮೂಲನಿವಾಸಿಗಳ ಹಕ್ಕುಗಳನ್ನು ಕಾಪಾಡಬೇಕು. ಅಲ್ಪಸಂಖ್ಯಾತರ ಸಂಖ್ಯೆಯ ಹೆಚ್ಚಳವು ತಂದಿರುವ ಬದಲಾವಣೆಗಳು ಆತಂಕವನ್ನುಂಟು ಮಾಡುತ್ತವೆ" ಎನ್ನುವಂತಹ ತಿರುಳು ಹೊಂದಿದ್ದ ಗೊತ್ತುವಳಿಯೊಂದನ್ನು ಮಂಡಿಸಿದ್ದರು. ಉತ್ತರಪ್ರದೇಶದ ಬಿಜೆಪಿ ಸರ್ಕಾರದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಇದೇ ವಿಷಯದಲ್ಲಿ ಅಸ್ಸಾಂನ ಬಿಜೆಪಿ ಮುಖ್ಯಮಂತ್ರಿಯ ಜೊತೆ ದನಿಗೂಡಿಸಿ, ಅಲ್ಪಸಂಖ್ಯಾತರ ಜನಸಂಖ್ಯೆಯಲ್ಲಿನ ಏರಿಕೆಯ ಮೇಲೆ ನಿಯಂತ್ರಣ ಹೇರಿ 'ಸಮತೋಲನ'ವನ್ನು ಕಾಪಾಡುವ ಶಪಥ ಮಾಡಿದ್ದರು. ಹಿಂದೆ ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗಿನಿಂದ ಪ್ರಧಾನಿ ಮೋದಿ ಮಾತಿನ ವರಸೆ ಇದೇ ಆಗಿದೆ.

ಆರ್‌ಎಸ್‌ಎಸ್-ಬಿಜೆಪಿ ಮುಖಂಡರ ಮಾತುಗಳಲ್ಲಿ ಏನಿದೆ? ಜನಸಂಖ್ಯೆಯ ಏರಿಕೆಗೆ ಮುಖ್ಯವಾಗಿ ಇಸ್ಲಾಂನ ಅನುಯಾಯಿ ಸಮುದಾಯಗಳೇ ಕಾರಣ ಎನ್ನುವ ಕಡು ಕೋಮುವಾದಿ ಪ್ರಚಾರ ಮತ್ತು ಅಲ್ಪಸಂಖ್ಯಾತ ವಿರೋಧಿ ದ್ವೇಷ – ಇವೆರಡನ್ನೂ ಉದ್ದೀಪನಗೊಳಿಸುವ ಕುತಂತ್ರ ಕಾಣುತ್ತದೆ.

### ಕಟ್ಟುಕತೆಯ ಸಿದ್ಧಾಂತದ ಭಂಡ ಸಮರ್ಥನೆ

ಹಿಂದುತ್ವ ಗುಂಪುಗಳು ತಮ್ಮ ಭಂಡ ವಾದಗಳ ಜೊತೆಯಲ್ಲಿ ಮುಂದಿಡುವ ಬೇಕಾಬಿಟ್ಟಿ ಮಾತುಗಳಿಗೆ ಯಾವುದೇ ಸಾಕ್ಷ್ಯ ಲಭ್ಯವಿಲ್ಲ ಎಂಬುದು ಹಗಲಿನಷ್ಟೇ ಸತ್ಯ. ಖ್ಯಾತ ಆಂಗ್ಲ ಲೇಖಕ ಮಾರ್ಕ್ ಟ್ವೈನ್ ಹೇಳಿದ ಅಜರಾಮರ ಮಾತು, 'ಸುಳ್ಳು ಅರ್ಧ ವಿಶ್ವವನ್ನು ಸುತ್ತಿ ಬರುವಷ್ಟರಲ್ಲಿ ಸತ್ಯವು ಇನ್ನೂ ಮೆಟ್ಟನ್ನು ಹಾಕಿಕೊಳ್ಳುತ್ತಿರುತ್ತದೆ' ಇಲ್ಲಿ ನೆನಪಾಗುತ್ತದೆ. 2011ರಲ್ಲಿ ನಮ್ಮ ದೇಶದ ಕೊನೆಯ ಜನಗಣತಿ ನಡೆದಿದ್ದು ಎನ್ನುವುದು ಇಲ್ಲಿ ಮೊದಲ ಸಂಗತಿ. ನಂತರ 2021ರಲ್ಲಿ ನಡೆಯಬೇಕಾಗಿದ್ದ ಜನಗಣತಿಯನ್ನು ಕಳೆದ 3 ವರ್ಷಗಳಿಂದ ಹಲವು ಬಾರಿ ಹಲವು ರೀತಿಯ ನೆಪಗಳನ್ನು ಮುಂದುಮಾಡಿ ಮುಂದೂಡಲಾಗುತ್ತಲೇ ಇದೆ. 1881ರಿಂದ ಈ ದೇಶದಲ್ಲಿ ಒಮ್ಮೆಯೂ ತಪ್ಪದೇ ನಡೆದಿದ್ದ ಜನಗಣತಿಯು ಕೋವಿಡ್ ಕಾಲದ ನಂತರದಲ್ಲಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಆಡಳಿತದಡಿಯಲ್ಲಿ ಮೊದಲ ಬಾರಿಗೆ ಅಮಾನತು ಆಗಿರುವುದನ್ನು ನಾವು ಗಮನಿಸಬೇಕು. ದೇಶದ ಭವಿಷ್ಯಕ್ಕೆ ಮಹತ್ವದ್ದಾಗಿರುವ ಜನಗಣತಿಯನ್ನು ನಡೆಸದ ಸರ್ಕಾರವು ಈಗ 'ಜನಸಂಖ್ಯಾ ಏರಿಕೆ'ಯಿಂದಾಗುತ್ತಿರುವ ಅನಾಹುತಗಳನ್ನು ಅಭ್ಯಾಸ ಮಾಡಲು ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡುವ ಮಾತನಾಡುತ್ತಿದೆ. ಇದೆಂತ ವಿಪರ್ಯಾಸ! ಇಂತಹ ಸಮಿತಿ ಸರ್ಕಾರದ ತುತ್ತೂರಿಯನ್ನು ಊದುತ್ತಾ ಸರ್ಕಾರಕ್ಕೆ ಬೇಕಾದ ಹಾಗೆಯೇ ವರದಿಯನ್ನು ನೀಡುವ ಸರ್ಕಾರದ ಪ್ರಚಾರದ ಉಪಕರಣವಾಗುತ್ತದೆ. ಸಂಘ ಪರಿವಾರದ ಅಂಗ ಸಂಸ್ಥೆಗಳು ಈಗ ನಡೆಸುತ್ತಿರುವ ಮುಸಲ್ಮಾನ ವಿರೋಧಿ ದ್ವೇಷ ಪ್ರಚಾರಕ್ಕೆ ಇನ್ನೂ ಹೆಚ್ಚಿನ 'ಶಸ್ತ್ರಾಸ್ತ್ರ'ಗಳನ್ನು ಅದು ಒದಗಿಸಿಕೊಡುತ್ತದೆ.

ಆದರೆ ವಾಸ್ತವವೇನು? ಜನಸಂಖ್ಯೆಯ ಬೆಳವಣಿಗೆ ಕುರಿತಂತೆ ನಿಜವಾದ ಅಂಕಿಅಂಶಗಳನ್ನು ಗಮನಿಸಿದಾಗ ಆಶ್ಚರ್ಯಕರ ಸತ್ಯಗಳು ಕಾಣುತ್ತವೆ. 2011ರ ಜನಸಂಖ್ಯಾ ದತ್ತಾಂಶಗಳ ಪ್ರಕಾರ, ಭಾರತದ ಒಟ್ಟು ಜನಸಂಖ್ಯೆಯಲ್ಲಿ ಹಿಂದೂಗಳು ಶೇ.79.8 ಮತ್ತು ಮುಸಲ್ಮಾನರು ಶೇ.14.2ರಷ್ಟು ಇದ್ದರು. 2001 ಮತ್ತು 2011ರ ನಡುವೆ ಹಿಂದೂ ಮತ್ತು ಮುಸಲ್ಮಾನ ಸಮುದಾಯಗಳ ವಾರ್ಷಿಕ ಬೆಳವಣಿಗೆ ದರಗಳು ಕ್ರಮವಾಗಿ ಶೇ. 1.55 ಮತ್ತು ಶೇ. 2.2 ಇದ್ದವು. ಇದೇ ಕಾಲಘಟ್ಟದಲ್ಲಿ, ಜನಸಂಖ್ಯಾ ಬೆಳವಣಿಗೆ ಕುಸಿತ ದರ(Percentage Point)ವು ಮುಸಲ್ಮಾನರಲ್ಲಿ ಶೇಕಡವಾರು ಪ್ರಮಾಣ(Percentage Point) 4.7 ಇದ್ದರೆ, ಹಿಂದೂಗಳಲ್ಲಿ ಅದು ಶೇಕಡಾವಾರು ಪ್ರಮಾಣ 3.1ರಷ್ಟು (ಮೂಲ: ಇಂಡಿಯನ್ ಎಕ್ಸ್‌ಪ್ರೆಸ್, ಏಪ್ರಿಲ್ 21, 2023, ನವದೆಹಲಿ) ಇದ್ದದ್ದು ಗಮನಾರ್ಹ. ಅಂದರೆ ಮುಸಲ್ಮಾನರ ಜನಸಂಖ್ಯಾ ಪ್ರಮಾಣವು ಇತರ ಎಲ್ಲಾ ಧರ್ಮೀಯರ ಪ್ರಮಾಣಕ್ಕಿಂತ ವೇಗವಾಗಿ ಕಡಿಮೆಯಾಗುತ್ತಿತ್ತು ಎಂಬುದು ಇಲ್ಲಿ ಮುಖ್ಯ ಅಂಶ.

ಎರಡನೆಯದಾಗಿ, ಒಟ್ಟು ಫಲವತ್ತತೆ ದರ(Total Fertility Rate– TFR – ಒಬ್ಬ ಮಹಿಳೆಯು ತನ್ನ ಸಂತಾನೋತ್ಪಾದಕ ವರ್ಷಗಳಲ್ಲಿ ಹೆರುವ ಒಟ್ಟು ಮಕ್ಕಳ ಸಂಖ್ಯೆ)ವು ಜನಸಂಖ್ಯಾ ಏರಿಳಿತಗಳನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುವ ಒಂದು ಬಹುಮುಖ್ಯ ಸೂಚಕವಾಗಿದೆ. ನಮ್ಮ ದೇಶದಲ್ಲಿ 1950ರಲ್ಲಿ 5.9 ಇದ್ದ ಈ ದರವು, 1965ರಲ್ಲಿ 5.7ಕ್ಕೆ ಇಳಿದು, 2001ರ ಹೊತ್ತಿಗೆ 2.9ಕ್ಕೆ ಕುಸಿದು, 2021ರಲ್ಲಿ 2.179ಕ್ಕೆ ಬಂದು ನಿಂತಿತ್ತು. ಅಂದರೆ ಟಿಎಫ್‌ಆರ್ ನಿರಂತರವಾಗಿ ಕುಸಿಯುತ್ತಾ ಸಾಗಿತ್ತು. ವಿಶ್ವದಾದ್ಯಂತ ಜನಸಂಖ್ಯಾ ತಜ್ಞರು 2.1 Replacement Rate (ಮರಳಿಸುವ ದರ– RR) ಜನಸಂಖ್ಯೆಯ ದೃಷ್ಟಿಯಿಂದ ಸಮತೋಲನವನ್ನು ಕಾಪಾಡಿಕೊಳ್ಳಲು ಬಹಳ ಉತ್ತಮವಾದ ಸಂಖ್ಯೆ ಎಂದು ಹೇಳುತ್ತಾರೆ. ಹಾಗಾಗಿ ಭಾರತದ ಪ್ರಸಕ್ತ ಟಿಎಫ್‌ಆರ್, ಅತ್ಯುತ್ತಮ ಆರ್‌ಆರ್ ಮಟ್ಟದಲ್ಲಿ ಇದೆ ಎಂದಾಯಿತು. ಹಾಗಾದರೆ ಜನಸಂಖ್ಯೆಯ ಬಗೆಗಿನ ಈ ಎಚ್ಚರಿಕೆಯ ಹುಸಿಕೂಗು ಏತಕ್ಕಾಗಿ? 1991ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ(National Family Health Survey-NFHS)ಯ ಪ್ರಕಾರ ಭಾರತದಲ್ಲಿ ಮುಸಲ್ಮಾನರಲ್ಲಿನ ಟಿಎಫ್‌ಆರ್ 4.4 ಇತ್ತು ಮತ್ತು ಹಿಂದೂಗಳಲ್ಲಿ ಅದು 3.3 ಇತ್ತು. 2005–06ರ ಮೂರನೇ NFHS ಸಮೀಕ್ಷೆಯ ಹೊತ್ತಿಗೆ ಈ ಎರಡು ಸಮುದಾಯಗಳ ನಡುವಿನ ಟಿಎಫ್‌ಆರ್ ದರವು ಸಂಕುಚಿಸುತ್ತಾ ನಡೆದಿದ್ದು ಕ್ರಮವಾಗಿ ಮುಸಲ್ಮಾನರಲ್ಲಿ ಅದು 3.1ಕ್ಕೂ ಮತ್ತು ಹಿಂದೂಗಳಲ್ಲಿ 2.7ಕ್ಕೂ ಇಳಿದಿತ್ತು. ಅಂದರೆ 14 ವರ್ಷಗಳ ಕಾಲಾವಧಿಯಲ್ಲಿ ಮುಸಲ್ಮಾನರಲ್ಲಿನ ಫಲವತ್ತತೆಯ ದರವು ಶೇ.1.4ರಷ್ಟು ಇಳಿದಿದ್ದರೆ ಹಿಂದೂಗಳಲ್ಲಿ ಅದು ಶೇ.0.6ರಷ್ಟು ಇಳಿದಿತ್ತು ಎಂಬುದು ಗಮನಾರ್ಹ. ಇದು ಮುಸಲ್ಮಾನರ ಒಟ್ಟು ಸಂಖ್ಯೆಯಲ್ಲಿನ ಅತ್ಯಂತ ಮಹತ್ವದ ಇಳಿಕೆಯನ್ನು ಎತ್ತಿ ತೋರಿಸುತ್ತದೆ. ಇನ್ನುಳಿದಂತೆ ಉತ್ತರಪ್ರದೇಶವೂ ಸೇರಿದಂತೆ ದೇಶದ ಎಲ್ಲಾ ರಾಜ್ಯಗಳಲ್ಲೂ ಸಹ ಜನಸಂಖ್ಯಾ ದರವು ನಿರಂತರವಾಗಿ ಇಳಿಕೆಯನ್ನು ದಾಖಲಿಸುತ್ತಿದೆ. ಇದೇ ಧೋರಣೆಯು ಮುಂದುವರಿದಲ್ಲಿ 2030ರ ಹೊತ್ತಿಗೆ ಉತ್ತರಪ್ರದೇಶದಲ್ಲಿಯೂ ಸಹ 'ಜನಸಂಖ್ಯಾ ಮಸೂದೆ'ಯಂತಹ ಯಾವುದೇ ಜನಸಂಖ್ಯಾ ನಿಯಂತ್ರಣ ಕ್ರಮಗಳನ್ನು ಜಾರಿಗೆ ತರದಿದ್ದರೂ ಸಹ ಟಿಎಫ್‌ಆರ್ 2.1ಅನ್ನು ತಲುಪುವುದು ನಿಶ್ಚಿತ. ಇದೇ ಆರೋಗ್ಯಕರ ಆರ್‌ಆರ್ ಸಹ ಆಗಿದೆ. ಆರೆಸ್ಸೆಸ್ ಮತ್ತು ಬಿಜೆಪಿ ಕೈಗೊಂಡಿರುವ 'ಮುಸಲ್ಮಾನರ ಸಂಖ್ಯೆಯು ಹಿಂದೂಗಳನ್ನು ಮೀರಿಸುತ್ತದೆ' ಎಂಬ ದುಷ್ಪ್ರಚಾರದ ಹಿಂದಿನ ಕುತ್ಸಿತ ರಾಜಕೀಯ ಉದ್ದೇಶವು ಬಯಲಾಗಲು ಇಷ್ಟು ಸಾಲದೇ?

### ಬಹುಪತ್ನಿತ್ವದ ಆಚರಣೆ

ಹಿಂದುತ್ವ ಗುಂಪುಗಳು ಮುಸಲ್ಮಾನರಲ್ಲಿ ಇದೆ ಎನ್ನಲಾಗುವ 'ಒಬ್ಬ ಗಂಡಸಿಗೆ ನಾಲ್ವರು ಪತ್ನಿಯರು' ಎಂಬ ಆಚರಣೆಯಿಂದ ಆ ಸಮುದಾಯವೂ 'ಮಕ್ಕಳನ್ನು ಉತ್ಪಾದಿಸುವ ಕಾರ್ಖಾನೆಗಳಾಗಿವೆ' ಎಂದು ಅಸಂಬದ್ಧವಾದ ಮತ್ತು ಅಶ್ಲೀಲವೂ ಆದ ಅತ್ಯಂತ ಸುಳ್ಳಿನ ಕಟ್ಟುಕಥೆಯನ್ನು ಪ್ರಚಾರ ಮಾಡುತ್ತವೆ. ಇದರಲ್ಲಿನ ಸತ್ಯಾಂಶವೇನು? ದಕ್ಷಿಣ ಭಾರತದಲ್ಲಿ ಬಹುಪತ್ನಿತ್ವವು ಹೆಚ್ಚಾಗಿ ಹಿಂದೂಗಳಲ್ಲಿ ಆಚರಣೆಯಲ್ಲಿದೆ. ಶೇ.100ರಷ್ಟು ಮುಸಲ್ಮಾನರಿರುವ ಲಕ್ಷದ್ವೀಪದಲ್ಲಾಗಲೀ ಅಥವಾ ಮುಸಲ್ಮಾನರು ಬಹುಸಂಖ್ಯಾತರಾಗಿರುವ ಜಮ್ಮು-ಕಾಶ್ಮೀರದಲ್ಲಾಗಲಿ ಬಹುಪತ್ನಿತ್ವದ ಪ್ರಮಾಣ ಕ್ರಮವಾಗಿ ಶೇ.0.5 ಹಾಗೂ ಶೇ.0.4ರಷ್ಟಿವೆ. ಪ್ರತಿಯೊಬ್ಬ ಮುಸಲ್ಮಾನನು ಬಹುಪತ್ನಿತ್ವವನ್ನು ಆಚರಿಸುತ್ತಾನೆ ಎನ್ನುವ ಹಿಂದೂ ಗುಂಪುಗಳ ಸುಳ್ಳು ಪ್ರಚಾರವು ಬೆತ್ತಲಾಗಲು ಇದಕ್ಕಿಂತ ಅಂಕಿಸಂಖ್ಯೆಗಳು ಬೇಕೆ? ಇದಲ್ಲದೆ, ಫ್ಯೂ ರಿಸರ್ಚ್ ಸಂಸ್ಥೆಯ ಪ್ರಕಾರ ಬಹುಪತ್ನಿತ್ವವನ್ನು ಕಾನೂನಾತ್ಮಕವಾಗಿ ಹೊಂದಿರುವ ಮುಸಲ್ಮಾನ ಬಾಹುಳ್ಯವಿರುವ ದೇಶಗಳಲ್ಲಿಯೂ ಸಹ ಬಹುಪತ್ನಿತ್ವವು ತೀರ ವಿರಳ ಮತ್ತು ಅಫ್ಘಾನಿಸ್ತಾನ, ಪಾಕಿಸ್ತಾನ, ಬಾಂಗ್ಲಾದೇಶ, ಇರಾನ್ ಮತ್ತು ಈಜಿಪ್ಟ್ ದೇಶಗಳಲ್ಲಿ ಅದು ಶೇ.1ಕ್ಕಿಂತಲೂ ಕಡಿಮೆ ಇದೆ.

### ಜನಸಂಖ್ಯಾ ಏರಿಕೆಯ ಪ್ರಚಾರದ ಹಿಂದಿನ ದುರುದ್ದೇಶ

ಜನಸಂಖ್ಯೆಯಲ್ಲಿನ ಬೆಳವಣಿಗೆಯ ಕುರಿತು ವಿವಾದದ ಧೂಳು ಎಬ್ಬಿಸುವ ಹಿಂದೆ ಆರ್‌ಎಸ್‌ಎಸ್-ಬಿಜೆಪಿಗಳ ಅಲ್ಪಸಂಖ್ಯಾತ ವಿರೋಧಿ ಪ್ರಚಾರದ ದುರುದ್ದೇಶವಿದೆ. ಆ ಮೂಲಕ ಹಿಂದೂಗಳು ಮತ್ತು ಮುಸಲ್ಮಾನರ ನಡುವೆ ಕಂದಕವನ್ನು ವಿಸ್ತರಿಸಿ ಪರಸ್ಪರ ಸಮುದಾಯಗಳ ನಡುವೆ ಅಪನಂಬಿಕೆಯನ್ನು ಬಿತ್ತಿ, ತಮ್ಮ ರಾಜಕೀಯ ಬೇಳೆಯನ್ನು ಬೇಯಿಸಿಕೊಳ್ಳುವ ಹುನ್ನಾರವಿದೆ. ಏಕೆಂದರೆ, ಸಮುದಾಯಗಳ ನಡುವಿನ ಐಕ್ಯತೆ ಅವರ ದುಷ್ಟ ರಾಜಕೀಯಕ್ಕೆ ಅಂತ್ಯ ಹಾಡುತ್ತದೆ. ಈ ಭಯದಿಂದಲೇ ಬಂಡವಾಳಶಾಹಿ ಶೋಷಣೆಯ ಅಡಿಯಲ್ಲಿ ಸಿಲುಕಿ ಸಮವಾಗಿ ದಮನವಾಗುತ್ತಿರುವ ಜನತೆಯ ನಡುವಿನ ಐಕ್ಯತೆಯನ್ನು ಭಂಗಪಡಿಸಲು ಸಂಘ ಪರಿವಾರದ ಅಂಗಸಂಸ್ಥೆಗಳು ಸಕ್ರಿಯವಾಗಿ ಸದಾ ಪ್ರಯತ್ನಿಸುತ್ತಲೇ ಇರುತ್ತವೆ. ಆರೆಸ್ಸೆಸ್-ಬಿಜೆಪಿಗಳು ಹಿಂದೂಗಳಲ್ಲಿ ಬಿತ್ತುವ ಹಿಂದೂ ಧಾರ್ಮಿಕ ಅಂಧತ್ವ ಮತ್ತು ಮತಾಂಧತೆಗೆ, ಐಸಿಸ್ ಮತ್ತು ತಾಲಿಬಾನ್‌ನಂತಹ ಸಂಘಟನೆಗಳು ಮುಸಲ್ಮಾನರಲ್ಲಿ ಬಿತ್ತುವ ಮತಾಂಧತೆಗೆ ಸರಿಯಾದ ಹೋಲಿಕೆಯಾಗುತ್ತದೆ. ಹೀಗೆ ಎರಡೂ ಸಮುದಾಯಗಳಿಗೆ ಸಂಬಂಧಪಟ್ಟ ಮತಾಂಧರು ಒಂದೇ ದೋಣಿಯಲ್ಲಿ ಸಾಗುತ್ತಾರೆ ಎಂಬ ಸತ್ಯವನ್ನು ಜನತೆ ಅರಿತುಕೊಳ್ಳಬೇಕು. ಅವರ ಏಕೈಕ ಉದ್ದೇಶವೆಂದರೆ, ಸದಾ ಧರ್ಮ ಮತ್ತು ಮೂಢನಂಬಿಕೆಗಳಲ್ಲಿ ಜನರ ಕಣ್ಣಿಗೆ ಪಟ್ಟಿ ಕಟ್ಟಿ ಅವರನ್ನು ಅಜ್ಞಾನತವಾದದಲ್ಲಿ ಮುಳುಗಿಸಿ, ತಮ್ಮ ಅಧಿಕಾರದ ಗದ್ದುಗೆಯ ಆಟದಲ್ಲಿ ಅವರನ್ನು ಆಟದ ಕಾಯಿಗಳಾಗಿ ಬಳಸಿಕೊಳ್ಳುವುದೇ ಆಗಿದೆ. ಈ ಸತ್ಯವನ್ನು ಜನಸಾಮಾನ್ಯರು ಎಷ್ಟು ಬೇಗ ಅರಿತು ಮತಾಂಧ ಮೂಲಭೂತವಾದಿಗಳ ಪ್ರಭಾವ ವಲಯದಿಂದ ಹೊರಬರುತ್ತಾರೋ ಅಷ್ಟು ದೇಶದ ಜನತಂತ್ರಕ್ಕೆ ಉತ್ತಮ ಸ್ಥಿತಿಯನ್ನು ನಿರ್ಮಾಣ ಮಾಡುತ್ತದೆ. ಸುಳ್ಳುಗಳ ಮೇಲೆ ನಿಂತಿರುವ ಹುಸಿವಾದಗಳನ್ನು ಆಸ್ಫೋಟಿಸಿ ದೈನಂದಿನ ಬದುಕನ್ನು ಕಾಡುತ್ತಿರುವ ಜೀವನದ ಸಮಸ್ಯೆಗಳ ಮೇಲೆ ತಮ್ಮ ದೃಷ್ಟಿಯನ್ನು ನೆಟ್ಟು ಎಲ್ಲಾ ಸಮುದಾಯಗಳಿಗೂ ಸೇರಿದ ಶೋಷಿತ ಜನತೆ ಒಂದಾಗಿ ಹೋರಾಟ ಕಟ್ಟುವ ಮೂಲಕ ಮಾತ್ರ ಈ ಬಂಡವಾಳಶಾಹಿ ಪರ ಹಿಂದುತ್ವ ಮೂಲಭೂತವಾದಿಗಳಂತಹ ಶಕ್ತಿಗಳನ್ನು ಜನತೆ ಸೋಲಿಸಬಹುದಾಗಿದೆ. ■

# ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಎನ್‌ಆರ್‌ಐ ಕೋಟಾ– ಎಐಡಿಎಸ್‌ಓ ಆಕ್ಷೇಪ!

**ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಎನ್ ಆರ್ ಐ ಕೋಟಾ ಅಳವಡಿಸಲು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು ನಡೆಸಿರುವ ಚಿಂತನೆಯನ್ನು ಖಂಡಿಸಿ ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿಗಳಾದ ಅಜಯ್ ಕಾಮತ್ ಈ ಕೆಳಗಿನ ಹೇಳಿಕೆಯನ್ನು ನೀಡಿದ್ದಾರೆ.**

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಎನ್‌ಆರ್‌ಐ ಕೋಟಾಗೆ ಅನುಮತಿ ನೀಡುವಂತೆ ಎನ್‌ಎಂಸಿ (ನ್ಯಾಷನಲ್ ಮೆಡಿಕಲ್ ಕಮಿಷನ್) ಗೆ ಕೋರಿದೆ. ಈ ನಡೆಯು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಖಾಸಗೀಕರಣದ ಮಹಾದ್ವಾರಗಳನ್ನು ತೆರೆಯುವುದರಿಂದ ಎಐಡಿಎಸ್‌ಓ ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸುತ್ತದೆ. 2018ರಲ್ಲಿ ಎನ್‌ಆರ್‌ಐ ಕೋಟಾದ ಪ್ರಸ್ತಾಪ ಬಂದಾಗ ಕರ್ನಾಟಕದ ವಿದ್ಯಾರ್ಥಿಗಳು ಯಶಸ್ವಿಯಾಗಿ ಅದನ್ನು ವಿರೋಧಿಸಿ ಹಿಮ್ಮೆಟ್ಟಿಸಿದ್ದರು. ಈಗಾಗಲೇ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಶುಲ್ಕವು ವರ್ಷಕ್ಕೆ 80,000 ರೂಪಾಯಿಯಷ್ಟಿದ್ದು ಇದನ್ನೇ ಬಡ ವಿದ್ಯಾರ್ಥಿಗಳು ಭರಿಸುವುದು ಕಷ್ಟಕರವಾಗಿದೆ. ಹೀಗಿರುವಾಗ, ಎನ್‌ಆರ್‌ಐ ಕೋಟಾದ ಅಳವಡಿಕೆಯು ಇನ್ನಷ್ಟು ಶುಲ್ಕ ಹೆಚ್ಚಳಕ್ಕೆ ಹಸಿರು ನಿಶಾನೆ ನೀಡುತ್ತದೆ ಮತ್ತು ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಅವಕಾಶಗಳನ್ನು ಕಿತ್ತುಕೊಳ್ಳುತ್ತದೆ. ಸರ್ಕಾರಿ ಕಾಲೇಜುಗಳಲ್ಲಿ ಎನ್‌ಆರ್‌ಐ ಕೋಟಾ ಅಳವಡಿಸುವುದು ಪ್ರಜಾತಾಂತ್ರಿಕ ಶಿಕ್ಷಣದ ಮೇಲಿನ ನೇರ ದಾಳಿಯಾಗಿದೆ ಮತ್ತು ಇದು ಕ್ಯಾಂಪಸ್‌ನಲ್ಲಿ ತಾರತಮ್ಯವನ್ನು ಉಂಟುಮಾಡುತ್ತದೆ. ವೈದ್ಯಕೀಯ ಶಿಕ್ಷಣವು ಒಂದು ವೇಳೆ ತನ್ನ ಪ್ರಜಾತಾಂತ್ರಿಕ ಗುಣಲಕ್ಷಣವನ್ನು ಕಳೆದುಕೊಂಡರೆ ಬಡ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣವನ್ನು ಪಡೆಯಲು ಸಾಧ್ಯವಾಗುವುದಿಲ್ಲ ಮತ್ತು ತತ್ಪರಿಣಾಮವಾಗಿ ಸಮರ್ಥ ವೈದ್ಯರು ಸೃಷ್ಟಿಯಾಗದೆ ಇಡೀ ದೇಶದ ವೈದ್ಯಕೀಯ ವ್ಯವಸ್ಥೆಯು ಇದರಿಂದ ಬಾಧಿಸಲ್ಪಡುತ್ತದೆ. ಸಂಸ್ಥೆಯನ್ನು ನಡೆಸಲು ಹಣದ ಕೊರತೆ ಇದೆ ಎಂದು ರಾಜ್ಯ ಸರ್ಕಾರವು ಹೇಳುತ್ತದೆ! ಈ ರೀತಿ ಶುಲ್ಕ ಹೆಚ್ಚಳಕ್ಕೆ ವೇದಿಕೆ ಸಜ್ಜುಗೊಳಿಸಲಾಗುತ್ತಿದೆ ಮತ್ತು ತತ್ಪರಿಣಾಮವಾಗಿ, ಕರ್ನಾಟಕದ ಯಾವ ಬಡ ವಿದ್ಯಾರ್ಥಿಯೂ ವೈದ್ಯರಾಗಲು ಸಾಧ್ಯವಿಲ್ಲ. ■

...1ನೇ ಪುಟದಿಂದ

ಪ್ರಕರಣದ ಆರೋಪಿಗಳು ಸಾಕಷ್ಟು ಬಲಶಾಲಿಗಳಾಗಿದ್ದು, ಸಾಕ್ಷ್ಯಗಳನ್ನು ತಿರುಚುವ, ಅಳಿಸಿಹಾಕುವ ಎಲ್ಲಾ ಸಾಧ್ಯತೆಗಳೂ ಇವೆ. ಈ ಪ್ರಕರಣವು ಹಲವಾರು ಮಗ್ಗಲುಗಳನ್ನು, ಆಯಾಮಗಳನ್ನು ಹೊಂದಿದೆ ಎಂದ ಅವರು, ಆರೋಪಿಗಳಾಗಿರುವ ತಂದೆ-ಮಗನ ಅಪರಾಧಗಳನ್ನು ನಿರೂಪಿಸುವಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳೆರಡೂ ಜವಾಬ್ದಾರರೆಂಬುದನ್ನು ಸ್ಪಷ್ಟಪಡಿಸಿದರು. ಇಂದು ಆಡಳಿತ ಪಕ್ಷಗಳು ತನಿಖೆಯನ್ನು ಸರಿಯಾಗಿ, ಆಳವಾಗಿ, ಪರಿಣತಿಯಿಂದ ತೀವ್ರತಮವಾಗಿ ನಡೆಸಲು ಇಂತಹ ಚಳುವಳಿಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನಡೆಯಬೇಕು ಎಂದರು. ಇಂದಿನ ಈ ಪ್ರಕರಣವು ವಿಭಿನ್ನವಾಗಿದ್ದು, ಪೆನ್ ಡ್ರೈವ್‌ಗಳಲ್ಲಿನ ವಿಡಿಯೋ ಮೂಲಕ ಸಂತ್ರಸ್ತೆಯರ ಗುರುತು ಬಟಾಬಯಲಾಗಿರುವುದು ಅವರ ಭವಿಷ್ಯವನ್ನು ಕತ್ತಲಾಗಿಸಿದೆ. ಹಾಗಾಗಿ ಸರ್ಕಾರವು ಹೊಸ ಯೋಜನೆಯೊಂದನ್ನು ರೂಪಿಸಿ ಅವರಿಗೆ ಪುನರ್ವಸತಿ ಕಲ್ಪಿಸುವಂತೆ ಮಹಿಳಾ ಸಂಘಟನೆಗಳು ಒತ್ತಾಯ ತರಬೇಕೆಂಬ ಸಲಹೆಗಳನ್ನು ನೀಡಿದರು.

**ಅತ್ಯಾಚಾರಿಗೆ ಇಲ್ಲದ ಸಾಮಾಜಿಕ ಬಹಿಷ್ಕಾರ ಸಂತ್ರಸ್ತೆಗೆ ಏಕೆ? ಡಾ:ಸುಧಾ ಕಾಮತ್ (ಅಖಿಲ ಭಾರತ ಉಪಾಧ್ಯಕ್ಷರು, ಎಐಎಂಎಸ್‌ಎಸ್)**

ಮತ್ತೋರ್ವ ಭಾಷಣಕಾರರಾದ ಡಾ:ಸುಧಾ ಕಾಮತ್‌ರವರು ಹಾಸನದ ಪ್ರಕರಣದಲ್ಲಿನ ಕ್ರೌರ್ಯವನ್ನು ವಿವರಿಸುತ್ತಾ, ಮಹಿಳೆಯರನ್ನು ವಂಚಿಸಿ-ಬೆದರಿಸಿ ಇಳಿವಯಸ್ಸನ್ನೂ ಲೆಕ್ಕಿಸದೆ ಬಲಾತ್ಕಾರ ಮಾಡಿರುವುದು ಮೊದಲನೆಯ ಅಪರಾಧವಾದರೆ, ಅದನ್ನು ಚಿತ್ರೀಕರಿಸಿ ಬ್ಲಾಕ್‌ಮೇಲ್ ಮಾಡಿ ಆ ಹೆಣ್ಣುಮಕ್ಕಳನ್ನು ತನ್ನ ಕಾಮಕ್ಕೆ ಬಳಸಿಕೊಂಡಿದ್ದು ಪಾತಕಿಯಲ್ಲಿನ ವಿಕೃತಿಯನ್ನು ಬಯಲುಗೊಳಿಸುತ್ತದೆ. ನಂತರ ಆ ವಿಡಿಯೋವನ್ನು ಪೆನ್‌ಡ್ರೈವ್‌ಗಳಿಗೆ ನಕಲು ಮಾಡಿ ಹಾದಿ-ಬೀದಿಗಳಲ್ಲಿ ಸಿಗುವಂತೆ ಮಾಡಿರುವುದು ಮತ್ತೊಂದು ಹೀನ ಕೃತ್ಯ ಎಂದು ಖಂಡಿಸಿದರು. ಪುರುಷಾಧಿಪತ್ಯದ ಅಹಂ, ಅಧಿಕಾರ, ಕುಟುಂಬ ರಾಜಕೀಯ ಬಲ, ಹಣ ಬಲ, ಎಲ್ಲವೂ ಸೇರಿ ಇಂತಹವರು ಭಂಡ ಧೈರ್ಯ ತೋರುತ್ತಾರೆ. ಹೆಣ್ಣು ಮಕ್ಕಳ ಶೀಲವನ್ನು ವೈಭವೀಕರಿಸುವ ಈ ಸಮಾಜದಲ್ಲಿ ಅವರ ಮೇಲೆ ಅತ್ಯಾಚಾರವಾದರೆ ಅತ್ಯಾಚಾರ ಮಾಡಿದ ಪುರುಷನಿಗೆ ಯಾವುದೇ ಶಿಕ್ಷೆಯಾಗದೆ ಆಕೆಯನ್ನೇ ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಿಸಲಾಗುತ್ತದೆ. ಸಮಾಜದ ಈ ಧೋರಣೆ ಈಗಾಗಲೇ ಬಲಿಯಾಗಿರುವವರನ್ನು ಮತ್ತೆ ಬಲಿಯಾಗಿಸುತ್ತದೆ, ಆಕೆಯಲ್ಲಿ ಅಪರಾಧಿ ಪ್ರಜ್ಞೆಯನ್ನು ಮೂಡಿಸುತ್ತದೆ. ವ್ಯಾಪಕವಾಗಿ ಹರಡುತ್ತಿರುವ ಅಶ್ಲೀಲತೆ ಪುರುಷನಲ್ಲಿನ ಮೂಲಪ್ರವೃತ್ತಿಯನ್ನು ಪ್ರಚೋದಿಸಿದರೆ, ಹಿಂಸೆ ಅವನಲ್ಲಿರುವ ಸೂಕ್ಷ್ಮ ಸಂವೇದನೆಗಳನ್ನು ನಾಶಗೊಳಿಸುತ್ತಿದೆ. ಇದಕ್ಕೆ ಬಲಿಯಾಗದೆ ವಿದ್ಯಾರ್ಥಿ-ಯುವಜನರು ಈ ಸಮಸ್ಯೆಗಳಿಗೆ ಮೂಲಕಾರಣವಾಗಿರುವ ಕೊಳೆತ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಹೋರಾಟ ನಡೆಸಿ ಹೊಸ ಸಮಾಜದ ನಿರ್ಮಾಣಕ್ಕೆ ಮುಂಬರಬೇಕೆಂದು ಕರೆ ನೀಡಿದರು.

**ಸಂತ್ರಸ್ತೆಯರ ಪರವಾಗಿ ಎಲ್ಲಾ ಹಂತಗಳಲ್ಲೂ ಜೊತೆಯಿರುತ್ತೇನೆ – ಡಾ|| ನಾಗಲಕ್ಷ್ಮಿ ಚೌಧರಿ (ಅಧ್ಯಕ್ಷರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ**

ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ|| ನಾಗಲಕ್ಷ್ಮಿ ಚೌಧರಿಯವರು ಅನಿವಾರ್ಯ ಕಾರಣಗಳಿಂದ ಕಾರ್ಯಕ್ರಮಕ್ಕೆ ಬರಲಾಗದಿದ್ದರೂ ದೂರವಾಣಿಯ ಮೂಲಕ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಎಐಎಂಎಸ್‌ಎಸ್ ನಡೆಸುತ್ತಿರುವ ಹೋರಾಟದ ಕುರಿತು ಮೆಚ್ಚುಗೆ ವ್ಯಕ್ತಪಡಿಸುತ್ತಾ "ಸಂತ್ರಸ್ತೆಯರ ಪರವಾಗಿ ಎಲ್ಲಾ ಹಂತಗಳಲ್ಲು ಜೊತೆಯಿರುತ್ತೇನೆ" ಎಂದು ಹೋರಾಟಕ್ಕೆ ಶುಭ ಹಾರೈಸಿದರು.

**ಉದಾತ್ತ ನೀತಿ-ನೈತಿಕತೆ-ಮೌಲ್ಯಗಳನ್ನು ಆಧರಿಸಿ ಹೊಸ ಸಮಾಜವನ್ನು ಕಟ್ಟಬೇಕಿದೆ – ಎಂ.ಎನ್.ಮಂಜುಳ (ರಾಜ್ಯ ಅಧ್ಯಕ್ಷರು, ಎಐಎಂಎಸ್‌ಎಸ್)**

ಇನ್ನೊಬ್ಬ ಭಾಷಣಕಾರರಾದ ಎಐಎಂಎಸ್‌ಎಸ್‌ನ ರಾಜ್ಯ ಅಧ್ಯಕ್ಷರಾದ ಕಾ.ಎಂ.ಎನ್.ಮಂಜುಳಾ ಅವರು ಮಾತನಾಡುತ್ತಾ, ಹಾಸನದ ಈ ಘಟನೆ ಇಡೀ ಮನುಕುಲಕ್ಕೆ ಆದ ಅವಮಾನ. ಇಂತಹ ಹೀನ ಕೃತ್ಯವು ಇಡೀ ಪ್ರಪಂಚದಲ್ಲೇ ಮೊದಲನೆಯದಾಗಿದೆ. ನಿರ್ಭಯಾ ಘಟನೆಯ ವಿರುದ್ಧ ಆದ ಚಳುವಳಿ, ಮೀಟೂ ಚಳುವಳಿ, ಕುಸ್ತಿ ಪಟುಗಳ ಹೋರಾಟಗಳಂತಹ ಸಾಮಾಜಿಕ ಹೋರಾಟಗಳೇ ಅನ್ಯಾಯವನ್ನು ಮಟ್ಟಹಾಕಲು ಸಾಧ್ಯ. ಜೊತೆಗೆ ಉನ್ನತ ಹಾಗೂ ಉದಾತ್ತ ನೀತಿ-ನೈತಿಕತೆ-ಮೌಲ್ಯಗಳನ್ನು ಆಧರಿಸಿ ಹೊಸ ಸಮಾಜವನ್ನು ಕಟ್ಟಬೇಕಿದೆ ಎಂದರು.

ಸಭೆಯ ಅಧ್ಯಕ್ಷತೆಯನ್ನು ಎಐಎಂಎಸ್‌ಎಸ್‌ನ ರಾಜ್ಯ ಕಾರ್ಯದರ್ಶಿ ಕಾ. ಶೋಭಾ ಎಸ್. ವಹಿಸಿದರು. ■



ಪ್ರಜ್ವಲ್ ರೇವಣ್ಣ ಬಂಧನಕ್ಕೆ ಆಗ್ರಹಿಸಿ 30-05-2024ರಂದು ಹಾಸನದಲ್ಲಿ ರಾಜ್ಯದ ಜನಪರ ಚಳುವಳಿಗಳ ಒಕ್ಕೂಟದಿಂದ ಸಂಘಟಿಸಿದ ಬೃಹತ್ ಮೆರವಣಿಗೆ. ಇದರಲ್ಲಿ ನಮ್ಮ ಪಕ್ಷದ ಮುಂದಳಗಳಾದ ಎಐಎಂಎಸ್‌ಎಸ್, ಎಐಯುಟಿಯುಸಿ, ಎಐಡಿವೈಓ, ಎಐಡಿಎಸ್‌ಓ, ಮೊದಲಾದ ಸಂಘಟನೆಗಳು ಸಕ್ರಿಯವಾಗಿ ಭಾಗವಹಿಸಿದ್ದವು.

# ಮಧ್ಯಪ್ರಾಚ್ಯದ ಇತ್ತೀಚಿನ ಕದನದ ತಾಣ –ಯೆಮೆನ್

ಮಧ್ಯಪ್ರಾಚ್ಯದಲ್ಲಿ ಕೆಂಪು ಸಮುದ್ರ(Red sea)ದ ಪಕ್ಕದಲ್ಲಿರುವ ಯೆಮೆನ್, 2 ಕೋಟಿ ಜನಸಂಖ್ಯೆ ಇರುವ ಒಂದು ಸಣ್ಣ, ಬಡ ಅರಬ್ ದೇಶವಾಗಿದೆ. ಪೂರ್ವದಲ್ಲಿರುವ ಪರ್ಷಿಯನ್ ಗಲ್ಫ್ ಹಾಗೂ ಪಶ್ಚಿಮದಲ್ಲಿರುವ ಕೆಂಪು ಸಮುದ್ರದ ನಡುವೆ ಇದೆ. ಹಾಗೂ ವಿಶ್ವದ ಅತಿ ದೊಡ್ಡ ಹಡಗು ಮಾರ್ಗಗಳಲ್ಲಿ ಒಂದಾದ ಸುಯೆಝ್ ಕಾಲುವೆಗೆ ಹೆಬ್ಬಾಗಿಲಾದ, ಕೆಂಪು ಸಮುದ್ರದ ಪ್ರವೇಶ ದ್ವಾರವಾದ ಕಿರಿದಾದ ಬಾಬ್ ಎಲ್ ಮಾಂಡೆಬ್ ಜಲಸಂಧಿ (ಸ್ಟ್ರೇಟ್)ಯ ಅಂಚಿನಲ್ಲಿದೆ. ಪಳೆಯುಳಿಕೆ ಇಂಧನಗಳನ್ನು ಹೊತ್ತಿರುವ ಹಡಗುಗಳು ಪರ್ಷಿಯನ್ ಗಲ್ಫ್ ಮತ್ತು ಮೆಡಿಟರೇನಿಯನ್ ಸಮುದ್ರದ ನಡುವೆ ಸುಯೆಝ್ ಕಾಲುವೆ ಮೂಲಕ ಸುಮೆದ್ ಪೈಪ್‌ಲೈನ್ ತಲುಪಲು ಹಾರ್ನ್ ಆಫ್ ಆಫ್ರಿಕಾ ಮತ್ತು ಅರೇಬಿಯನ್ ಪರ್ಯಾಯ ದ್ವೀಪ ನಡುವಿನ ಇಕ್ಕಟ್ಟಾದ ಜಾಗದ ಮೂಲಕ ಹಾದು ಹೋಗಬೇಕು. ಅಮೆರಿಕಾದ ಯುದ್ಧ ಪಿಪಾಸುಗಳು ಮತ್ತು ಅವರ ಬ್ರಿಟಿಷ್ ಮಿತ್ರರು ಹಾಗೂ ಸಂಪೂರ್ಣ ಭ್ರಷ್ಟವಾದ ಸೌದಿ ರಾಜ ಕುಟುಂಬವು, ಹೌತಿಗಳ ಜನಪ್ರಿಯ ರಾಷ್ಟ್ರೀಯ ಚಳುವಳಿಯ ಆಧಾರದಲ್ಲಿ ಯೆಮೇನಿ ಸರ್ಕಾರವು ಬಾಬ್ ಎಲ್-ಮಾಂಡೆಬ್ ಜಲಸಂಧಿಗೆ ತಡೆಯೊಡ್ಡಬಹುದು ಮತ್ತು ತಮ್ಮ ದಬ್ಬಾಳಿಕೆಗೆ ಕಡಿವಾಣ ಹಾಕಬಹುದೆಂಬ ಭೀತಿಗೆ ಒಳಗಾಗಿದ್ದಾರೆ.

ಆದ್ದರಿಂದ ಪಾಶ್ಚಾತ್ಯ ಸಾಮ್ರಾಜ್ಯವಾದದ ಆಕ್ರಮಣಕ್ಕೆ ಬಹಳ ಕಾಲದಿಂದಲೂ ಯೆಮೆನ್ ಗುರಿಯಾಗಿದೆ. 20ನೇ ಶತಮಾನದ ಬಹಳ ಕಾಲದವರೆಗೂ ಯೆಮೆನ್ ಎರಡು ದೇಶಗಳಾಗಿ ಅಸ್ತಿತ್ವದಲ್ಲಿತ್ತು. ಒಂದೆಡೆ ಅಮೆರಿಕ-ಸೌದಿ ಅರೇಬಿಯಾ ಬೆಂಬಲಿತ ಕ್ರೂರ ನಿರಂಕುಶಾಧಿಕಾರಿ ಅಲಿ ಅಬ್ದುಲ್ಲಾ ಆಡಳಿತದ ಅಡಿಯಲ್ಲಿ ಇರುವ ಉತ್ತರದಲ್ಲಿರುವ 'ಯೆಮೆನ್ ಅರಬ್ ರಿಪಬ್ಲಿಕ್', ಮತ್ತೊಂದೆಡೆ ದಕ್ಷಿಣದ ಸಮಾಜವಾದದೆಡೆ ಬಲವಾಗಿ ವಾಗಿರುವ ಹಿಂದಿನ ಸೋವಿಯತ್ ರಷ್ಯಾ ಹಾಗೂ ಇನ್ನಿತರ ಸಮಾಜವಾದಿ ರಾಷ್ಟ್ರಗಳೊಂದಿಗೆ ನಿಕಟ ಸಂಬಂಧ ಹೊಂದಿರುವ ಜನರ ಪ್ರಜಾತಾಂತ್ರಿಕ ರಿಪಬ್ಲಿಕ್ ಯೆಮೆನ್. ಸೋವಿಯತ್ ಒಕ್ಕೂಟದ ದುಃಖದಾಯಕ ಪತನದ ಮುನ್ನ 1990ರಲ್ಲಿ ದಕ್ಷಿಣದ ಯೆಮೆನ್, ಉತ್ತರದ ಬಲಪಂಥೀಯ ಯೆಮೆನ್ ರಾಜ್ಯದೊಂದಿಗೆ ಒತ್ತಾಯಪೂರ್ವಕವಾಗಿ ಸೇರಿಕೊಳ್ಳಬೇಕಾಯಿತು; ಹೀಗೆ ಇಡೀ ಯೆಮೆನ್ ಮೇಲೆ ಬೂರ್ಜ್ವಾ ರಾಜಪ್ರಭುತ್ವದ ನಿರಂಕುಶಾಧಿಕಾರ ಸ್ಥಾಪಿತವಾಯಿತು. ಸಲೇಹ್ ದೇಶವನ್ನು 31 ವರ್ಷಗಳ ಕಾಲ ಆಳಿದರು. ಅವರು ಇರಾಕ್ ಹಾಗೂ ಅಫ್ಘಾನಿಸ್ತಾನ್ ಮೇಲಿನ ಅಮೆರಿಕಾದ ಆಕ್ರಮಣವನ್ನು ಬೆಂಬಲಿಸಿದರು. ಅಮೆರಿಕಾದ ನೌಕಾದಳದ ಹಡಗು ಕೋಲ್ ಮೇಲೆ ಯೆಮೆನ್‌ನ ಹಡಗಿನ ನಗರ ಅಡೆನ್‌ನಲ್ಲಿ 2000ದಲ್ಲಿ ಬಾಂಬ್ ಆಕ್ರಮಣವಾದ ನಂತರ ಅವರು ಅಮೆರಿಕಾದ 'ಭಯೋತ್ಪಾದನೆಯ ಮೇಲಿನ ಯುದ್ಧ'ಕ್ಕೆ ಸಹಿ ಹಾಕಿದರು.

ಇದುವೇ ಹೌತಿಗಳ ಉದಯದ ಕಾಲ. ಹೌತಿ ಚಳುವಳಿಯು ಅಥವಾ ಅನ್ಸರ್ ಅಲ್ಲಾ(ದೇವರ ಬೆಂಬಲಿಗರು) ಚಳುವಳಿಯು, ಯೆಮೆನ್ ಅನ್ನು ನರಕಸದೃಶವನ್ನಾಗಿ ಮಾಡಿದ, ದಶಕಗಳ ಕಾಲದ ಸಲೇಹ್ ಆಳ್ವಿಕೆಯ ವಿರೋಧಿ ಚಳುವಳಿಯಾಗಿ ಹೊರಹೊಮ್ಮಿತು. 2000ದ ಪ್ರಾರಂಭದಲ್ಲಿ ಸಲೇಹ್ ವಿರುದ್ಧ ಹೌತಿಗಳು ಹಲವಾರು ಪ್ರತಿರೋಧಗಳನ್ನು ಒಡ್ಡಿದರು. ಲೆಬನಾನಿನ ರಾಜಕೀಯ ಮತ್ತು ಮಿಲಿಟರಿ ಸಂಘಟನೆಯಾದ ಹೆಜಬೊಲ್ಲಾ ಇಂದ ಪ್ರಭಾವಿತರಾಗಿ, ಹೌತಿಗಳು ಅಮೆರಿಕ, ಇಸ್ರೇಲ್ ಮತ್ತು ಜಿಯೋನಿಸಂ ವಿರುದ್ಧ ಅದರ ಅಧಿಕೃತ ನಿಲುವನ್ನು ಅನುಸರಿಸಿದರು. ಹೌತಿಗಳು ಯೆಮೆನ್‌ನಲ್ಲಿ ಪ್ರತಿಭಟಿಸುತ್ತಿದ್ದ ಇತರ ಗುಂಪುಗಳೊಡನೆ 'ಅರಬ್ ಸ್ಪ್ರಿಂಗ್' ಸೇರಿಕೊಂಡರು. ಇದನ್ನು ಅರಬ್ ಅವೇಕನಿಂಗ್, ಅರಬ್ ಅಪ್ರೈಸಿಂಗ್ ಎಂದು ಕರೆಯಲಾಯಿತು. ಇವು ಅರಬ್ ಪ್ರಪಂಚದಾದ್ಯಂತ ಹರಡಿಕೊಂಡ ಸರ್ಕಾರ ವಿರೋಧಿ ಪ್ರತಿಭಟನೆಗಳು, ಸ್ಫೋಟಗಳು ಮತ್ತು ಸಶಸ್ತ್ರ ಬಂಡಾಯದ ಸರಣಿಗಳಾಗಿದ್ದವು. ಲಕ್ಷಾಂತರ ಯೆಮೇನಿಗಳು ಬಡತನ ಹಾಗೂ ನಿರುದ್ಯೋಗದ ವಿರುದ್ಧ ಪ್ರತಿಭಟಿಸಿದರು. ಕ್ರಮೇಣ ಈ ಪ್ರತಿಭಟನೆಗಳು ಸಲೇಹ್‌ನ ಪದಚ್ಯುತಿಗೆ ಆಗ್ರಹಿಸಿದವು. ಹಬ್ಬುತ್ತಿದ್ದ ಪ್ರತಿಭಟನೆಗಳನ್ನು ಹತ್ತಿಕ್ಕುವ ಪ್ರಕ್ರಿಯೆಯಲ್ಲಿ ಹಲವಾರು ಜನ ಕೊಲ್ಲಲ್ಪಟ್ಟರು. ಫೆಬ್ರುವರಿ 2012ರ ಹೊತ್ತಿಗೆ ಯೆಮೆನ್ ಹಾಗೂ ಇತರ ದೇಶಗಳ ನಾಯಕರನ್ನು ಅಧಿಕಾರದಿಂದ ಕೆಳಗಿಳಿಸಲಾಯಿತು. ಅಧ್ಯಕ್ಷರಾದ ಸಲೇಹ್ ಅವರನ್ನು ಪದಚ್ಯುತಗೊಳಿಸಲಾಯಿತು. ಸಲೇಹ್‌ನ 33 ವರ್ಷದ ಆಳ್ವಿಕೆ ಕೊನೆಗೊಂಡು




ಉಪಾಧ್ಯಕ್ಷರಾದ ಅಬ್ದಾಬು ಮನ್ಸೂರ್ ಹದಿ ಅವರು ಹೊಸ ಆಳ್ವಿಕಾರರಾದರು. 2015ರ ಜನವರಿ 23ರಂದು ಹೌತಿ ಬಣವು ಹದಿ ಹಾಗೂ ಅವರ ಕ್ಯಾಬಿನೆಟ್ ರಾಜೀನಾಮೆಗೆ ಒತ್ತಾಯಿಸಿತು.

ಸೌದಿ ಅರೇಬಿಯಾದ ನಿರ್ದೇಶನದಲ್ಲಿ ಗಲ್ಫ್ ಕೋಆಪರೇಷನ್ ಕೌನ್ಸಿಲ್(ಜಿಸಿಸಿ) 2015ರ ಮಾರ್ಚ್ 26ರಂದು ಯೆಮೆನ್ ಮೇಲೆ ಬಾಂಬ್ ಹಾಕುವುದಾಗಿ ಘೋಷಿಸಿತು. ಬಹಳ ದೊಡ್ಡ ಭೂ ಪ್ರದೇಶವನ್ನು ಹೊಂದಿರುವ ಸೌದಿ ಅರೇಬಿಯಾದಲ್ಲಿ 310 ಲಕ್ಷ ಜನರು ವಾಸಿಸುತ್ತಿದ್ದು ಅಪಾರವಾದ ತೈಲ ಸಂಪತ್ತಿನ ಒಡೆತನದ ರಾಜ ಕುಟುಂಬವನ್ನು ಅದು ಒಳಗೊಂಡಿದೆ. ಸೌದಿ ಮಿಲಿಟರಿಯು ಅಮೇರಿಕಾ ಉತ್ಪಾದಿಸಿರುವ ಬಿಲಿಯಾಂತರ ಡಾಲರ್ ಮೌಲ್ಯದ ಯುದ್ಧ ವಿಮಾನಗಳನ್ನು ಮತ್ತು ಇತರ ಶಸ್ತ್ರಾಸ್ತ್ರಗಳನ್ನು ಕೊಂಡುಕೊಳ್ಳುತ್ತದೆ. ಪ್ರಾದೇಶಿಕ ಶಕ್ತಿಗಳ ಈ ಆಕ್ರಮಣಕಾರಿ ನಡೆಗಳ ಹಿಂದೆ ಇದ್ದದ್ದು, ಅಮೆರಿಕಾದ ಬಹುರಾಷ್ಟ್ರೀಯ ಕಂಪನಿಗಳ ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಗಳನ್ನು ವಿಸ್ತರಿಸುವ ಉದ್ದೇಶದಿಂದ ಇಡೀ ಪ್ರಾಂತ್ಯದಲ್ಲಿ ಅಮೇರಿಕಾದ ಅಧಿಕಾರ ಕೇಂದ್ರವಾದ ಪೆಂಟಗನ್ ಮಿಲಿಟರಿಯನ್ನು ಹೆಚ್ಚಿಸುವ ಷಡ್ಯಂತ್ರ. ವಾಲ್‌ಸ್ಟ್ರೀಟ್, ದೈತ್ಯ ಅಮೆರಿಕ ತೈಲ ಕಾರ್ಪೊರೇಷನ್‌ಗಳು, ಮಿಲಿಟರಿ ಕಾರ್ಖಾನೆಗಳು ಹಾಗೂ ಬ್ಯಾಂಕ್‌ಗಳು ಈ ಲೂಟಿಕೋರ ಪೆಂಟಗನ್-ಯುಕೆ-ಸೌದಿ ಅರೇಬಿಯಾ ಮತ್ತು ಇತರ ಜಿಸಿಸಿ ಸದಸ್ಯರಿಂದ ಅಪಾರವಾದ ಲಾಭವನ್ನು ದೋಚುತ್ತಿರುವುದರಿಂದ ಅವರು ಸೌದಿ ಮಿಲಿಟರಿಯನ್ನು ಸಶಕ್ತಗೊಳಿಸಲು, ಅದಕ್ಕೆ ತರಬೇತಿ ನೀಡಲು ಮತ್ತು ಅದನ್ನು ಗಟ್ಟಿಗೊಳಿಸಲು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ಮಾಡಿವೆ. ಈ ಲೂಟಿಕೋರರ ಕುಟುಂಬಕ್ಕೆ ಗೌರವಯುತ ಹೊದಿಕೆ ತೊಡಿಸುವುದೇ ಕಾರ್ಪೊರೇಟ್ ಮಾಧ್ಯಮದ ಪಾತ್ರ. ಇದು ವ್ಯಾಪಕವಾದ ತೀವ್ರವಾದ ಟೀಕೆಗೆ ಗುರಿಯಾಗಿದೆ. ಹೌತಿಯೊಂದಿಗಿನ ಈ ಸಂಘರ್ಷದ ಸಂದರ್ಭವನ್ನು 'ಮಿಲಿಟರಿ ಸ್ಥಗಿತತೆ' ಎಂದು 2019 ರಲ್ಲಿ ವರ್ಣಿಸಲಾಯಿತು. ಆರು ವರ್ಷಗಳ ಸತತ ಬಾಂಬ್ ದಾಳಿ, ವಿಧ ವಿಧದ ಬಾಂಬ್ ಬಳಕೆ, ಅಮೆರಿಕಾದ ನೌಕಾ ದಿಗ್ಬಂಧನ, ಆರ್ಥಿಕ ದಿಗ್ಬಂಧನ, ಡ್ರೋನ್ ದಾಳಿ ಇದ್ದಾಗ್ಯೂ, ಅಮೆರಿಕ-ಸೌದಿ ಒಕ್ಕೂಟ ಹೌತಿಗಳನ್ನು ಸೋಲಿಸುವಲ್ಲಿ ತೀವ್ರವಾಗಿ ವಿಫಲವಾಗಿದೆ. 2020ರ ಆರಂಭದಲ್ಲಿ ಹೌತಿಗಳ ವಿರುದ್ಧ ಜಯ ಸಾಧಿಸಲು ಅಸಾಧ್ಯವಾದಾಗ, ಕೊವಿಡ್-19 ಮಹಾಮಾರಿ ಹಾಗೂ ಮಿಲಿಟರಿ ಸೋಲುಗಳ ನಡುವೆ ಸೌದಿ ಅರೇಬಿಯಾ, ಈ ದುಷ್ಕೂಟದಿಂದ ಹೊರಹೋಗುವ ಯೋಜನೆಯನ್ನು ಹುಡುಕಲಾರಂಭಿಸಿತು. 2022ರ ಮಾರ್ಚ್ 29ರಂದು ಸೌದಿ ನೇತೃತ್ವದ ಒಕ್ಕೂಟ ಯೆಮೆನ್‌ನಲ್ಲಿ ಇರುವ ಎಲ್ಲಾ ವೈಷಮ್ಯಗಳಿಗೆ ತೆರೆ ಹಾಕುವುದಾಗಿ ಘೋಷಿಸಿತು. ಆದರೆ ಅಲ್ಲಿ ಶಾಂತಿ ಇನ್ನೂ ಮರೀಚಿಕೆಯೇ. ■

# ಗಾಜಾ ನಾಗರಿಕರ ನರಮೇಧಕ್ಕೆ ಅಮೆರಿಕದ ವಿದ್ಯಾರ್ಥಿಗಳ ಪ್ರತಿರೋಧ

ಪ್ರಪಂಚದೆಲ್ಲೆಡೆ ವಿದ್ಯಾರ್ಥಿ ಯುವಜನ ಹೋರಾಟಗಳು ಚರಿತ್ರೆಯ ಗಾಲಿಗಳಿಗೆ ವೇಗ ತುಂಬಿವೆ. ಅನ್ಯಾಯ, ಶೋಷಣೆಗಳನ್ನು ಕೊನೆಗಾಣಿಸುವ ಪ್ರಯತ್ನಗಳಿಗೆ ಜೀವ ತುಂಬಿವೆ. ಅಮೆರಿಕಾದ ವಾಲ್‌ಸ್ಟ್ರೀಟ್ ಮುತ್ತಿಗೆ, ಮಧ್ಯಪ್ರಾಚ್ಯದ ಅರಬ್ ಸ್ಪ್ರಿಂಗ್ ಮೊದಲಾದವು ಈ 21ನೇ ಶತಮಾನದಲ್ಲಿ ದಾಖಲಾದ ಅಂತಹ ಹೋರಾಟಗಳು. ಇದೀಗ ಮತ್ತೆ ಅಮೆರಿಕಾದ ವಿಶ್ವವಿದ್ಯಾಲಯಗಳು ಯುದ್ಧವಿರೋಧಿ ಚಳವಳಿಯ ಬಿಸಿಯನ್ನು ಎದುರಿಸಬೇಕಾಗಿದೆ. ಪ್ಯಾಲೆಸ್ಟೈನ್‌ಗೆ ಸೇರಿದ ಗಾಜಾ ಪಟ್ಟಿಯ ಮೇಲೆ ಇಸ್ರೇಲ್ ನಡೆಸುತ್ತಿರುವ ದುರಾಕ್ರಮಣವೇ ಈ ಆಕ್ರೋಶಕ್ಕೆ ಕಾರಣವಾಗಿದೆ. 1948ರಿಂದಲೂ ಅಮೆರಿಕಾದ ಆಳುವ ವರ್ಗ ಇಸ್ರೇಲಿನ ಯಹೂದಿ ಜನಾಂಗೀಯವಾದಿ ಆಳ್ವಿಕರ ಪರ ನಿಂತಿದೆ. ಕಳೆದ ಅಕ್ಟೋಬರ್ 7 ರಿಂದ ಉದ್ವಿಗ್ನಗೊಂಡಿರುವ ಇಸ್ರೇಲ್ – ಪ್ಯಾಲೆಸ್ಟೈನ್ ಸಂಘರ್ಷ ಇಂದಿಗೂ ತಣ್ಣಗಾಗಿಲ್ಲ. ಗಾಜಾ ಪಟ್ಟಿಯ ಮೇಲೆ ಇಸ್ರೇಲ್ ನಡೆಸಿದ ದಾಳಿಯಿಂದ ಇದುವರೆಗೆ 35,000 ನಾಗರಿಕರು ಸಾವನ್ನಪ್ಪಿದ್ದಾರೆ. ಇದರಲ್ಲಿ ಮಹಿಳೆಯರ ಮತ್ತು ಮಕ್ಕಳ ಪ್ರಮಾಣವೇ ದೊಡ್ಡದು. ಶಾಲೆ, ಆಸ್ಪತ್ರೆ, ನಿರಾಶ್ರಿತರ ಶಿಬಿರ, ಪರಿಹಾರ ಕಾರ್ಯಕರ್ತರ ಮೇಲೆ ಕೂಡ ಬಾಂಬು, ಕ್ಷಿಪಣಿ ದಾಳಿ ನಡೆಸಿವೆ. ಅಮೆರಿಕಾ ಮತ್ತು ಭಾರತವೂ ಸೇರಿದಂತೆ ಇತರ ಸಾಮ್ರಾಜ್ಯಶಾಹಿ ದೇಶಗಳ ಬೆಂಬಲವೇ ಇಸ್ರೇಲಿನ ಈ ದುರಾಕ್ರಮಣ ಅಡೆತಡೆಯಿಲ್ಲದೆ ನಡೆಯಲು ಕಾರಣ. ಅಂತರರಾಷ್ಟ್ರೀಯ ನ್ಯಾಯಾಲಯ ಕೂಡ ಇಸ್ರೇಲನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದೆ.

ಜಗತ್ತಿನಾದ್ಯಂತ ಗಾಜಾದ ಮೇಲಿನ ಇಸ್ರೇಲಿನ ಯಹೂದಿ ಜನಾಂಗೀಯವಾದಿ ನರಮೇಧವನ್ನು ಖಂಡಿಸಿ ಪ್ರತಿಭಟನೆಗಳು ನಡೆಯುತ್ತಿವೆ. ಇಸ್ರೇಲಿನ ಆಪ್ತಮಿತ್ರ, ಅಮೆರಿಕಾದ ನೆಲದ ವಿದ್ಯಾರ್ಥಿಗಳೇ ಈ ಹೋರಾಟದ ಮುಂಚೂಣಿಯಲ್ಲಿರುವುದು ಆಶಾದಾಯಕ ಬೆಳವಣಿಗೆ. ಇದೇ ಏಪ್ರಿಲ್, ಮೇ ತಿಂಗಳಲ್ಲಿ ಅಮೆರಿಕಾದ 140ಕ್ಕೂ ಹೆಚ್ಚು ಕಾಲೇಜು, ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಇಸ್ರೇಲ್ ವಿರೋಧಿ ಹೋರಾಟಗಳಲ್ಲಿ ತೊಡಗಿದ್ದಾರೆ. ಅಮೆರಿಕಾದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಾದ ಎಂಐಟಿ, ಹಾರ್ವರ್ಡ್, ಕೊಲಂಬಿಯಾ, ಕ್ಯಾಲಿಫೋರ್ನಿಯಾ, ನ್ಯೂಯಾರ್ಕ್‌ಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಮುಷ್ಕರದಲ್ಲಿ ನಿರತರಾಗಿದ್ದಾರೆ. ಇವುಗಳಲ್ಲಿ ಹಲವಾರು ಶಿಕ್ಷಕರು ಮತ್ತು ಪ್ರಾಧ್ಯಾಪಕರು ಕೂಡ ಭಾಗವಹಿಸಿದ್ದರು. ಈ ಪ್ರತಿಭಟನೆಗಳನ್ನು ನಿಯಂತ್ರಿಸಲಾಗದ ಆಡಳಿತ ಮಂಡಳಿಗಳು ತಮ್ಮ ಕ್ಯಾಂಪಸ್‌ಗಳಿಗೆ ಪೊಲೀಸರನ್ನು ಕರೆದು ವಿದ್ಯಾರ್ಥಿಗಳ ಮೇಲೆ ಲಾಠಿಚಾರ್ಜ್ ಕೂಡ ಮಾಡಿಸಿವೆ. ಇದುವರೆಗೆ ಸುಮಾರು 2500 ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ.

ಈ ಸಂಸ್ಥೆಗಳಲ್ಲಿ ಇಸ್ರೇಲಿನ ಕಂಪನಿಗಳ ಷೇರು ಬಂಡವಾಳವನ್ನು ರದ್ದು ಪಡಿಸಬೇಕು, ಇಸ್ರೇಲ್ ತನ್ನ ನರಮೇಧ ನಿಲ್ಲಿಸಬೇಕು, ಇಸ್ರೇಲಿನ ಸೈನ್ಯ ಮತ್ತು ಗಾಜಾ ಮೇಲಿನ ಯುದ್ಧದಲ್ಲಿ ತೊಡಗಿರುವ




ಕಂಪನಿಗಳ ಜೊತೆಗೆ ಮಾಡಿಕೊಂಡಿರುವ ಶೈಕ್ಷಣಿಕ ಮತ್ತು ಸಂಶೋಧನಾ ಒಪ್ಪಂದಗಳನ್ನು ರದ್ದುಪಡಿಸಬೇಕೆಂಬುದೇ ವಿದ್ಯಾರ್ಥಿಗಳ ಮುಖ್ಯ ಆಗ್ರಹಗಳು. 1968ರಲ್ಲಿ ವಿಯೆಟ್ನಾಂ ಮೇಲೆ ಅಮೆರಿಕಾ ನಡೆಸಿದ ಯುದ್ಧವನ್ನು ಖಂಡಿಸಿ ನಡೆದ ವಿದ್ಯಾರ್ಥಿ ಹೋರಾಟದ ನಂತರ ಇದೇ ಅತಿ ದೊಡ್ಡ ಹೋರಾಟ ಎಂದು ವಿಶ್ಲೇಷಿಸಲಾಗಿದೆ. ಹಲವಾರು ವಿಶ್ವವಿದ್ಯಾಲಯಗಳು ವಿದ್ಯಾರ್ಥಿ ಚಳವಳಿಗೆ ಮಣಿದು ಅವರ ಆಗ್ರಹಗಳನ್ನು ಭಾಗಶಃ ಆದರೂ ಒಪ್ಪಿಕೊಳ್ಳಬೇಕಾಗಿದೆ.

ಆದರೆ ಪ್ರಪಂಚದಲ್ಲಿ ಅತ್ಯಂತ ಹೆಚ್ಚು ವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳು ಜಾರಿಯಲ್ಲಿರುವ ದೇಶವೆಂದು ಕೊಚ್ಚಿಕೊಳ್ಳುವ ಅಮೆರಿಕಾ ಸರ್ಕಾರ ಈ ಹೋರಾಟ ಮತ್ತು ವಿದ್ಯಾರ್ಥಿಗಳನ್ನು ನಡೆಸಿಕೊಂಡ ರೀತಿ ಅತ್ಯಂತ ಖಂಡನೀಯ. ಡೊನಾಲ್ಡ್ ಟ್ರಂಪ್ ಮತ್ತು ಜೋ ಬಿಡೆನ್ ಇಬ್ಬರೂ ಒಂದೇ ಭಾಷೆಯಲ್ಲಿ ಮಾತನಾಡಿದ್ದಾರೆ. ರಿಪಬ್ಲಿಕನ್ ಪಕ್ಷವಾಗಲಿ, ಡೆಮಾಕ್ರಟಿಕ್ ಪಕ್ಷವಾಗಲಿ ಅಮೆರಿಕಾದ ಬಂಡವಾಳಶಾಹಿ ವರ್ಗದ ಹಿತಾಸಕ್ತಿಯನ್ನೇ ಕಾಪಾಡುತ್ತವೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಅಮೆರಿಕಾದ ವಿದ್ಯಾರ್ಥಿಗಳ ಈ ಧೀರೋದಾತ್ತ ಹೋರಾಟ ಯುರೋಪು, ಆಸ್ಟ್ರೇಲಿಯಾ, ಜಪಾನ್ ಮುಂತಾದ ನೆಲಗಳಿಗೆ ಹರಡಿದೆ. ರಾಜಕೀಯ ಚಟುವಟಿಕೆಗಳೇ ವರದಿಯಾಗದ ಜಪಾನಿನಲ್ಲೂ ಕೂಡ ವಿದ್ಯಾರ್ಥಿಗಳು ಗಾಜಾದಲ್ಲಿ ಶಾಂತಿಗಾಗಿ, ಇಸ್ರೇಲಿನೊಂದಿಗೆ ಒಪ್ಪಂದಗಳನ್ನು ಮುರಿಯುವಂತೆ ಒತ್ತಾಯಿಸಿ ಪ್ರತಿಭಟನೆಗೆ ಇಳಿದಿದ್ದಾರೆ.

ಈ ಹೋರಾಟದಿಂದ ಸ್ಫೂರ್ತಿ ಪಡೆ–ಯುತ್ತಾ ನಾವು ಇನ್ನೂ ಒಂದು ಅಂಶವನ್ನು ಅರಿತುಕೊಳ್ಳುವುದು ಮುಖ್ಯ. ಒಂದು ನೈಜ ಕ್ರಾಂತಿಕಾರಿ ನಾಯಕತ್ವ ಇಲ್ಲದೇ ಹೋದರೆ ಎಷ್ಟೇ ತ್ಯಾಗ, ಬಲಿದಾನ, ಪ್ರಾಮಾಣಿಕತೆ ಇದ್ದಾಗಲೂ ಹೋರಾಟಗಳು ತಮ್ಮ ಉದ್ದೇಶಿತ ಅಂತಿಮ ಗುರಿಯನ್ನು ಸಾಧಿಸುವಲ್ಲಿ ಸಫಲವಾಗಿಲ್ಲ ಎಂಬುದು ಇತಿಹಾಸದಲ್ಲಿ ಪದೇಪದೇ ಸಾಬೀತಾಗಿದೆ. ಇಂದು ಯುದ್ಧಗಳು ನಡೆಯಲು ಸಾಮ್ರಾಜ್ಯಶಾಹಿ ಮಾರುಕಟ್ಟೆ ದಾಹವೇ ಕಾರಣ. ಇಂತಹ ಬಂಡವಾಳಶಾಹಿ – ಸಾಮ್ರಾಜ್ಯಶಾಹಿ ವ್ಯವಸ್ಥೆಯನ್ನು ಕೊನೆಗಾಣಿಸದೆ ಜಗತ್ತಿನಲ್ಲಿ ಶಾಂತಿ ಸ್ಥಾಪನೆ ಅಸಾಧ್ಯ. ಆದ್ದರಿಂದ ಅಸಮಾನತೆ, ಶೋಷಣೆಗಳಿಗೆ ಅಂತ್ಯ ಹಾಡುವ ಸಮಾಜವಾದಿ ವೈಚಾರಿಕತೆಯನ್ನು ವಿದ್ಯಾರ್ಥಿಗಳು ಮೈಗೂಡಿಕೊಂಡರೆ ಮಾತ್ರವೇ ತಮ್ಮ ಗುರಿಯನ್ನು ಅವರು ಮುಟ್ಟಲು ಸಾಧ್ಯ. ಭಾರತದ ವಿದ್ಯಾರ್ಥಿಗಳು ಕೂಡ ನ್ಯಾಯಕ್ಕಾಗಿ ಹೋರಾಡುವುದರಲ್ಲಿ ತಾವು ಯಾರಿಗೂ ಕಡಿಮೆಯಿಲ್ಲ ಎಂಬುದನ್ನು ತೋರಿಸಲು ಕೂಡ ಇದು ಸಕಾಲ. ■




ಕಲ್ಲಿಕೋಟೆ – ಕೇರಳ

## ಇಸ್ರೇಲಿಗೆ ಭಾರತದಿಂದ ಶಸ್ತ್ರಾಸ್ತ್ರ ಪೂರೈಕೆಗೆ ಎಸ್‌ಯುಸಿಐ(ಸಿ) ಖಂಡನೆ

"ಮೇ 17, 2024 ರಂದು ಪತ್ರಿಕೆಗಳಲ್ಲಿ ವರದಿಯಾದಂತೆ, ಸ್ಪ್ಯಾನಿಷ್ ವಿದೇಶಾಂಗ ಸಚಿವಾಲಯವು ಭಾರತದಿಂದ ಇಸ್ರೇಲ್‌ಗೆ 26.8 ಟನ್ ಸ್ಫೋಟಕಗಳನ್ನು ಸಾಗಿಸುತ್ತಿದ್ದ ಡೆನ್ಮಾರ್ಕ್ ಧ್ವಜ ಹೊಂದಿದ ಸರಕು ಹಡಗಿಗೆ ನಿಲುಗಡೆ ಅನುಮತಿಯನ್ನು ನಿರಾಕರಿಸಿದೆ. ಈ ಹಡಗು 26.8 ಟನ್ ಸ್ಫೋಟಕ ವಸ್ತುಗಳ ಸರಕುಗಳನ್ನು ಹೊತ್ತೊಯ್ಯುತ್ತಿತ್ತು, ಅಂದರೆ, 20 ಟನ್ ರಾಕೆಟ್ ಎಂಜಿನ್ (UN ಕೋಡ್ ಕ್ಲಾಸ್ 1.3C 186), ಸ್ಫೋಟಕಗಳಿಂದ ತುಂಬಿದ 12.5 ಟನ್ ರಾಕೆಟ್‌ಗಳು (ಕೋಡ್ 181), 1,500 ಕೆಜಿ ಸ್ಫೋಟಕ ವಸ್ತುಗಳು (477), ಮತ್ತು 740 ಕೆಜಿ ಮದ್ದುಗುಂಡುಗಳು, ಫಿರಂಗಿಗಳಿಗೆ ಪ್ರೊಪೆಲ್ಲಂಟ್‌ಗಳು (242). ಇದು ಪುಣೆಯ ಭಾರತೀಯ ಕಂಪನಿಗೆ ಸೇರಿದ್ದು ಎಂದು ವರದಿಯಾಗಿದೆ.

ಈ ಹಿಂದೆ, ಗಾಜಾದ ಮೇಲೆ ಇಸ್ರೇಲ್‌ನ ಯುದ್ಧ ಪ್ರಾರಂಭವಾದಾಗಿನಿಂದ ಖಾಸಗಿ ಕಂಪನಿ, ಪ್ರೀಮಿಯರ್ ಎಕ್ಸ್‌ಪ್ಲೋಸಿವ್ಸ್ ಲಿಮಿಟೆಡ್ (PEL) ಗೆ ಕಳೆದ ವರ್ಷ ನವೆಂಬರ್ 20, 2023 ಮತ್ತು ಜನವರಿ 01, 2024 ರಂದು ಎರಡು ಬಾರಿ ಸ್ಫೋಟಕಗಳನ್ನು ಮತ್ತು ಸಂಬಂಧಿತ ಬಿಡಿಭಾಗಗಳನ್ನು ರಫ್ತು ಮಾಡಲು ಅನುಮತಿ ನೀಡಲಾಗಿತ್ತು. ಇದು ಭಾರತ ಸರ್ಕಾರವು ಅಮೆರಿಕಾ ಸಾಮ್ರಾಜ್ಯಶಾಹಿಯೊಂದಿಗಿನ ಸ್ಪಷ್ಟವಾದ ಒಪ್ಪಂದದ ಮೂಲಕ, ಇಸ್ರೇಲ್‌ಗೆ ಯುದ್ಧ ಸಾಮಗ್ರಿಗಳು ಮತ್ತು ಮದ್ದುಗುಂಡುಗಳನ್ನು ಪೂರೈಸಿ, ಗಾಜಾದಲ್ಲಿ ಯುದ್ಧವನ್ನು ಉತ್ತೇಜಿಸುತ್ತಿದೆ ಎಂಬುದನ್ನು ತೋರಿಸುತ್ತದೆ. ಕಳೆದ ತಿಂಗಳು ಭಾರತವು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯಲ್ಲಿ ಇಸ್ರೇಲ್ ಮೇಲೆ ಶಸ್ತ್ರಾಸ್ತ್ರ ನಿರ್ಬಂಧ ಮತ್ತು ಗಾಜಾದಲ್ಲಿ ತಕ್ಷಣದ ಕದನ ವಿರಾಮಕ್ಕೆ ಕರೆ ನೀಡಿದ ಮತದಾನದಿಂದ ದೂರ ಸರಿದಾಗ ಭಾರತ ಸರ್ಕಾರದ ಈ ಪಾತ್ರ ಬೆಳಕಿಗೆ ಬಂದಿದೆ. ಭಾರತ ಸರ್ಕಾರದ ಈ ಪಾತ್ರ ಅತ್ಯಂತ ಖಂಡನೀಯವಾಗಿದೆ. ಮಾನವೀಯತೆ ಮತ್ತು ನಾಗರಿಕತೆಯ ಎಲ್ಲಾ ಮಾನದಂಡಗಳ ವಿರುದ್ಧ ಗಾಜಾದಲ್ಲಿ ನರಮೇಧವನ್ನು ಭಾರತವು ಉದ್ದೇಶಪೂರ್ವಕವಾಗಿ ಉತ್ತೇಜಿಸುತ್ತಿದೆ ಎಂದು ಅದು ಮತ್ತೊಮ್ಮೆ ದೃಢಪಡಿಸುತ್ತದೆ. ನಾವು ಭಾರತದ ಜನರು ಗಾಜಾ ಜನರ ನ್ಯಾಯಯುತ ಆಗ್ರಹದ ಪರವಾಗಿ ನಿಂತಿದ್ದೇವೆ. ಗಾಜಾದಲ್ಲಿ ಜನರ ನರಮೇಧವು ಮತ್ತಷ್ಟು ಉಲ್ಬಣಗೊಳ್ಳುವುದನ್ನು ತಡೆಗಟ್ಟಲು ಇಸ್ರೇಲ್‌ಗೆ ರವಾನೆಯಾಗುತ್ತಿರುವ ಎಲ್ಲಾ ಮದ್ದುಗುಂಡುಗಳ ಸರಬರಾಜನ್ನು ತಕ್ಷಣವೇ ನಿಲ್ಲಿಸಬೇಕೆಂದು ನಾವು ಭಾರತ ಸರ್ಕಾರಕ್ಕೆ ಒತ್ತಾಯಿಸುತ್ತೇವೆ.

**ಪ್ರವಾಶ್ ಘೋಷ್**
ಪ್ರಧಾನ ಕಾರ್ಯದರ್ಶಿಗಳು, ಎಸ್‌ಯುಸಿಐ(ಸಿ)
22.05.2024 ■



## ಅಮೆರಿಕಾದ ಇಸ್ರೇಲ್ ಪರ ನೀತಿಯ ವಿರುದ್ಧ ವಿದ್ಯಾರ್ಥಿಗಳ ಚಳುವಳಿ: ಎಸ್‌ಯುಸಿಐ(ಸಿ) ಬೆಂಬಲ

**ಎಸ್‌ಯುಸಿಐ (ಕಮ್ಯುನಿಸ್ಟ್)ನ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಪ್ರವಾಶ್ ಘೋಷ್ ನೀಡಿರುವ ಹೇಳಿಕೆ:**

ಗಾಜಾದಲ್ಲಿ ನರಮೇಧಕ್ಕೆ ಕಾರಣವಾಗಿರುವ ಅಮೆರಿಕಾ ಸರ್ಕಾರದ ಇಸ್ರೇಲ್ ಪರ ನೀತಿಯ ವಿರುದ್ಧ ನಿರಂತರ ಪ್ರತಿಭಟನೆಗಳನ್ನು ನಡೆಸುವ ಮೂಲಕ ಅಮೆರಿಕಾದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಮತ್ತೆ ಇತಿಹಾಸವನ್ನು ಸೃಷ್ಟಿಸುತ್ತಿದ್ದಾರೆ.

ವಿವಿಧ ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿಗಳು ತಂಗಲು ತಾತ್ಕಾಲಿಕ ಶಿಬಿರಗಳನ್ನು ನಿರ್ಮಿಸಲಾಗಿದೆ. ಗಾಜಾದಲ್ಲಿ ಪ್ಯಾಲೇಸ್ಟಿನಿಯನ್ ಜನರ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ಬೆಂಬಲಿಸುತ್ತಿರುವುದನ್ನು ನಿಲ್ಲಿಸಲು ಹಾಗೂ ಪ್ಯಾಲೇಸ್ಟಿನಿಯನ್ ಜನರ ವಿರುದ್ಧದ ಯುದ್ಧವನ್ನು ತಕ್ಷಣವೇ ನಿಲ್ಲಿಸಲು ಅವರು ಸರ್ಕಾರವನ್ನು ಆಗ್ರಹಿಸುತ್ತಿದ್ದಾರೆ. ಪೊಲೀಸರು ಪ್ರತಿಭಟನಾಕಾರರ ಮೇಲೆ ಹಲ್ಲೆ ನಡೆಸಿ, ಅವರನ್ನು ಬಂಧಿಸಿ ಚಿತ್ರಹಿಂಸೆಯನ್ನು ನೀಡಿದ್ದಾರೆ.

ವಿದ್ಯಾರ್ಥಿಗಳ ಈ ಪ್ರತಿಭಟನಾ ಚಳುವಳಿಯು, ವಿಯೆಟ್ನಾಂ ಮೇಲೆ ನಡೆದ ಯುದ್ಧದಲ್ಲಿ ಅಮೆರಿಕಾ ವಿದ್ಯಾರ್ಥಿಗಳ ಐತಿಹಾಸಿಕ ಚಳುವಳಿಯನ್ನು ನಮಗೆ ನೆನಪಿಸುತ್ತದೆ. ಭಾರತದ ಜನತೆಯ ಪರವಾಗಿ ಹೋರಾಟದಲ್ಲಿ ತೊಡಗಿರುವ ಈ ವಿದ್ಯಾರ್ಥಿಗಳಿಗೆ ನಮ್ಮ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತೇವೆ. ■

# ಇಸ್ರೇಲ್ ಮೇಲೆ ಇರಾನ್ ಕ್ಷಿಪಣಿ ದಾಳಿ: ಮುಂದುವರೆದ ಮುಸುಕಿನ ಕದನ

ಕಳೆದ ಏಪ್ರಿಲ್ 13ರಂದು ಇರಾನ್ ಸುಮಾರು 300 ಸ್ಫೋಟಕ ಡ್ರೋನ್‌ಗಳನ್ನು ಮತ್ತು ಕ್ಷಿಪಣಿಗಳನ್ನು ಇಸ್ರೇಲ್ ಮೇಲೆ ಹಾರಿಸಿತು. ಇವುಗಳಲ್ಲಿ ಹೆಚ್ಚಿನವುಗಳನ್ನು ಇಸ್ರೇಲ್ ಮತ್ತು ಅಮೇರಿಕಾ, ಬ್ರಿಟನ್ ಮತ್ತು ಜೋರ್ಡಾನ್‌ನ ವಾಯು ರಕ್ಷಣಾ ಪಡೆಗಳು ಹೊರಗಿನಿಂದ ತಡೆಹಿಡಿದಿವೆ ಎಂದು ಹೇಳಲಾಗಿದೆ. ಅಮೇರಿಕಾ ಸಾಮ್ರಾಜ್ಯಶಾಹಿಗಳು ಮತ್ತು ಅವರ ಸಹವರ್ತಿಗಳಿಂದ ಬೆಂಬಲಿತವಾದ ಜಿಯೋನಿಸ್ಟ್ (ಯಹೂದಿ ಜನಾಂಗೀಯವಾದಿ) ಇಸ್ರೇಲ್ ಮತ್ತು ಪಶ್ಚಿಮ ಏಷ್ಯಾದ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಗಳ ಬದ್ಧ ವೈರಿ ಆಗಿರುವ ಇರಾನ್ ನಡುವಿನ ದಶಕಗಳ ಮುಸುಕಿನ ಗುದ್ದಾಟದ ನಂತರ ಇದು ಮೊದಲನೇ ನೇರ ದಾಳಿಯಾಗಿದೆ. ಏಪ್ರಿಲ್ 1 ರಂದು ಇಸ್ರೇಲ್ ಸಿರಿಯಾದ ಡಮಾಸ್ಕಸ್‌ನಲ್ಲಿರುವ ಇರಾನ್‌ನ ರಾಯಭಾರಿ ಕಚೇರಿ ಮೇಲೆ ವೈಮಾನಿಕ ದಾಳಿ ನಡೆಸಿ 7 ಇರಾನಿ ಅಧಿಕಾರಿಗಳನ್ನು ಹಾಗೂ 6 ಜನ ಇತರರನ್ನು ಕೊಂದಿದ್ದಕ್ಕೆ ಪ್ರತೀಕಾರವಾಗಿ ಇರಾನ್, ಇಸ್ರೇಲ್ ಮೇಲೆ ದಾಳಿ ಮಾಡಿತು. ಈ ಘಟನೆಯ ಹೊರತಾಗಿಯೂ ಸಿರಿಯಾ, ಇರಾಕ್, ಓಮಾನ್, ಲೆಬನಾನ್‌ನಲ್ಲಿರುವ ಇರಾನಿನ ಅಧಿಕಾರಿಗಳ ಮೇಲೆ ಮತ್ತು ಕಳೆದ ಕೆಲವು ವರ್ಷಗಳಲ್ಲಿ ಇರಾನಿನ ನೆಲದ ಮೇಲೆಯೂ ಇಸ್ರೇಲ್ ಸರಣಿ ದಾಳಿಗಳನ್ನು ಮಾಡಿದೆ. ಇರಾನಿನ ಉನ್ನತ ಪರಮಾಣು ವಿಜ್ಞಾನಿ ಮೊಹಸೀನ್ ಫಕ್ರಿಝಡೆಃ ಅವರನ್ನು ನವೆಂಬರ್ 2021ರಲ್ಲಿ ಇಸ್ರೇಲ್ ಹತ್ಯೆ ಮಾಡಿತು. ಹೀಗೆ ಇರಾನಿನ ಮೇಲೆ ಇಸ್ರೇಲ್ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಡೆಸಿದ ದಾಳಿಗಳು ನೂರ್ಮಡಿಯಾಗಿವೆ.

**ಈ ಹಗೆತನ ಯಾಕೆ?**

ತೈಲ ಸಮೃದ್ಧ ಮಧ್ಯ ಪ್ರಾಚ್ಯದಲ್ಲಿ ಅಮೇರಿಕಾ ಸಾಮ್ರಾಜ್ಯಶಾಹಿಯ ಮೂಂಚೂಣಿ ನೆಲೆಯಾಗಿ ಇಸ್ರೇಲ್, ಅಮೇರಿಕಾದ ಆದೇಶಕ್ಕೆ ತಲೆಬಾಗಲು ನಿರಾಕರಿಸುವ ರಾಷ್ಟ್ರಗಳ ಮೇಲೆ ಮಿಲಿಟರಿ ದಾಳಿಗಳನ್ನು ದೀರ್ಘಕಾಲದಿಂದಲೂ ನಡೆಸುತ್ತಾ ಬಂದಿದೆ. ದಾಳಿಗೊಳಗಾಗಿರುವ ಪ್ಯಾಲೆಸ್ಟೈನ್, ಇರಾಕ್, ಸಿರಿಯಾ ಮತ್ತು ಲೆಬನಾನ್‌ಗಳ ಜೊತೆ ಆ ಪಟ್ಟಿಗೆ ಈಗ ಯೆಮೆನ್ ಸೇರ್ಪಡೆಯಾಗಿದೆ. ದಾಳಿಗೊಳಗಾದ ದೇಶಗಳು ಆತ್ಮರಕ್ಷಣೆಗಾಗಿ ಪ್ರತೀಕಾರ ಮಾಡಿದಾಗಲೆಲ್ಲಾ ಅವು ಆ ದೇಶಗಳ ಮೇಲೆ ಮತ್ತಷ್ಟು ತೀವ್ರವಾದ ದಾಳಿಯನ್ನು ನಡೆಸಲು ಜಿಯೋನಿಸ್ಟ್ ಆಡಳಿತಗಾರರಿಗೆ ನೆಪಗಳಾದವು. ಉದಾಹರಣೆಗೆ ಕಳೆದ ಅಕ್ಟೋಬರ್ 7 ರಂದು ಪ್ಯಾಲೆಸ್ಟೈನ್ ಬಂಡುಕೋರ ಗುಂಪಾದ ಹಮಾಸ್ ಇಸ್ರೇಲ್ ಮೇಲೆ ಪ್ರತೀಕಾರ ತೀರಿಸಿಕೊಳ್ಳಲು ದಾಳಿ ಮಾಡಿತು. ಇದನ್ನೇ ನೆಪವಾಗಿಟ್ಟುಕೊಂಡ ಇಸ್ರೇಲ್ ಪ್ಯಾಲೆಸ್ಟೀನ್‌ನ ಗಾಜಾ ಪಟ್ಟಿ ಮತ್ತು ವೆಸ್ಟ್ ಬ್ಯಾಂಕ್‌ಗಳಲ್ಲಿ ದೊಡ್ಡ ಪ್ರಮಾಣದ ನರಮೇಧವನ್ನೇ ಮಾಡಿಬಿಟ್ಟಿತು. ಇಸ್ರೇಲ್‌ನ ಈ 200 ದಿನಗಳ ದಾಳಿಯಲ್ಲಿ ಒಟ್ಟು ಸಾವಿನ ಸಂಖ್ಯೆ 42,510ಕ್ಕೆ ಏರಿದೆ. 10,091 ಮಹಿಳೆಯರು, 15,780 ಮಕ್ಕಳು ಸೇರಿದಂತೆ ಒಟ್ಟು 38,621 ನಾಗರಿಕರು ಸಾವಿಗೀಡಾಗಿದ್ದಾರೆ. ಸಾವಿರಾರು ದೇಹಗಳು ಇನ್ನೂ ಅವಶೇಷಗಳ ಅಡಿಯಲ್ಲಿ ಸಿಲುಕಿಕೊಂಡಿವೆ. ಸಾವಿರಾರು ಜನರು ಕಾಣೆಯಾಗಿದ್ದರಿಂದ ಅವರೆಲ್ಲರೂ ಸತ್ತಿದ್ದಾರೆಂದು ಭಾವಿಸಲಾಗಿದೆ. ಇದರ ವಿರುದ್ಧ ಜಗತ್ತಿನಾದ್ಯಂತ ನಡೆಯುತ್ತಿರುವ ಜನರ ಪ್ರತಿಭಟನೆಯನ್ನು ನಿರ್ಲಕ್ಷಿಸಿ ಈ ಕ್ರೌರ್ಯವು ಮುಂದುವರಿಯುತ್ತಲೇ ಇದೆ.

ಹಾಗೆಯೇ ಸೌದಿ ಅರೇಬಿಯಾ–ಅಮೇರಿಕಾ–ಯುಕೆ–ಗಲ್ಫ್ ಕೋಆಪರೇಷನ್ ಕೌನ್ಸಿಲ್ (ಜಿಸಿಸಿ)ಗಳು ಒಂದಾಗಿ ಯೆಮೆನ್ ಮೇಲೆ ನಡೆಸಿದ 10 ವರ್ಷಗಳ ಸುದೀರ್ಘ ದಾಳಿಗೆ ಪ್ರತೀಕಾರವಾಗಿ ಯೆಮೆನ್‌ನ ಹೌತಿ ಬಂಡುಕೋರ ಪಡೆ ಪ್ರತಿಭಟನೆಯ ಬಹಿರಂಗ ಘೋಷಣೆ ಮಾಡಿ, ಕೆಂಪು ಸಮುದ್ರದ ಉದ್ದಕ್ಕೂ ಪ್ರಯಾಣಿಸುತ್ತಿದ್ದ ಅಮೇರಿಕಾ–ಯುಕೆ ವಾಣಿಜ್ಯ ಹಡಗುಗಳ ಮೇಲೆ ದಾಳಿ ನಡೆಸಿತು. ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ಬಣವು ಈ ದಾಳಿಯನ್ನು ಕಡಲ್ಗಳ್ಳತನದ ಕೃತ್ಯ ಎಂದು ಕರೆದಿದೆ. ಜೊತೆಗೆ ಹಮಾಸ್ ಮತ್ತು ಹೌತಿಗಳ ಈ ಕೃತ್ಯಗಳಿಗೆ ಇರಾನಿನ ಬೆಂಬಲವಿದೆ ಎಂದು ಅದರ ಕಡೆ ಬೆರಳು ಮಾಡಿ ತೋರಿಸುತ್ತಿದೆ. ಅಮೇರಿಕಾ ಸಾಮ್ರಾಜ್ಯಶಾಹಿಗಳು ಮತ್ತು ಅವರ ಮಿತ್ರ ಇಸ್ರೇಲ್‌ಗೆ ಪಶ್ಚಿಮ ಏಷ್ಯಾದ ದೇಶಗಳ ತೈಲ ಕ್ಷೇತ್ರಗಳನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಬಿಡದ ಇರಾನ್, ಅವರ ಕೆಂಗಣ್ಣಿಗೆ ಗುರಿಯಾಯಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಅಮೇರಿಕಾದ ತೀರ್ಪಿನ ಮುಂದೆ ತಲೆಬಾಗಲು ನಿರಾಕರಿಸಿದ ಇರಾನ್‌ನ ನಡೆಯು ಅವರ ಅಸಮಾಧಾನ ಇನ್ನೂ ಹೆಚ್ಚಾಗಲು ಕಾರಣವಾಯಿತು. ಅಂದಿನಿಂದ ಪಶ್ಚಿಮ ಏಷ್ಯಾದಲ್ಲಿ ಇಸ್ರೇಲ್ ನಂತರ ಅತ್ಯಂತ ಶಕ್ತಿಶಾಲಿ ಮಿಲಿಟರಿ ಹೊಂದಿರುವ ಇರಾನ್ ಆ ಪ್ರದೇಶದಲ್ಲಿ ಅತ್ಯಂತ ಪ್ರತಿಕೂಲವಾಗಿರುವ ದೇಶ ಎಂದು ಅಮೇರಿಕಾದಿಂದ ಕರೆಯಲ್ಪಟ್ಟಿತು. ಇಸ್ರೇಲ್ ಮತ್ತು ಅಮೇರಿಕಾ ಇರಾನ್‌ನೊಂದಿಗೆ ಮಾಡಿಕೊಂಡ ಪರಮಾಣು ಒಪ್ಪಂದದಿಂದ 8 ಮೇ 2018 ರಲ್ಲಿ ಏಕಪಕ್ಷೀಯವಾಗಿ ಹಿಂದೆ ಸರಿದವು ಮತ್ತು ಇರಾನ್ ಮೇಲೆ ಇನ್ನೂ ಕಠಿಣವಾದ ನಿರ್ಬಂಧಗಳನ್ನು ವಿಧಿಸಿದವು.

**ನಿರಂಕುಶ ರಾಜಪ್ರಭುತ್ವದ ಬೂರ್ಜ್ವಾ ಮೂಲಭೂತವಾದಿ ದೇಶ ಇರಾನ್**

1979ರಲ್ಲಿ ಅಮೇರಿಕಾ–ಯುಕೆ ಬೆಂಬಲಿತ ಮಹಮ್ಮದ್ ರೇಜಾ ಶಾ ಪಹಲವಿಯ ನಿರಂಕುಶ ಆಡಳಿತವನ್ನು ಇರಾನಿನ ಕ್ರಾಂತಿಯು ನೆಲಕ್ಕುರುಳಿಸಿತು. ಇದಕ್ಕೆ ನೇತೃತ್ವ ನೀಡಿದ್ದು, ಇಸ್ಲಾಮಿಕ್ ಮೂಲಭೂತವಾದಿ, ಧಾರ್ಮಿಕ ದುರಭಿಮಾನಿಯಾಗಿರುವ ಆಯತೊಲ್ಲಾ ಖೊಮೇನಿ ಮತ್ತು ಸಮಾಜವಾದಿ–ಕಮ್ಯುನಿಸ್ಟ್ ಪರ ಕೆಲವು ಅಂಶಗಳನ್ನು ಹೊಂದಿರುವ ಇರಾನಿನ ಮಂದಗಾಮಿ ಬೂರ್ಜ್ವಾ ವರ್ಗವು ಪರಿಷ್ಕರಣವಾದಿ ಸೋವಿಯತ್ ನಾಯಕತ್ವದ ಅನುಯಾಯಿಯಾಗಿರುವ ಭೂಗತ ಟ್ಯುಡ್ ಪಕ್ಷದೊಂದಿಗೆ ಸೇರಿಕೊಂಡು ಮಾಡಿಕೊಂಡ ಒಂದು ಅನುಕೂಲಕರ ಒಪ್ಪಂದದ ಮೂಲಕ ರಚನೆಯಾದ ರಾಷ್ಟ್ರೀಯ ವೇದಿಕೆ. ಈ ಘಟಕದೊಳಗಿನ ಅಧಿಕಾರಕ್ಕಾಗಿಯ ಕಿತ್ತಾಟದ ಹೊರತಾಗಿಯೂ ಈ ರಾಷ್ಟ್ರೀಯ ಕ್ರಾಂತಿಯು ಇರಾನಿನ ಕಾರ್ಮಿಕ ವರ್ಗದ ಮಹಾನ್ ಸಮರ ಶೀಲತೆ ಮತ್ತು ಸಾವಿಗೆ ಸವಾಲೊಡ್ಡುವ ಮನೋಭಾವವನ್ನು ಮುನ್ನೆಲೆಗೆ ತಂದಿತು. ಆದರೆ, ಬಂಡವಾಳಶಾಹಿ ವಿರೋಧಿ ಕ್ರಾಂತಿಯ ಭಯದ ಮಾನಸಿಕತೆಯಿಂದ ಮತ್ತು ಎಡಪಂಥೀಯ ಶಕ್ತಿಗಳ ಬೆಳವಣಿಗೆಯಿಂದ ಭಯಕ್ಕೊಳಗಾದ ಇರಾನ್‌ನ ಬೂರ್ಜ್ವಾ ವರ್ಗವು ಇಸ್ಲಾಮಿಕ್ ಮೂಲಭೂತವಾದಿ ಖೊಮೇನಿಯೊಂದಿಗೆ ಸೇರಿಕೊಂಡು ಎಡಪಂಥೀಯರನ್ನು ನಾಶ ಮಾಡಲು ಎಲ್ಲಾ ರೀತಿಯ ತಂತ್ರಗಳನ್ನು ಹೂಡಿತು. ಆದರೆ ಶಾ ಆಡಳಿತದ ವಿರುದ್ಧ ಇರಾನಿಯನ್ ಜನರು ವೀರೋಚಿತವಾಗಿ ಹೋರಾಡಿದ್ದರೂ ಅವರು ಧಾರ್ಮಿಕವಾಗಿ ಸಾಂಪ್ರದಾಯಿಕವಾಗಿಯೇ ಇದ್ದರು. ಹಾಗಾಗಿ ಖೊಮೇನಿಯ ಕ್ರೂರ ನಿರಂಕುಶ ಆಡಳಿತವು ಕಳೆದ ನಾಲ್ಕು ದಶಕಗಳ ಕಾಲ ಮುಂದುವರೆಯಿತು. ಒಂದು ಕಾಲದಲ್ಲಿ ಪ್ರಬಲವಾದ ಕಮ್ಯುನಿಸ್ಟ್ ಚಳುವಳಿಯ ನೆಲೆಯಾಗಿದ್ದ ಇರಾನ್ ಈಗ ಸಮಾಜವಾದಿ ಬಣ ಪತನಕ್ಕೀಡಾದ ನಂತರ ಪ್ರಜಾಪ್ರಭುತ್ವದ ಮುಖವಾಡ ಹಾಕಿಕೊಂಡಿರುವ ನಿರಂಕುಶ ಬೂರ್ಜ್ವಾ ರಾಜಪ್ರಭುತ್ವದ ಮೂಲಭೂತವಾದಿ ರಾಜ್ಯವಾಗಿದೆ.

**ಇಸ್ರೇಲ್–ಇರಾನ್ ಯುದ್ಧ: ಎರಡು ಸಾಮ್ರಾಜ್ಯಶಾಹಿ ಶಿಬಿರಗಳ ನಡುವಿನ ಮುಸುಕಿನ ಕದನ**

ವಾಸ್ತವವಾಗಿ, ಪ್ರಸ್ತುತ ಇರಾನ್–ಇಸ್ರೇಲ್ ಸಂಘರ್ಷವು ಎರಡು ಉಗ್ರ ಸಾಮ್ರಾಜ್ಯಶಾಹಿ ಶಿಬಿರಗಳ ನಡುವಿನ ಮುಸುಕಿನ ಕದನದ ಅಭಿವ್ಯಕ್ತಿಯಾಗಿದೆ. ಒಂದು ಅಮೇರಿಕಾ ಸಾಮ್ರಾಜ್ಯಶಾಹಿ, ಇನ್ನೊಂದು ಚೀನಾ–ರಷ್ಯಾ ಸಾಮ್ರಾಜ್ಯಶಾಹಿ. ಅಮೇರಿಕಾ ಮತ್ತು ಅದರ ಮಿತ್ರ ರಾಷ್ಟ್ರಗಳಿಗೆ ಅನನುಕೂಲವಾಗುವಷ್ಟರ ಮಟ್ಟಿಗೆ ಚೀನಾ ಈಗಾಗಲೇ ಮಧ್ಯಪ್ರಾಚ್ಯ ದೇಶಗಳಲ್ಲಿ ತನ್ನ ನಿರ್ಣಾಯಕ ಪ್ರವೇಶವನ್ನು ಮಾಡಿಬಿಟ್ಟಿದೆ. ರಷ್ಯಾ–ಚೀನಾ ಒಟ್ಟಿಗೆ ಇರಾನ್‌ನನ್ನು ಬೆಂಬಲಿಸಿದರೆ, ಅಮೇರಿಕಾ ಸಾಮ್ರಾಜ್ಯಶಾಹಿಯ ಬೆಂಬಲದಿಂದ ಇಸ್ರೇಲ್ ತನ್ನ ಬಾಹುಬಲವನ್ನು ಹೆಚ್ಚಿಸಿಕೊಳ್ಳುತ್ತಿದೆ. ಇಸ್ರೇಲ್ ಮತ್ತು ಇರಾನ್ ಎರಡೂ ಕೂಡ ಪರಮಾಣು ಶಕ್ತಿಗಳಾಗಿರುವುದರಿಂದ, ಯಾವುದೇ ಪೂರ್ಣ ಪ್ರಮಾಣದ ಯುದ್ಧಕ್ಕೆ ಹೋಗದೆ ಅವುಗಳ ನಡುವಿನ ಸಂಘರ್ಷವು ಕೇವಲ ಸಣ್ಣಮಟ್ಟದ ಚಕಮಕಿಗಳಿಗೆ ಸೀಮಿತವಾಗಿದೆ. ಇಸ್ರೇಲ್‌ನ ಆಯ್ದ ಸ್ಥಳಗಳಲ್ಲಿ ಡ್ರೋನ್ ದಾಳಿಯನ್ನು ಪ್ರಾರಂಭಿಸುವ 72 ಗಂಟೆಗಳ ಮೊದಲು ಇರಾನ್ ಅಮೇರಿಕಾಗೆ ಮಾಹಿತಿ ನೀಡಿದೆ ಎಂದು ವರದಿಯಾಗಿದೆ. ಆದ್ದರಿಂದ ಇದೀಗ ಯುದ್ಧ ಇನ್ನೂ ತೀವ್ರಗೊಳ್ಳುವ ಸಾಧ್ಯತೆ ಕಡಿಮೆಯೇ.

ಎಸ್‌ಯುಸಿಐ(ಸಿ) ಪಕ್ಷದ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಗಳು ಹಾಗೂ ಈ ಯುಗದ ಮಹಾನ್ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್‌ರವರು, "ಸಾಮ್ರಾಜ್ಯಶಾಹಿಗಳು–ಬಂಡವಾಳಶಾಹಿಗಳು ಬಿಕ್ಕಟ್ಟನ್ನು ಮೂಂದೂಡುವ ಮತ್ತು ಮಾರುಕಟ್ಟೆಯ ಸ್ಥಿರತೆಯನ್ನು ಕಾಪಾಡಿಕೊಳ್ಳುವ ಪ್ರಯತ್ನದಲ್ಲಿ ತಾತ್ಕಾಲಿಕವಾಗಿಯಾದರೂ ಮಿಲಿಟರಿ ಬಳಕೆಯನ್ನು ಕೃತಕವಾಗಿ ಉತ್ತೇಜಿಸುತ್ತಿವೆ. ಆದರೆ ಇದು ಪರಿಸ್ಥಿತಿಯನ್ನು ತಿಳಿಗೊಳಿಸುವ ಬದಲು ಬಂಡವಾಳಶಾಹಿ ನಡುವಿನ ದ್ವಂದ್ವಗಳನ್ನು ಮತ್ತು ಬಿಕ್ಕಟ್ಟನ್ನು ಮತ್ತಷ್ಟು ಹೆಚ್ಚಿಸುತ್ತಿದೆ ಮತ್ತು ಈ ಬಿಕ್ಕಟ್ಟು ಹೆಚ್ಚಾದಂತೆ ಆರ್ಥಿಕತೆಯೂ ಕೂಡ ಹೆಚ್ಚು ಮಿಲಿಟರೀಕರಣಗೊಳ್ಳುತ್ತದೆ" ಎಂದು 6 ದಶಕಗಳ ಹಿಂದೆಯೇ ಹೇಳಿದ್ದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವಾಗುತ್ತದೆ. ಮಿಲಿಟರೀಕರಣವು ಶಸ್ತ್ರಾಸ್ತ್ರಗಳ ದಾಸ್ತಾನು, ಶಸ್ತ್ರಾಸ್ತ್ರ ಸ್ಪರ್ಧೆ ಮತ್ತು ಅದರ ಮೂಲಕ ಯುದ್ಧಕ್ಕೆ ಕಾರಣವಾಗುತ್ತದೆ. ಸಾಮ್ರಾಜ್ಯಶಾಹಿಯಿಂದ ಪ್ರಚೋದಿಸಲ್ಪಟ್ಟ ಆಧುನಿಕ ಯುದ್ಧವು ಮೂರು ಉದ್ದೇಶಗಳನ್ನು ಹೊಂದಿದೆ 1. ಶಸ್ತ್ರಾಸ್ತ್ರಗಳ ದಾಸ್ತಾನನ್ನು ಬಳಸಿ ಖಾಲಿ ಮಾಡುವುದು 2. ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಪ್ರದರ್ಶನ ಮತ್ತು 3. ವಿದೇಶಿ ರಾಷ್ಟ್ರಗಳು ತಮಗೆ ತಲೆಬಾಗುವಂತೆ ಅವುಗಳನ್ನು ಬೆದರಿಸುವುದು. ಈ ಉದ್ದೇಶದಿಂದಲೇ ಸಾಮ್ರಾಜ್ಯಶಾಹಿಗಳು ಸ್ಥಳೀಯ ಅಥವಾ ಭಾಗಶಃ ಯುದ್ಧಗಳನ್ನು ನಿರಂತರವಾಗಿ ಸೃಷ್ಟಿಸುತ್ತಲೇ ಇದ್ದಾರೆ. ಇದೀಗ ಸಿರಿಯಾದ ನಂತರ ಪ್ಯಾಲೆಸ್ಟೀನ್, ಉಕ್ರೇನ್ ಮತ್ತು ಯೆಮೆನ್ ಅದನ್ನು ಎದುರಿಸುತ್ತಿವೆ. ಇಸ್ರೇಲ್–ಇರಾನ್ ಸಂಘರ್ಷವು ಸಹ ಒಂದು ಮುಸುಕಿನ ಕದನವಾಗಿದೆ.

ಆದರೆ ಇಲ್ಲಿ ಬಲಿಪಶುಗಳು ಯಾರು? ಅಮಾಯಕ ಜನತೆ. ದಾಳಿಕೋರ ಮತ್ತು ದಾಳಿಗೊಳಗಾದ ದೇಶಗಳ ಸಾಮಾನ್ಯ ಜನರು ಯಾವುದೇ ಪ್ರತಿಭಟನೆ ಇಲ್ಲದೆ ಸುಮ್ಮನೆ ಇದನ್ನು ಸಹಿಸಿಕೊಳ್ಳಬೇಕೆ? ಖಂಡಿತ ಇಲ್ಲ! ಅವರು ಎಚ್ಚೆತ್ತುಕೊಳ್ಳಬೇಕು, ಒಗ್ಗೂಡುತ್ತಾ ಸಾಮ್ರಾಜ್ಯಶಾಹಿ ಶಿಬಿರಗಳ ಈ ಯುದ್ಧ ಕುತಂತ್ರವನ್ನು ತಡೆಯಲು ಸರಿಯಾದ ಕ್ರಾಂತಿಕಾರಿ ನಾಯಕತ್ವದ ಅಡಿಯಲ್ಲಿ ಸಂಘಟಿತ ಶಕ್ತಿಶಾಲಿ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯನ್ನು ಮುನ್ನಡೆಸಬೇಕು.




# ಮತದಾನದ ಮಾಹಿತಿ ನೀಡಿ: ಎಸ್‌ಯುಸಿಐ(ಸಿ) ಒತ್ತಾಯ

"1952ರ ಸಾರ್ವತ್ರಿಕ ಚುನಾವಣೆಯಿಂದಲೂ ಚಾಲ್ತಿಯಲ್ಲಿರುವ ಚುನಾವಣಾ ರೂಢಿಯನ್ನು ಸಂಪೂರ್ಣವಾಗಿ ಉಲ್ಲಂಘಿಸಿರುವ ಭಾರತೀಯ ಚುನಾವಣಾ ಆಯೋಗವು (ಇಸಿಐ) ಚುನಾವಣೆಯ ಹಿಂದಿನ ಹಂತಗಳ ವಿವರವಾದ ಮತದಾನದ ಮಾಹಿತಿಯನ್ನು ಘೋಷಿಸಲು,ಹಲವು ಪಕ್ಷಗಳಿಂದ ಮನವಿ ಬಂದ ನಂತರವೂ ನಿರಾಕರಿಸಿರುವುದು ತೀವ್ರ ಕಳವಳಕಾರಿ ಸಂಗತಿಯಾಗಿದೆ. ಬದಲಿಗೆ ತನ್ನ ವೈಫಲ್ಯವನ್ನು ಮುಚ್ಚಿಡಲು ಒಪ್ಪಲಸಾಧ್ಯವಾದ ಕಾರಣಗಳನ್ನು ನೀಡುತ್ತಿದೆ. ನಮೂನೆ 17ಸಿ ಯಲ್ಲಿ ಆಯಾ ಮತಗಟ್ಟೆ ಅಧ್ಯಕ್ಷರು ನೀಡಿದ ಬೂತು ಮಟ್ಟದ ಮತದಾನದ ಸಂಖ್ಯೆಗಳು ಚುನಾವಣಾ ಆಯೋಗದ ಕೈಯಲ್ಲಿರುವಾಗ, ಅದನ್ನು ಸಾರ್ವಜನಿಕವಾಗಿ ಘೋಷಿಸುವುದನ್ನು ತಡೆಯುತ್ತಿರುವ ಶಕ್ತಿ ಯಾವುದು ಎಂದು ಆಯೋಗವೇ ಉತ್ತರಿಸಬೇಕು.

ಇದಲ್ಲದೆ, ಇಸಿಐ ಇಂದ ಶೇಕಡಾವಾರು ಪ್ರಮಾಣದಲ್ಲಿ ಘೋಷಿಸಲಾದ ಪರಿಷ್ಕೃತ ಅಂತಿಮ ಮತದಾನದ ಅಂಕಿಅಂಶಗಳ ಬಗ್ಗೆಯೂ ಪ್ರಶ್ನೆಗಳನ್ನು ಎತ್ತಲಾಗುತ್ತಿದೆ, ಏಕೆಂದರೆ ಇದರಲ್ಲಿ ಪ್ರಾಥಮಿಕ ಮಾಹಿತಿಗಿಂತ 6% ಮತ್ತು ಅದಕ್ಕಿಂತ ಹೆಚ್ಚಿನ ಅಸಹಜ ಏರಿಕೆಯಿದೆ. 2024 ರ ಲೋಕಸಭಾ ಚುನಾವಣೆಯ ಮೊದಲ ನಾಲ್ಕು ಹಂತಗಳ, ಪ್ರತಿ ಹಂತದ ಮತದಾನದ ದಿನದ ತಡರಾತ್ರಿಯ (ಪ್ರತಿ ಚುನಾವಣೆಯಲ್ಲೂ ಮತದಾನ ಪ್ರಕ್ರಿಯೆಯು ತಡರಾತ್ರಿಯವರೆಗೆ ಮುಂದುವರಿಯುತ್ತದೆ, ಇದು ಹೊಸದಲ್ಲ) ಮತ್ತು ಇತ್ತೀಚಿನ ನವೀಕರಿಸಿದ ಅಂಕಿಅಂಶಗಳನ್ನು ವಿಶ್ಲೇಷಿಸಿ ಕೆಲವು ಪ್ರತಿಷ್ಠಿತ ಮಾಧ್ಯಮ ಸಂಸ್ಥೆಗಳು ವರದಿ ಮಾಡಿದ ಪ್ರಕಾರ ಎರಡರ ನಡುವೆ ಸುಮಾರು 1.07 ಕೋಟಿ ಮತಗಳಷ್ಟು ಅಂತರವಿದೆ. ಅಂದರೆ ಇದು ಮತದಾನ ಮುಗಿದ 379 ಸ್ಥಾನಗಳಿಗೆ ಪ್ರತಿ ಕ್ಷೇತ್ರಕ್ಕೆ ಸರಾಸರಿ 28,000 ಮತಗಳು. ಇದು ಕಂಡರಿಯದುದಷ್ಟೇ ಅಲ್ಲ, ಚುನಾವಣೆಯ ಪ್ರಕ್ರಿಯೆಯ ಬಗ್ಗೆ ಅನುಮಾನ ಮತ್ತು ಆತಂಕವನ್ನು ಸೃಷ್ಟಿಸುತ್ತದೆ! ಇದು ನಿಜವೆಂದೇ ಆದರೆ, ಇದು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಯ ಮತ್ತು ಪ್ರಜಾಪ್ರಭುತ್ವದ ಅಣಕವಲ್ಲದೆ ಮತ್ತೇನಲ್ಲ!

ಹಾಗಾಗಿ, ಅಂತಿಮ ಮತದಾರರ ಅಂಕಿ–ಅಂಶ ಬಿಡುಗಡೆಯಲ್ಲಿ ವಿಳಂಬ, ಹೆಚ್ಚಿನ ಪರಿಷ್ಕೃತ ಶೇಕಡಾವಾರು ಅಂಕಿಅಂಶಗಳು ಮತ್ತು ಕ್ಷೇತ್ರ ಮತ್ತು ಮತಗಟ್ಟೆ ಮಟ್ಟದ ಅಂತಿಮ ಮತದಾನದ ಮಾಹಿತಿಯು ಸಂಖ್ಯೆಯಲ್ಲಿ ಇಲ್ಲದಿರುವುದು ಜನರ ಮನಸ್ಸಿನಲ್ಲಿ ಹಲವಾರು ಪ್ರಶ್ನೆಗಳನ್ನು ಹುಟ್ಟುಹಾಕುತ್ತಿದೆ. ಚುನಾವಣೆಗಳನ್ನು ಮುಕ್ತ ಮತ್ತು ನ್ಯಾಯಯುತವಾಗಿ ನಡೆಸಲು ಮತ್ತು ಮತಗಳ ಎಣಿಕೆಯನ್ನು ಖಚಿತಪಡಿಸಿಕೊಳ್ಳಲು, 17ಸಿ ಯನ್ನು ತಕ್ಷಣವೇ ಅಪ್ಲೋಡ್ ಮಾಡಲು ಮತ್ತು ಅದಕ್ಕೆ ಅನುಗುಣವಾಗಿ ಕ್ಷೇತ್ರ ಮತ್ತು ಬೂತ್‌ವಾರು ಮತದಾನದ ಸಂಖ್ಯೆಯನ್ನು ಘೋಷಿಸಲು ಹಾಗೂ ಮತಗಳ ಎಣಿಕೆಯ ಸಮಯದಲ್ಲಿ ಅದೇ ಮತಗಳ ಸಂಖ್ಯೆಯನ್ನು ಖಚಿತಪಡಿಸಿಕೊಳ್ಳಲು ನಾವು ಚುನಾವಣಾ ಆಯೋಗವನ್ನು ಒತ್ತಾಯಿಸುತ್ತೇವೆ."

**ಪ್ರವಾಶ್ ಘೋಷ್**
**ಪ್ರಧಾನ ಕಾರ್ಯದರ್ಶಿಗಳು, ಎಸ್‌ಯುಸಿಐ(ಸಿ)**
**24.05.2024**

# ಲಡಾಕ್ : ಪರಿಸರ, ಅಸ್ತಿತ್ವ ಹಾಗೂ ನ್ಯಾಯಯುತ ಹಕ್ಕುಗಳಿಗಾಗಿ ಹೋರಾಟ

ಹಿಮಾಲಯದಲ್ಲಿ ಮನೆ ಮಾಡಿಕೊಂಡಿರುವ, ಬೃಹತ್ತಾದ ಕಣಿವೆಗಳ ನಾಡು ಲಡಾಕ್‌ನ ಜನರು ಈಗ ಕವಲು ದಾರಿಯಲ್ಲಿದ್ದಾರೆ, ಹೋರಾಟದ ಹಾದಿಯನ್ನು ಹಿಡಿದಿದ್ದಾರೆ. ಲಡಾಕ್ ಅನ್ನು 6ನೇ ಶೆಡ್ಯೂಲ್ (ಅನುಬಂಧ 6)ಗೆ ಸೇರಿಸಿ, ಸಾಂವಿಧಾನಿಕ ಭದ್ರತೆ ನೀಡುವುದಾಗಿ 2019ರ ಲೋಕಸಭೆ ಚುನಾವಣೆ ಹಾಗೂ ಲೇ ಹಿಲ್ ಕೌನ್ಸಿಲ್ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಭರವಸೆ ನೀಡಿತ್ತು. ಆದರೆ ಬಿಜೆಪಿ ಸರ್ಕಾರ ತಾನು ನೀಡಿದ ಭರವಸೆಗಳನ್ನು ಈಡೇರಿಸದೆ ಮೋಸ ಮಾಡಿತು ಎಂಬ ಕಾರಣಕ್ಕಾಗಿ, 2020ರಿಂದ ಜನತೆ ಪದೇ ಪದೇ ರಸ್ತೆಗಿಳಿಯುತ್ತಿದ್ದಾರೆ. ಕಾರ್ಗಿಲ್ ಡೆಮಾಕ್ರಟಿಕ್ ಅಲಿಯನ್ಸ್ ಸಂಘಟನೆಯು, ಪರಿಸರವಾದಿ ಹೋರಾಟಗಾರ ಹಾಗೂ ಮ್ಯಾಗ್ಸೆಸೆ ಪ್ರಶಸ್ತಿ ವಿಜೇತರಾದ ಸೋನಂ ವಾಂಗ್ಚುಕ್ ಅವರ ಉಪವಾಸ ಸತ್ಯಾಗ್ರಹದಲ್ಲಿ ಭಾಗಿಯಾಗುವುದರೊಂದಿಗೆ ಪ್ರಸ್ತುತ ನಡೆಯುತ್ತಿರುವ ಹೋರಾಟವು ಮತ್ತಷ್ಟು ಬೃಹತ್ ಸ್ವರೂಪ ಪಡೆದುಕೊಂಡಿತು. ಕಳೆದ ಹಲವು ದಶಕಗಳಿಂದ ಹಿಮಾಲಯದ ಪ್ರದೇಶಗಳಾದ ಹಿಮಾಚಲ ಪ್ರದೇಶ, ಉತ್ತರಾಖಂಡ ಹಾಗೂ ಸಿಕ್ಕಿಂ ರಾಜ್ಯಗಳ ಪರಿಸರದಲ್ಲುಂಟಾಗುತ್ತಿರುವ ದುರಂತಗಳನ್ನು ತಡೆಗಟ್ಟುವುದು ಕೂಡ ತನ್ನ ಹೋರಾಟದ ಗುರಿ ಎಂದು ಸೋನಂ ವಾಂಗ್ಚುಕ್ ಅವರು ಹೇಳಿದ್ದಾರೆ. ದೂರದೃಷ್ಟಿಯುಳ್ಳ ಶಿಕ್ಷಣ ತಜ್ಞರು ಹಾಗೂ ಪರಿಸರ ಹೋರಾಟದ ರೂವಾರಿ ಸೋನಂ ವಾಂಗ್ಚುಕ್ ಅವರು ಲಡಾಕ್‌ನ ಬಲಿಷ್ಠವಾದ ಧ್ವನಿಯಾಗಿ ಹೊರಹೊಮ್ಮಿದ್ದಾರೆ. ಸೃಜನಾತ್ಮಕವಾದ ಶೈಕ್ಷಣಿಕ ಪದ್ಧತಿಯಿಂದ ವಾಂಗ್ಚುಕ್ ಅವರು ಜಗತ್ತಿನಾದ್ಯಂತ ಜನಪ್ರಿಯರಾಗಿದ್ದಾರೆ. ವಾಂಗ್ಚುಕ್ ಅವರು ಈ ವೇದಿಕೆಯನ್ನು ಬಳಸಿಕೊಂಡು, ಲಡಾಕ್‌ನ ಪರಿಸರ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ. ಲಡಾಕ್‌ನ ಹೋರಾಟಗಳು ಒಂದು ವರ್ಷ ನಡೆದ ರೈತ ಹೋರಾಟವನ್ನು ನೆನಪಿಸುತ್ತವೆ. ಇಷ್ಟೆಲ್ಲಾ ಮಹತ್ವದ ಬೆಳವಣಿಗೆಗಳು ನಡೆಯುತ್ತಿದ್ದರೂ, ಸಾಕಷ್ಟು ಸವಾಲುಗಳಿದ್ದರೂ, ರಾಷ್ಟ್ರೀಯ ಮಾಧ್ಯಮಗಳು ಮೌನವಹಿಸಿವೆ. ಮಾಧ್ಯಮಗಳು ಪ್ರಚಾರ ಕೊಡದೆ ಇರುವುದರಿಂದ, ಲಡಾಕ್‌ನ ಸಮಸ್ಯೆಗಳು ಮುನ್ನೆಲೆಗೆ ಬಂದಿಲ್ಲ ಹಾಗೂ ಲಡಾಕ್‌ನ ಜನರಲ್ಲಿ ತಾವು ನಿರ್ಲಕ್ಷ್ಯಕ್ಕೆ ಒಳಗಾಗಿದ್ದೇವೆ ಎಂಬ ಮನೋಭಾವ ಮೂಡಿದೆ.

### ವಿಧಿ 370 ರದ್ದತಿ ಹಾಗೂ ನಾಮಕಾವಾಸ್ತೆ ಪುನರ್‌ಸಂಘಟನೆ

2019ರಲ್ಲಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ವಿಧಿ 370 ಅನ್ನು ರದ್ದುಗೊಳಿಸಿತು. ಈ ಮೂಲಕ ರಾಜ್ಯಾಳ್ವಿಕೆಯುಳ್ಳ ಜಮ್ಮು ಮತ್ತು ಕಾಶ್ಮೀರವು ಸ್ವಾತಂತ್ರ್ಯಾನಂತರ ಭಾರತದೊಂದಿಗೆ ಸೇರುವಾಗ ಮಾಡಿಕೊಂಡ ಒಪ್ಪಂದವನ್ನು ಏಕಪಕ್ಷೀಯವಾಗಿ ಉಲ್ಲಂಘನೆ ಮಾಡಿತು. ಜನರ ಅಭಿಪ್ರಾಯ ಪಡೆಯದೆ ವಿಧಿ 370 ರದ್ದುಗೊಳಿಸಿ, ಜಮ್ಮು ಮತ್ತು ಕಾಶ್ಮೀರ ಪುನರ್‌ಸಂಘಟನೆ ಕಾಯ್ದೆ ಜಾರಿಗೆ ತಂದು, ಜಮ್ಮು ಮತ್ತು ಕಾಶ್ಮೀರಗಳ ಆಡಳಿತಾತ್ಮಕ ಚಿತ್ರಣವನ್ನೇ ಬದಲಾವಣೆ ಮಾಡಲಾಯಿತು. ಇದು ಸರಳವಾಗಿ ಪ್ರತ್ಯೇಕಗೊಳಿಸುವುದಲ್ಲ, ಬದಲಾಗಿ ಪುನರ್‌ಸಂಘಟಿಸುವುದು. ಈ ಮೂಲಕ ಲಡಾಕ್‌ಅನ್ನು ಜಮ್ಮು ಮತ್ತು ಕಾಶ್ಮೀರದಿಂದ ಬೇರೆ ಮಾಡಿ, ಲಡಾಕ್‌ಗೆ ತನ್ನದೇ ಆದ ಆಡಳಿತಾತ್ಮಕ ಅಸ್ತಿತ್ವ ನೀಡಲಾಯಿತು. ಇದರ ಪರಿಣಾಮವಾಗಿ ಹಿಂದೆ ಇದ್ದ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಈಗ ಲಡಾಕ್ ಹಾಗೂ ಜಮ್ಮು ಮತ್ತು ಕಾಶ್ಮೀರ ಎನ್ನುವ 2 ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಲಾಯಿತು. ಒಂದು ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶವಾಗಿ ಲಡಾಕ್‌ಗೆ ತನ್ನ ಹಕ್ಕುಗಳನ್ನು ಕಾಪಾಡುವಂತಹ ಕಾನೂನು ರೂಪಿಸಲು ಶಾಸಕಾಂಗವಿಲ್ಲ. ಅಗತ್ಯ ಸೌಲಭ್ಯಗಳಿಂದ ಹಿಡಿದು ಸಾಂಸ್ಕೃತಿಕ ಅಸ್ಮಿತೆಯವರೆಗಿನ ಸ್ಥಳೀಯ ಆಶಯಗಳ ಬಗ್ಗೆ ಒಂದು ಚುನಾಯಿತ ಸರ್ಕಾರದಿಂದ ಮಾತ್ರ ಗಮನ ನೀಡಲು ಸಾಧ್ಯವಾಗುತ್ತದೆ. ರಾಜ್ಯದ ಸ್ಥಾನಮಾನ ಮಾತ್ರ ಸಾಮಾಜಿಕ–ಆರ್ಥಿಕ ಬೆಳವಣಿಗೆಗೆ ಪುಷ್ಟಿ ನೀಡುತ್ತದೆ ಎಂಬುವ ಈ ಕೂಗು ಯುವ ಪೀಳಿಗೆಯಲ್ಲಿ ಪ್ರತಿಧ್ವನಿಸುತ್ತಿದೆ.

### ಆತಂಕಕ್ಕೆ ದೂಡುತ್ತಿರುವ ಸಮಸ್ಯೆಗಳು

ಈ ಭಾಗದ ವಿಭಿನ್ನವಾದ ಸಾಂಸ್ಕೃತಿಕ ಪರಿಸರ ಹಾಗೂ ಜೀವನ ಪದ್ಧತಿಯನ್ನು ಕಳೆದುಕೊಳ್ಳುವ ಭೀತಿ ಕೂಡ ಲಡಾಕ್ ಹೋರಾಟಕ್ಕೆ ಪುಷ್ಟಿ ನೀಡಿದೆ ಎಂದರೆ ತಪ್ಪಾಗಲಾರದು. ಇದಲ್ಲದೆ ದೇಶದ ಬೇರೆ ಭಾಗದಿಂದ ಹೆಚ್ಚುತ್ತಿರುವ ವಲಸೆ ಹಾಗೂ ಬಂಡವಾಳ ಹೂಡಿಕೆಯು ಲಡಾಕ್‌ನ ಜನರನ್ನು ಮತ್ತಷ್ಟು ಆತಂಕಕ್ಕೆ ದೂಡಿವೆ. ಭೂಮಿ ಹಾಗೂ ಉದ್ಯೋಗಗಳ ಮೇಲೆ ತಮ್ಮ ನಿಯಂತ್ರಣವಿರಬೇಕು ಎಂಬ ಲಡಾಕ್ ಜನರ ಬೇಡಿಕೆಯು, ಈ ಪ್ರದೇಶದ ವಿಶಿಷ್ಟ ಗುಣ, ಪರಿಸರದ ಸಮತೋಲನ ಹಾಗೂ ಹಿತಾಸಕ್ತಿಗಳನ್ನು ಕಾಪಾಡಬೇಕೆಂಬ ಬಯಕೆಯನ್ನು ಪ್ರತಿಧ್ವನಿಸುತ್ತದೆ. ವಿಧಿ 370 ರದ್ಧತಿಯಾಗಿ, ಹೊಸ ನೆಲದ ಕಾನೂನು ಜಾರಿಯಾದ ಮೇಲೆ ಲಡಾಕ್‌ನ ವಿದ್ಯಾರ್ಥಿಗಳು ಜಮ್ಮು ಮತ್ತು ಕಾಶ್ಮೀರದಲ್ಲಿ ಸರ್ಕಾರಿ ಉದ್ಯೋಗ ಪಡೆಯಲು, ಅರ್ಹತೆಯನ್ನು ಕಳೆದುಕೊಂಡಿದ್ದಾರೆ. 2019ರ ನಂತರ ಸಾಕಷ್ಟು ಉದ್ಯೋಗ ಸೃಷ್ಟಿಸಲಾಗುವುದು ಎಂದು ಬಿಜೆಪಿ ಸರ್ಕಾರ ನೀಡಿದ್ದ ಭರವಸೆಯು ಸಹ ಸುಳ್ಳೆಂದು ಸಾಬೀತಾಗಿದೆ. ಜಮ್ಮು ಮತ್ತು ಕಾಶ್ಮೀರದಿಂದ ಪ್ರತ್ಯೇಕವಾದ ಮೇಲೆ ಲಡಾಕ್‌ನ ಯುವಕರಿಗೆ ದೊಡ್ಡ ಸಂಖ್ಯೆಯ ಉದ್ಯೋಗಗಳು ಇಲ್ಲವಾಗಿವೆ. ಏಕೆಂದರೆ, ವಿಧಿ 370 ರದ್ದಾದ ಮೇಲೆ, ಜಮ್ಮು ಮತ್ತು ಕಾಶ್ಮೀರದಲ್ಲಿ ಉದ್ಯೋಗ ಹಾಗೂ ಭೂಮಿಯ ಹಕ್ಕನ್ನು ಕಾಪಾಡುವ ಆ ನೆಲದ ಕಾನೂನು ಜಾರಿಗೆ ಬಂದಿದೆ. ಅಲ್ಲಿಯ ಖಾಯಂ ನಿವಾಸಿಗಳಾರು, ಯಾರು ಭೂಮಿಯನ್ನು ಖರೀದಿಸಬಹುದು, ಯಾರು ಸರ್ಕಾರಿ ಉದ್ಯೋಗಗಳಿಗೆ ಅರ್ಜಿ ಸಲ್ಲಿಸಬಹುದು, ಇಂತಹ ಮಾನದಂಡಗಳ ಬಗ್ಗೆ ಇದ್ದ ರಾಜ್ಯದ ಹಿಂದಿನ ಕಾನೂನನ್ನು ಬದಲಾವಣೆ ಮಾಡಿ ಈಗ ಹೊಸ ಕಾನೂನನ್ನು ಜಾರಿಗೆ ತರಲಾಗಿದೆ. ಅಲ್ಲಿ ಕೆಲಸಕ್ಕೆ ಅರ್ಜಿ ಸಲ್ಲಿಸುವವರು, ಅಲ್ಲಿಯ ಖಾಯಂ ನಿವಾಸಿಗಳಾಗಿರಬೇಕು; ಅಂದರೆ ಅಲ್ಲಿಯೇ ಒಂದು ನಿರ್ದಿಷ್ಟ ಅವಧಿಯಲ್ಲಿ ವಾಸಿಸಿರಬೇಕು. ಇದರಿಂದಾಗಿ ಲಡಾಕ್ ಜನರು ಕಷ್ಟಪಟ್ಟುಗಳಿಸಿದ ಹಕ್ಕನ್ನು ಹಾಗೂ ಭೂಮಿ ಮೇಲಿನ ಹಕ್ಕನ್ನು ಖಾಯಂ ಆಗಿ ಕಳೆದುಕೊಳ್ಳಬೇಕಾಗುತ್ತದೆ. ಸಹಜವಾಗಿ, ಭವಿಷ್ಯದ ಬಗ್ಗೆ ಭಯ ಮೂಡಿಸುವ ಈ ಬೆಳವಣಿಗೆಗಳಿಂದ ಲಡಾಕ್‌ನ ಜನರು ಆಕ್ರೋಶಗೊಂಡಿದ್ದಾರೆ.

### ಪರಿಸರದ ಸಮಸ್ಯೆಗಳು

ಇನ್ನು ಮುಂದಿನ ಪ್ರಶ್ನೆ, ಪರಿಸರದ ಕುರಿತಾದದ್ದು. ದಾಖಲಾತಿಯ ಪ್ರಕಾರ ಹಿಂದಿನ ಕೆಲವು ವರ್ಷಗಳಲ್ಲಿ ಲಡಾಕ್‌ಗೆ ಬರುವ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಇದರಿಂದ ಆರ್ಥಿಕತೆಗೆ ಸಹಾಯವಾದರೂ, ಅದರ ಜೊತೆಯಲ್ಲೇ ಬರುವ ಕೆಡುಕುಗಳನ್ನು ಕಡೆಗಣಿಸುವಂತಿಲ್ಲ. ಪ್ರವಾಸಿಗರ ಭೇಟಿ ಅಬಾಧಿತವಾಗಿ ಹೀಗೆ ಮುಂದುವರೆದಲ್ಲಿ ಹಾಗೂ ಸರ್ಕಾರ ಈ ಕುರಿತು ಸಮರ್ಪಕ ಕ್ರಮ ತೆಗೆದುಕೊಳ್ಳದಿದ್ದಲ್ಲಿ, ಈ ಪ್ರದೇಶದ ಸೀಮಿತವಾಗಿರುವ ಸಂಪನ್ಮೂಲಗಳ ಮೇಲೆ ತೀವ್ರ ಒತ್ತಡ ಉಂಟಾಗುತ್ತದೆ. ಅಧ್ಯಯನ ಒಂದರ ಪ್ರಕಾರ ಲಡಾಕ್‌ನಲ್ಲಿ ದಿನವೂ ಒಬ್ಬ ಪ್ರವಾಸಿಯಿಂದ 1.38ಕೆ.ಜಿ ಅಷ್ಟು ಘನ ಕಸ ಉತ್ಪತ್ತಿಯಾಗುತ್ತದೆ. ಪ್ಲಾಸ್ಟಿಕ್ ಮಾಲಿನ್ಯ ಮತ್ತೊಂದು ಮುಖ್ಯವಾದ ಸಮಸ್ಯೆಯಾಗಿದ್ದು, 50 ಟನ್‌ಗಳಷ್ಟು ಪ್ಲಾಸ್ಟಿಕ್ ತ್ಯಾಜ್ಯ ವಾರ್ಷಿಕವಾಗಿ ಉತ್ಪತ್ತಿಯಾಗುತ್ತದೆ. 2021ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ನಡೆಸಿದ ಅಧ್ಯಯನದ ಪ್ರಕಾರ ಲಡಾಕ್‌ನಲ್ಲಿ ಗ್ಲೇಸಿಯರ್‌ಗಳು (ಹಿಮನದಿ) ಆತಂಕ ತರುವ ನಿಟ್ಟಿನಲ್ಲಿ ಕರಗುತ್ತಿವೆ. ಇದು ನೇರವಾಗಿ ನೀರಿನ ಉಪಲಬ್ಧತೆ ಮೇಲೆ ಪರಿಣಾಮ ಬೀರಿ, ಕೃಷಿ ಹಾಗೂ ದೈನಂದಿನ ಜೀವನದ ಮೇಲೂ ಪರಿಣಾಮ ಬೀರುತ್ತದೆ.

ನಗರದ ಅಭಿವೃದ್ಧಿ ಹಾಗೂ ಪ್ರವಾಸೋದ್ಯಮದ ಬೆಳವಣಿಗೆಗೆ ಸೌಲಭ್ಯ ನೀಡುವ ನೆಪದಲ್ಲಿ ಯದ್ವಾತದ್ವಾ... ಯರ್ರಾಬಿರ್ರಿ ಅರಣ್ಯ ನಾಶ ಮತ್ತೊಂದು ದೊಡ್ಡ ಸಮಸ್ಯೆಯಾಗಿದೆ. ರಸ್ತೆ ನಿರ್ಮಾಣದಂತಹ ಅಭಿವೃದ್ಧಿ ಯೋಜನೆಗಳು ಈಗಾಗಲೇ ಶಿಥಿಲಗೊಂಡಿರುವ ಪರಿಸರಕ್ಕೆ ಮತ್ತಷ್ಟು ಅಡ್ಡಿ ಆತಂಕಗಳು ತರುತ್ತವೆ. ಈ ತರಹದ ಯೋಜನೆಗಳು ವಾಹನ ದಟ್ಟಣೆಯನ್ನು ಹೆಚ್ಚಿಸಿ, ಲೇ, ಅಂತಹ ನಗರ ಪ್ರದೇಶಗಳಲ್ಲಿ ವಾಯು ಮಾಲಿನ್ಯಕ್ಕೆ ಕಾರಣವಾಗುತ್ತವೆ. ಲಡಾಕ್‌ನಲ್ಲಿ ಕೇವಲ ಶೇ.5ರಷ್ಟು ಮಾತ್ರ ಅರಣ್ಯ ಪ್ರದೇಶವಿರುವುದರಿಂದ ಮಣ್ಣಿನ ಸವಕಳಿ ಉಂಟಾಗುವ ಸಾಧ್ಯತೆಯಿದೆ. ಇದಲ್ಲದೆ ಜನಸಂಖ್ಯೆಯ ಗಣನೀಯ ಭಾಗವು ಅಡಿಗೆಗೆ ಹಾಗೂ ಬಿಸಿ ಮಾಡಲು ಸೌದೆಯನ್ನು ಬಳಸುವುದು ಕೂಡ ಅರಣ್ಯನಾಶಕ್ಕೆ ಕಾರಣವಾಗಿದೆ. ಅಧ್ಯಯನದ ಪ್ರಕಾರ ಪ್ರತಿ ಮನೆಯು ವರ್ಷಕ್ಕೆ 0.8 ಟನ್‌ನಷ್ಟು ಸೌದೆ ಬಳಸುತ್ತದೆ (ಮೂಲ: ಎನರ್ಜಿ ಸಿನೆರಿಯೋ ಆಫ್ ಲಡಾಕ್). ಇದರ ಜೊತೆ ಸೀಮಿತವಾದ ಸಸ್ಯರಾಶಿ ಮಣ್ಣು ಸವಕಳಿಯನ್ನು ಮತ್ತಷ್ಟು ಹೆಚ್ಚಿಸಿದೆ.

### 6ನೇ ಶೆಡ್ಯೂಲ್ (ಅನುಬಂಧ 6)

ಈಶಾನ್ಯ ರಾಜ್ಯಗಳಾದ ಅಸ್ಸಾಂ, ಮೇಘಾಲಯ, ತ್ರಿಪುರಾ ಹಾಗೂ ಮಿಜೋರಾಂಗಳ ಬುಡಕಟ್ಟು ಪ್ರದೇಶಗಳಲ್ಲಿ ಆಡಳಿತ ನಡೆಸಲು 6ನೇ ಶೆಡ್ಯೂಲ್, ವಿಶೇಷ ನಿಬಂಧನೆಗೆ ಅವಕಾಶ ನೀಡುತ್ತದೆ. ಈ ನಿಬಂಧನೆ ಅಟೋನೊಮಸ್ ಡಿಸ್ಟ್ರಿಕ್ಟ್ ಕೌನ್ಸಿಲ್ (ADC) ಅಥವಾ ರೀಜನಲ್ ಕೌನ್ಸಿಲ್ (ARC) ಸ್ಥಾಪಿಸುವುದಕ್ಕೆ ಅವಕಾಶ ನೀಡಿ, ಬುಡಕಟ್ಟು ಭಾಗಗಳಿಗೆ ಸಾಪೇಕ್ಷವಾದ ಸ್ವಾಯತ್ತತೆ ನೀಡುತ್ತದೆ. ಈ 6ನೇ ಶೆಡ್ಯೂಲ್ ಲಡಾಕ್‌ನ ವಿಭಿನ್ನವಾದ ಸಾಂಸ್ಕೃತಿಕ ವೈವಿಧ್ಯತೆ, ಪರಂಪರೆ ಹಾಗೂ ಸೂಕ್ಷ್ಮವಾದ ಪರಿಸರವನ್ನು ಕಾಪಾಡಲು ರಕ್ಷಣೆ ನೀಡುತ್ತದೆ. ಅಲ್ಲದೆ ಅವರ ಭಾಷೆ, ಅಚರಣೆಗಳ ರಕ್ಷಣೆಗಾಗಿ ಕೂಡ 6ನೇ ಶೆಡ್ಯೂಲ್ ಅವಶ್ಯಕವಾಗಿದೆ. 6ನೇ ಶೆಡ್ಯೂಲ್‌ನಲ್ಲಿ ಸೇರಿಸುವುದರಿಂದ ಎಡಿಸಿ ಅಥವಾ ಎಆರ್‌ಸಿಗಳನ್ನು ರಚಿಸಲು ಲಡಾಕ್‌ಗೆ ಬಲ ಬಂದಂತಾಗುತ್ತದೆ. ಈ ಚುನಾಯಿತ ಸಮಿತಿಗಳು ವಿವಿಧ ವಿಷಯಗಳ ಮೇಲೆ ಕಾನೂನು ರೂಪಿಸಬಹುದು.

ಬಹಳ ಮುಖ್ಯ ವಿಷಯವೇನೆಂದರೆ ಲಡಾಕ್‌ನಲ್ಲಿ, ಖನಿಜದಂತಹ ಬಳಕೆಯಾಗದ ನೈಸರ್ಗಿಕ ಸಂಪತ್ತು ಹೇರಳವಾಗಿದೆ. ಅಲ್ಲದೆ ಜಲವಿದ್ಯುತ್‌ಗೂ ಸಾಕಷ್ಟು ಅವಕಾಶಗಳಿವೆ. ಹೆಚ್ಚಿದ ಪ್ರವಾಸೋದ್ಯಮದಿಂದ ಒಳ್ಳೆಯ ವ್ಯಾಪಾರವೂ ಆಗುತ್ತದೆ. ವಿಧಿ 370, 35ಎ ಯ ರದ್ದತಿಯ ಹಿಂದಿರುವ ನಿಜವಾದ ಉದ್ದೇಶ, ಕಾರ್ಪೋರೇಟ್ ಕುಳಗಳಿಗೆ ಲಾಭ ದೋಚಲು ಈ ಭೂಮಿಯನ್ನು ತೆರೆದಿಡುವುದೇ ಆಗಿದೆ.

### ಬಿಜೆಪಿ ಸರ್ಕಾರದ ನಿಗೂಢ ಮೌನ

ಲಡಾಕಿ ಜನರ ನ್ಯಾಯ ಸಮ್ಮತ ಬೇಡಿಕೆಗಳಿಗೆ ಬಿಜೆಪಿ ಸರ್ಕಾರ ಇದುವರೆಗೂ ಏಕೆ ಸ್ಪಂದಿಸಿಲ್ಲ? ಏಕೆಂದರೆ ಈ ಬೇಡಿಕೆಗಳು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ವಿಭಜಿಸಿಲು, ಹಲವು ರೀತಿಯಲ್ಲಿ ರಕ್ಷಣೆ ನೀಡುತ್ತಿದ್ದ ವಿಧಿ 35ಎ ಹಿಂಪಡೆಯಲು ಬಿಜೆಪಿ ಹೇಳಿದ ಸುಳ್ಳು ಕಾರಣಗಳನ್ನೇ ಬುಡಮೇಲು ಮಾಡುತ್ತವೆ. ಇದರಿಂದ ಬಿಜೆಪಿ ಸರ್ಕಾರಕ್ಕೆ ಒಂದು ರೀತಿಯ ವಿರೋಧಾಭಾಸದ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ವಿಧಿ 371ರ ಜಾಗದಲ್ಲಿ ವಿಧಿ 370 ತಂದರೆ, ಅದು ಬಿಜೆಪಿಗೆ ಹಿನ್ನಡೆಯೇ ಸರಿ. ಒಂದು ವೇಳೆ ಲಡಾಕ್‌ಗೆ ವಿಶೇಷ ಸಾಂವಿಧಾನಿಕ ಪ್ರಾತಿನಿಧ್ಯ ನೀಡಿದ್ದೇ ಆದಲ್ಲಿ, ಇದು ಭೂಮಿ ಹಾಗೂ ಉದ್ಯೋಗಕ್ಕೆ ಸಂಬಂಧಿಸಿದಂತೆ ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರದ ಮೇಲೂ ಪರಿಣಾಮ ಬೀರುತ್ತದೆ. ಹಾಗಾಗಿ ಈ ಹೋರಾಟದ ದಿಕ್ಕು ತಪ್ಪಿಸಲು, ಬೌದ್ಧರು ಹಾಗೂ ಮುಸಲ್ಮಾನರ ನಡುವೆ ಕೋಮು ದ್ವೇಷ ಹುಟ್ಟು ಹಾಕುವ ಹೀನ ಪಿತೂರಿಯನ್ನು ಬಿಜೆಪಿ ಮಾಡುತ್ತಿದೆ.

### ಇತ್ತೀಚಿನ ಬೆಳವಣಿಗೆಗಳು

ಲಡಾಕ್‌ನ ಜನತೆ ದೊಡ್ಡ ಸಂಖ್ಯೆಯಲ್ಲಿ ಹೋರಾಟಕ್ಕೆ ಬಂದಿದ್ದು, ಕೇಂದ್ರ ಸರ್ಕಾರದ ವಿರುದ್ಧ ಅವರಿಗಿರುವ ಆಕ್ರೋಶದ ಸಂಕೇತವಾಗಿದೆ. ಮಾರ್ಚ್ 6, 2024 ರಂದು ವಾಂಗ್ಚುಕ್ ಅವರು ತಮ್ಮ 21 ದಿನದ ಉಪವಾಸ ಸತ್ಯಾಗ್ರಹ ಆರಂಭಿಸಿ, ಮಾರ್ಚ್ 26ರಂದು ಕೊನೆಗೊಳಿಸಿದರು. ತಮ್ಮ ಹೋರಾಟವನ್ನು ಮುಂದುವರೆಸುವುದಾಗಿ ಅವರು ಸಂಕಲ್ಪ ತೊಟ್ಟಿದ್ದಾರೆ. ಸೋನಂ ವಾಂಗ್ಚುಕ್ ಅವರು ಧೈರ್ಯದಿಂದ ಮುನ್ನುಗ್ಗಿರುವುದು ಬದಲಾವಣೆಯ ಆಗ್ರಹಕ್ಕೆ ಮತ್ತಷ್ಟು ವೇಗ ನೀಡಿದೆ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಾಧ್ಯಮಗಳ ಗಮನ ಸೆಳೆಯುವಂತೆ ಮಾಡಿದೆ. ಈ ಹಿನ್ನೆಲೆಯಲ್ಲಿ, ಸೋನಂ ವಾಂಗ್ಚುಕ್ ಅವರ ನೇತೃತ್ವದಲ್ಲಿ ಲಡಾಕ್ ಜನರ ದೃಢವಾದ ಹೋರಾಟ ಮುಂದುವರೆದು, ಲಡಾಕ್‌ನ ಭವಿಷ್ಯವನ್ನು ರೂಪಿಸಬೇಕಿದೆ. ಇಡೀ ದೇಶದ ಜನ ಅವರ ನ್ಯಾಯಸಮ್ಮತವಾದ ಹೋರಾಟದ ಜೊತೆ ನಿಲ್ಲಬೇಕಿದೆ.

## ಮಕ್ಕಳ ಬೇಸಿಗೆ ಶಿಬಿರ







ಎಳೆಯ ಮಕ್ಕಳಲ್ಲಿ ಉನ್ನತ ಮೌಲ್ಯಗಳ ಬಗ್ಗೆ ಆಕರ್ಷಣೆ ಬೆಳೆಸಲು, ಅವರಲ್ಲಿ ಪ್ರತಿಭೆ ಮತ್ತು ಸದಭಿರುಚಿ ಬೆಳೆಸಲು ರಾಯಚೂರು ಮತ್ತು ಬೆಂಗಳೂರಿನ ರಾಜಾಜಿನಗರದಲ್ಲಿ ಮೇ ತಿಂಗಳಲ್ಲಿ ಮಕ್ಕಳ ಶಿಬಿರ ಆಯೋಜಿಸಲಾಯಿತು.

# ವಿನಾಯಕ ದಾಮೋದರ್ ಸಾವರ್ಕರ್ ಅವರ "ದೇಶಪ್ರೇಮ"!

ಆರ್‌ಎಸ್‌ಎಸ್ ಹಾಗೂ ಬಿಜೆಪಿಯವರು ದೇಶಪ್ರೇಮ ಹಾಗೂ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಮುಖವಾಗಿ ಪ್ರಚುರಪಡಿಸುವ ಒಂದು ಹೆಸರು ಸಾವರ್ಕರ್. ಆದರೆ ಆರ್‌ಎಸ್‌ಎಸ್ ಸಿದ್ಧಾಂತವಾದಿ ಎಂಎಸ್ ಗೋಲ್ವಾಲ್ಕರ್ ಹೇಗೆ ರಾಷ್ಟ್ರ ಹಾಗೂ ರಾಷ್ಟ್ರೀಯತೆಯ ಬಗ್ಗೆ ವಿನಾಶಕಾರಿ ದೃಷ್ಟಿಕೋನವನ್ನು ಹೊಂದಿದ್ದರೋ, ಮತ್ತು ರಾಷ್ಟ್ರೀಯತೆಯ ಪ್ರಶ್ನೆಯನ್ನು ಹಿಂದೂ ಧರ್ಮದೊಂದಿಗೆ ಜೋಡಿಸಿದ್ದರೋ, ಹಾಗೆಯೇ, ಹಿಂದೂ ಮಹಾಸಭಾದ ಮುಖಂಡ ಮತ್ತು ಬಿಜೆಪಿಯ ಮಾರ್ಗದರ್ಶಕರಾದ ವಿ.ಡಿ.ಸಾವರ್ಕರ್ ಅವರು ಹೇಗೆ ಬ್ರಿಟಿಷ್ ವಿರೋಧಿ ಸ್ವಾತಂತ್ರ್ಯ ಹೋರಾಟವನ್ನು ವಿರೋಧಿಸಿದರು, ಬ್ರಿಟಿಷ್ ಸಾಮ್ರಾಜ್ಯಶಾಹಿ ಆಡಳಿತಗಾರರಿಂದ ಕ್ಷಮೆಯನ್ನು ಯಾಚಿಸಿದರು ಮತ್ತು ಬ್ರಿಟಿಷರ ಸೇವೆಯನ್ನು ಹೇಗೆ ನಿಷ್ಠೆಯಿಂದ ಮಾಡಿದರು ಎಂಬುದನ್ನು ಅವರ ಲೇಖನಗಳು, ಮಾತುಗಳು, ಉಲ್ಲೇಖಗಳ ಮೂಲಕ ವಿಶ್ಲೇಷಿಸುವುದೇ ಈ ಲೇಖನದ ಸಾರ. ಇಂತಹ ಒಬ್ಬ ಬ್ರಿಟಿಷ್ ಸೇವಕನನ್ನು ಆಡಳಿತಾರೂಢ ಆರ್‌ಎಸ್‌ಎಸ್–ಬಿಜೆಪಿಯು ಒಬ್ಬ ಮಹಾನ್ ದೇಶಪ್ರೇಮಿಯಾಗಿ ಬಿಂಬಿಸುವುದಾಗಲಿ, ಅಂಡಮಾನ್‌ನ ಪೋರ್ಟ್ ಬ್ಲೇರ್ ವಿಮಾನ ನಿಲ್ದಾಣಕ್ಕೆ ಅವರ ಹೆಸರನ್ನು ಇಡುವುದಾಗಲಿ ಅತಿರೇಕದ ಮೂಲಕ, ಅದು ನೈಜ ಹುತಾತ್ಮ ಕ್ರಾಂತಿಕಾರಿಗಳಿಗೆ ಎಸಗಿದ ಅಪಮಾನವೆಂದೇ ಹೇಳಬೇಕು.

**ಭಾರತದ ವಿಭಜನೆ ಮತ್ತು ಎರಡು ರಾಷ್ಟ್ರಗಳ ಸಿದ್ಧಾಂತ**

- ಕೇಂದ್ರದಲ್ಲಿ ಎನ್‌ಡಿಎ ಸಮ್ಮಿಶ್ರ ಸರ್ಕಾರವನ್ನು ಮುನ್ನಡೆಸುವ ಭಾರತೀಯ ಜನತಾ ಪಕ್ಷದ ಸೈದ್ಧಾಂತಿಕ ತಿರುಳನ್ನು ರೂಪಿಸುವ ಪರಿಕಲ್ಪನೆಯಾದ 'ಹಿಂದುತ್ವ' ಎಂಬ ಪದವನ್ನು ಸೃಷ್ಟಿಸಿದವರು ಸಾವರ್ಕರ್. ಎ ಮರಾಠಾ ಎಂಬ ಕಾವ್ಯನಾಮದಲ್ಲಿ ಅವರು 1923ರಲ್ಲಿ ಬರೆದ ಪುಸ್ತಕ 'ಎಸೆನ್ಷಿಯಲ್ಸ್ ಆಫ್ ಹಿಂದುತ್ವ'ದಲ್ಲಿ, ಹೀಗೆ ಹೇಳುತ್ತಾರೆ: "ಭಾರತವು ತಾತ ಮುತ್ತಾತನ ಕಾಲದಿಂದ ಇಲ್ಲಿ ವಾಸವಾಗಿರುವವರಿಗೆ ಮಾತ್ರ ಸೇರಿದ ಪವಿತ್ರ ಭೂಮಿ. ಮುಸಲ್ಮಾನ್ ಅಥವಾ ಕ್ರಿಶ್ಚಿಯನ್ ದೇಶವಾಸಿಗಳಿಗಲ್ಲ. ಅವರು ಹಿಂದೂಗಳಲ್ಲ ಮತ್ತು ಅವರನ್ನು ಹಿಂದೂಗಳೆಂದೂ ಪರಿಗಣಿಸಲಾಗುವುದಿಲ್ಲ. ಅವರ ಪವಿತ್ರ ಭೂಮಿ ಇರುವುದು ದೂರದ ಅರೇಬಿಯಾ ಅಥವಾ ಪ್ಯಾಲೆಸ್ತೀನ್‌ನಲ್ಲಿ!".
- 1924ರಲ್ಲಿ, ಸಾವರ್ಕರ್ ಅವರು 'ಶುದ್ಧಿ' ಸಮಾರಂಭಗಳನ್ನು ಏರ್ಪಡಿಸಿ ಹಿಂದೂಗಳಲ್ಲದವರನ್ನು ಹಿಂದೂ ಧರ್ಮಕ್ಕೆ ಮರುಪರಿವರ್ತನೆ ಮಾಡಲು ಪ್ರಾರಂಭಿಸಿದರು.
- "ಭಾರತದಲ್ಲಿ ಎರಡು ವಿರೋಧಿ ರಾಷ್ಟ್ರಗಳು ಜೊತೆಗೆ ಜೀವಿಸುತ್ತಿವೆ. ಹಲವಾರು ಅಪಕ್ವ ರಾಜಕಾರಣಿಗಳು ಭಾರತವು ಒಂದು ಸಾಮರಸ್ಯ, ಸೌಹಾರ್ದದ ರಾಷ್ಟ್ರವಾಗಿ ಬೆಸುಗೆಯಾಗಿದೆ ಎಂದು ಭಾವಿಸಿ ಗಂಭೀರವಾದ ತಪ್ಪನ್ನು ಮಾಡುತ್ತಾರೆ ಅಥವಾ ಅವರು ಹಾಗೆ ಭಾವಿಸುವುದರ ಮೂಲಕ ಸೌಹಾರ್ದದ ಬೆಸುಗೆ ಹಾಕುವುದು ಸಾಧ್ಯವಿಲ್ಲ. ಇದಕ್ಕೆ ವಿರುದ್ಧವಾಗಿ, ಭಾರತದಲ್ಲಿರುವುದು ಹಿಂದೂ ಮತ್ತು ಮುಸ್ಲಿಂ ಎಂಬ ಎರಡು ಪ್ರತ್ಯೇಕ ರಾಷ್ಟ್ರಗಳು." ಎಂದು ಅವರು 1937ರ ಹಿಂದೂ ಮಹಾಸಭಾದ 19ನೇ ಅಧಿವೇಶನದ ಭಾಷಣದಲ್ಲಿ ಹೇಳಿದ್ದರು. ಅದಾದ ಮೂರು ವರ್ಷಗಳ ನಂತರ, ಜಿನ್ನಾ ನೇತೃತ್ವದ ಅಖಿಲ ಭಾರತ ಮುಸ್ಲಿಂ ಲೀಗ್, ತನ್ನ ಲಾಹೋರ್ ಅಧಿವೇಶನದಲ್ಲಿ ಈ ದ್ವಿರಾಷ್ಟ್ರ ಪರಿಕಲ್ಪನೆಯನ್ನು ಅಂಗೀಕರಿಸಿತು. 15 ಆಗಸ್ಟ್ 1943 ರಂದು, ಸಾವರ್ಕರ್ ನಾಗ್ಪುರದಲ್ಲಿ ಹೇಳಿದರು, "ಶ್ರೀ ಜಿನ್ನಾ ಅವರ ದ್ವಿ–ರಾಷ್ಟ್ರ ಸಿದ್ಧಾಂತದೊಂದಿಗೆ ನನಗೆ ಯಾವುದೇ ತಕರಾರು ಇಲ್ಲ. ನಾವು ಹಿಂದೂಗಳು, ನಾವೇ ಒಂದು ರಾಷ್ಟ್ರ ಹಾಗೂ ಹಿಂದೂಗಳು ಮತ್ತು ಮುಸ್ಲಿಮರು ಎರಡು ಬೇರೆ ಬೇರೆ ರಾಷ್ಟ್ರಗಳು ಎಂಬುದು ಐತಿಹಾಸಿಕ ಸತ್ಯ."

**ಬ್ರಿಟಿಷ್ ಸಾಮ್ರಾಜ್ಯಶಾಹಿಗಳೊಂದಿಗೆ ಸಹಕಾರ**

- ಭಾರತದ ವೈಸರಾಯ್ ಲಾರ್ಡ್ ಲಿನ್ಲಿಂಗೋಗೆ 19 ಅಕ್ಟೋಬರ್ 1939ರಂದು ಬರೆದ ಪತ್ರದಲ್ಲಿ, ಸಾವರ್ಕರ್ ಹೇಳಿದ್ದು, "ಈ ಪರಿಸ್ಥಿತಿಯಲ್ಲಿ ಬ್ರಿಟಿಷ್ ಘನ ಸರ್ಕಾರವು ಹಿಂದೂಗಳ ಜೊತೆಗೂಡಿ ಅವರ ಬೆಂಬಲದೊಂದಿಗೆ ಕೆಲಸ ಮಾಡಬೇಕು... ನಮ್ಮಿಬ್ಬರ ಹಿತಾಸಕ್ತಿಗಳು ಈಗ ಒಂದೇ ಆಗಿದ್ದು ನಾವು ಒಟ್ಟಾಗಿ ಕೆಲಸ ಮಾಡಬೇಕು. ನಮ್ಮ ಹಿತಾಸಕ್ತಿಗಳು ತುಂಬಾ ನಿಕಟವಾಗಿವೆ, ಹೀಗಾಗಿ ಹಿಂದೂ ಧರ್ಮ ಮತ್ತು ಗ್ರೇಟ್ ಬ್ರಿಟನ್ ಸ್ನೇಹಿತರಾಗಿರುವುದು ಅತ್ಯಗತ್ಯ. ಹಾಗೂ ಹಳೆಯ ವಿರೋಧವು ಇನ್ನು ಮುಂದೆ ಇರುವುದಿಲ್ಲ!"
- "ಭಾರತದಾದ್ಯಂತ ಹಿಂದೂ ಸಂಘಟನೆಗಳು (ಹಿಂದೂ ಮಹಾಸಭಾಗಳು) ತಮ್ಮ ಎಲ್ಲಾ ಶಕ್ತಿ, ಸಾಮರ್ಥ್ಯಗಳನ್ನು ತೊಡಗಿಸ ಬೇಕಾದ ಎರಡನೇ ಪ್ರಮುಖ ಮತ್ತು ತುರ್ತು ವಿಷಯವೆಂದರೆ ಹಿಂದೂಗಳ ಮಿಲಿಟರೀಕರಣದ ಕಾರ್ಯಕ್ರಮ. ಈಗ ನೇರವಾಗಿ ನಮ್ಮ ನೆಲೆಯನ್ನೇ ತಲುಪಿರುವ ಯುದ್ಧವು ಒಂದೇ ಬಾರಿಗೆ ಅಪಾಯವೂ ಹೌದು ಅವಕಾಶವೂ ಹೌದು. ಆದ್ದರಿಂದ ಮಿಲಿಟರಿ ಆಂದೋಲನವನ್ನು ತೀವ್ರಗೊಳಿಸಬೇಕು ಮತ್ತು ಪ್ರತಿ ಪಟ್ಟಣ ಮತ್ತು ಹಳ್ಳಿಗಳಲ್ಲಿ ಹಿಂದೂ ಮಹಾಸಭಾದ ಪ್ರತಿಯೊಂದು ಶಾಖೆಯು ಹಿಂದೂ ಜನರನ್ನು ಸೈನ್ಯ, ನೌಕಾಪಡೆ, ವೈಮಾನಿಕ ಪಡೆಗಳು ಮತ್ತು ಶಸ್ತ್ರಾಸ್ತ್ರ ಉತ್ಪಾದನೆಯ ಕಾರ್ಖಾನೆಗಳಲ್ಲಿ ಸೇರುವಂತೆ ಪ್ರಚೋದಿಸಲು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು." (1941 ರಲ್ಲಿ ಭಾಗಲ್ಪುರದಲ್ಲಿ ನಡೆದ ಹಿಂದೂ ಮಹಾಸಭಾದ 23 ನೇ ಅಧಿವೇಶನದಲ್ಲಿ ಸಾವರ್ಕರ್ ಹೇಳಿದ್ದು; ಸಮಗ್ರ ಸಾವರ್ಕರ್ ವಾಙ್ಮಯ: ಹಿಂದೂ ರಾಷ್ಟ್ರ ದರ್ಶನ, ಸಂಪುಟ–6. ಮಹಾರಾಷ್ಟ್ರ ಪ್ರಾಂತಿಕ್ ಹಿಂದೂಸಭಾ, ಪೂನಾ, 1963, ಪುಟ 460–461)
- "ಭಾರತದ ರಕ್ಷಣೆಗೆ ಸಂಬಂಧಿಸಿದಂತೆ, ಹಿಂದೂಗಳ ಒಕ್ಕೂಟವು ಯಾವುದೇ ಹಿಂಜರಿಕೆ ಯಿಲ್ಲದೆ ಸ್ಪಂದನಾಶೀಲ ಸಹಯೋಗದ ಸ್ಫೂರ್ತಿಯಲ್ಲಿ ಭಾರತ ಸರ್ಕಾರದ ಯುದ್ಧ ಸನ್ನದ್ಧತೆಯಲ್ಲಿ – ಅದು ಹಿಂದೂ ಹಿತಸಕ್ತಿಗೆ ಅನುಗುಣವಾಗಿರುವಷ್ಟು ಮಟ್ಟಿಗೆ–ಕೈಜೋಡಿಸಬೇಕು. ಸೇನೆ, ನೌಕಾಪಡೆ ಮತ್ತು ವೈಮಾನಿಕ ಪಡೆಗಳಿಗೆ, ಮದ್ದುಗುಂಡುಗಳು ಮತ್ತು ರಕ್ಷಣಾ ಸಾಮಗ್ರಿಗಳ ಕಾರ್ಖಾನೆಗಳಿಗೆ ಸಾಧ್ಯವಾದಷ್ಟು ದೊಡ್ಡ ಸಂಖ್ಯೆಯಲ್ಲಿ ಹಿಂದೂಗಳ ಪ್ರವೇಶವನ್ನು ಖಚಿತಪಡಿಸಬೇಕು. ಮತ್ತು ಯುದ್ಧದಲ್ಲಿ ಜಪಾನಿನ ಪ್ರವೇಶವು, ನೇರವಾಗಿ ಮತ್ತು ತುರ್ತಾಗಿ ನಮ್ಮನ್ನು ಬ್ರಿಟನ್ನಿನ ಶತ್ರುಗಳ ದಾಳಿಗೆ ಒಡ್ಡಿದೆ ಎಂದು ಗಮನಿಸಬೇಕು. ಹಾಗಾಗೀ, ನಮಗೆ ಇಷ್ಟವಿದೆಯೋ ಇಲ್ಲವೋ, ಯುದ್ಧದ ವಿನಾಶದ ವಿರುದ್ಧ ನಾವು ನಮ್ಮ ದೇಶವನ್ನು ರಕ್ಷಿಸಿಕೊಳ್ಳಬೇಕಾಗಿದೆ. ಮತ್ತು ಭಾರತವನ್ನು ರಕ್ಷಿಸುವಲ್ಲಿ ಸರ್ಕಾರದ ಯುದ್ಧ ಸನ್ನದ್ಧತೆಯನ್ನು ತೀವ್ರಗೊಳಿಸುವ ಮೂಲಕ ಮಾತ್ರ ಇದನ್ನು ಮಾಡಬಹುದಾಗಿದೆ. ಆದ್ದರಿಂದ, ಹಿಂದೂ ಮಹಾಸಭಾಗಳು, ಒಂದೇ ಒಂದು ನಿಮಿಷವನ್ನೂ ವ್ಯರ್ಥ ಮಾಡದೇ, ವಿಶೇಷವಾಗಿ ಬಂಗಾಳ ಮತ್ತು ಆಸ್ಸಾಂ ಪ್ರಾಂತ್ಯಗಳಲ್ಲಿ ಹಿಂದೂಗಳು ಎಲ್ಲಾ ಮಿಲಿಟರಿ ಪಡೆಗಳನ್ನು ಸೇರಲು ಸಾಧ್ಯವಾದಷ್ಟು ಪರಿಣಾಮಕಾರಿಯಾಗಿ ಅವರನ್ನು ಪ್ರೇರೇಪಿಸಬೇಕು." (ಅದೇ ಪುಸ್ತಕ, ಪುಟ: 460)
- "ಈ ಕಾರ್ಯದಲ್ಲಿ ಕೂಡಲೇ ತೊಡಗಿಕೊಳ್ಳಿ ಮತ್ತು ಹಿಂದೂ ಸಂಘಟನೆಗಳ ಆದರ್ಶವನ್ನು ಸಂಪೂರ್ಣವಾಗಿ ಗಮನದಲ್ಲಿ ಇಟ್ಟುಕೊಂಡು ಯುದ್ಧ ಪರಿಸ್ಥಿತಿಯ ಸಾಧ್ಯವಾದಷ್ಟು ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಿ. ಹಿಂದೂ ಜನಾಂಗದ ಮಿಲಿಟರೀಕರಣದ ಚಳುವಳಿಗೆ ಒತ್ತು ನೀಡಿ. ನಮ್ಮ ಹಿಂದೂರಾಷ್ಟ್ರವು ಯುದ್ಧದ ನಂತರ ಹೆಚ್ಚು ಶಕ್ತಿಯುತವಾಗಿ, ಗಟ್ಟಿಯಾಗಿ ಮತ್ತು ಬರುವಂತಹ ಸಮಸ್ಯೆಗಳನ್ನು ಎದುರಿಸಲು ಸಾಧ್ಯವಾಗುವ ಅಪರಿಮಿತ ಬಲವನ್ನು ಪಡೆದುಕೊಳ್ಳುತ್ತದೆ. ಆ ಸಮಸ್ಯೆಗಳು ಆಂತರಿಕ ಹಿಂದೂ ವಿರೋಧಿ ಅಂತರ್ಯುದ್ಧವಾಗಿರಬಹುದು ಅಥವಾ ಸಾಂವಿಧಾನಿಕ ಬಿಕ್ಕಟ್ಟು ಹಾಗೂ ಸಶಸ್ತ್ರ ಕ್ರಾಂತಿಯಾಗಿರಬಹುದು." (ಅದೇ ಪುಸ್ತಕ)
- "ಮತ್ತೆ, ಯುದ್ಧಾನಂತರ ರಾಷ್ಟ್ರಗಳ ಪರಿಸ್ಥಿತಿ ಹಾಗೂ ಹಣೆಬರಹ ಏನೇ ಆದರೂ, ಪ್ರಸ್ತುತ ಒಟ್ಟಾರೆಯಾಗಿ ಎಲ್ಲಾ ವಿಷಯಗಳನ್ನು ಪರಿಗಣಿಸುತ್ತಾ, ಹಿಂದೂ ಸಂಘಟನಾವಾದಿಗಳು ನಿಸ್ಸಂದೇಹವಾಗಿ ತೆಗೆದುಕೊಳ್ಳಬಹುದಾದ ಏಕೈಕ ಕಾರ್ಯಸಾಧ್ಯತೆ ಮತ್ತು ತುಲನಾತ್ಮಕವಾಗಿ ಪ್ರಯೋಜನಕಾರಿ ನಿಲುವೆಂದರೆ, ಭಾರತ ರಕ್ಷಣೆಗೆ ಸಂಬಂಧಿಸಿದಂತೆ ಬ್ರಿಟಿಷ್ ಸರ್ಕಾರದೊಂದಿಗೆ ಸಕ್ರಿಯವಾಗಿ ಮೈತ್ರಿ ಮಾಡಿಕೊಳ್ಳುವುದು." (ಅದೇ ಪುಸ್ತಕ)
- "ಹೀಗೆ ನಮ್ಮ ಪರ ಮತ್ತು ವಿರೋಧದ ಎಲ್ಲಾ ಅಂಶಗಳನ್ನು ಗಮನಿಸಿದ ನಂತರ, ಯುದ್ಧವು ನಮಗೆ ಒದಗಿಸಿದ ಅವಕಾಶಗಳನ್ನು ಬಳಸಿಕೊಳ್ಳುವ ಅತ್ಯುತ್ತಮ ಮಾರ್ಗವೆಂದರೆ, [ಬ್ರಿಟಿಷ್] ಸರ್ಕಾರವು ಪರಿಸ್ಥಿತಿಯ ಒತ್ತಡದಿಂದ ಮಾಡುತ್ತಿರುವ ಯುದ್ಧ ಸಿದ್ಧತೆಯು ನಮ್ಮ ಜನರ ಮಿಲಿಟರೀಕರಣ ಹಾಗೂ ಕೈಗಾರಿಕೀಕರಣಗಳಿಗೆ ನೇರವಾಗುವುದರಿಂದ ನಾವು ಇದರಲ್ಲಿ ಭಾಗವಹಿಸುವುದೇ ಮುಖ್ಯ ಕೆಲಸ ಎಂದು ಪ್ರಸ್ತಾಪಿಸಲು ನನಗೆ ಯಾವುದೇ ಹಿಂಜರಿಕೆಯಿಲ್ಲ." (ಅದೇ ಪುಸ್ತಕ)
- "ಪ್ರಸ್ತುತ ಪರಿಸ್ಥಿತಿಯಲ್ಲಿ,ನೈತಿಕವಾಗಿಯಷ್ಟೇ ಅಲ್ಲ, ರಾಜಕೀಯದ ಅನುಷ್ಠಾನದಲ್ಲಿಯೂ ಸಹ ನಾವು ಹಿಂದೂ ಮಹಾಸಭಾ ಸಂಘಟನೆಯ ಪರವಾಗಿ ಪ್ರತಿಪಾದಿಸುವುದೇನೆಂದರೆ, ಸರ್ಕಾರದ ವಿರುದ್ಧ ಸಶಸ್ತ್ರ ಪ್ರತಿರೋಧವನ್ನು ಒಳಗೊಂಡಿರುವ ಯಾವುದೇ ಕಾರ್ಯಕ್ರಮದ ಬಗ್ಗೆ ಯೋಚಿಸಬಾರದು" (ಅದೇ ಪುಸ್ತಕ)
- "ಸ್ವಾಭಾವಿಕವಾಗಿ, ರಾಜಕೀಯದ ಅನುಷ್ಠಾನದ ಬಗ್ಗೆ ನೈಜ ಒಳನೋಟವನ್ನು ಹೊಂದಿರುವ ಹಿಂದೂ ಮಹಾಸಭಾವು, ಭಾರತದ ರಕ್ಷಣೆ ಮತ್ತು ದೇಶದಲ್ಲಿ ಹೊಸ ಮಿಲಿಟರಿ ಪಡೆಗಳನ್ನು ಬೆಳೆಸುವ ವಿಷಯಕ್ಕೆ ಸಂಬಂಧಿಸಿದಂತೆ ಬ್ರಿಟಿಷ್ ಸರ್ಕಾರದ ಎಲ್ಲಾ ಯುದ್ಧ ಸನ್ನದ್ಧತೆಗಳಲ್ಲಿ ಭಾಗವಹಿಸಲು ನಿರ್ಧರಿಸಿದೆ." (ಹಿಂದೂ ಮಹಾಸಭಾದ ಮಧುರೈ ಅಧಿವೇಶನ)
- "ಬ್ರಿಟಿಷ್ ರಾಜತಾಂತ್ರಿಕತೆಯು ಎಂದಿನಂತೆ ದೂರದೃಷ್ಟಿಯುಳ್ಳದ್ದಾಗಿದ್ದು ಅದು ಮನಗಂಡಿರುವುದೆಂದರೆ, ಒಂದುವೇಳೆ ಜಪಾನಿನೊಂದಿಗೆ ಎಂದಾದರೂ ಯುದ್ಧ ಪ್ರಾರಂಭವಾದರೆ, ಭಾರತವೇ ಸ್ವತಃ ಎಲ್ಲಾ ಯುದ್ಧದ ಸಿದ್ಧತೆಗಳ ಗುರುತ್ವಕೇಂದ್ರವಾಬೇಕು. ಜಪಾನ್ ನಮ್ಮ ಗಡಿಗಳ ಸಮೀಪಕ್ಕೆ ಬರುತ್ತಿದಂತೆಯೇ ಶೀಘ್ರವಾಗಿ ಭಾರತೀಯ ಅಧಿಕಾರಿಗಳ ನೇತೃತ್ವದಲ್ಲಿ ಎರಡು ಮಿಲಿಯನ್ ಭಾರತೀಯರನ್ನು ಒಳಗೊಂಡ ಬಲವಾದ ಸೈನ್ಯವನ್ನು ಕಟ್ಟುವ ಸಂದರ್ಭ ಬರಬಹುದು." (ಅದೇ ಪುಸ್ತಕ)
- "ಪ್ರಸ್ತುತ ಪರಿಸ್ಥಿತಿಯಲ್ಲಿ ಬ್ರಿಟಿಷರೊಂದಿಗಿನ ಈ ಅನಿವಾರ್ಯ ಸಹಕಾರವನ್ನು ನಿಮ್ಮ ದೇಶಕ್ಕೆ ಲಾಭದಾಯಕವಾಗಿ ಪರಿವರ್ತಿಸಲು ಸಾಧ್ಯ. ಏಕೆಂದರೆ ಸಶಸ್ತ್ರ ಆಕ್ರಮಣದ ಸಂದರ್ಭದಲ್ಲಿಯೂ ಸಹ, ಸಂಪೂರ್ಣ ಅಹಿಂಸೆ ಮತ್ತು ಪ್ರತಿರೋಧದಲ್ಲಿನ ಧೃತಿಗೆಡಿಸುವ ಕಪಟ ಪ್ರವೃತ್ತಿಯಿಂದಲೋ, ಹೋರಾಟದ ಪಡೆಗಳನ್ನು ಸೇರಬಾರದು ಎಂಬ ನೀತಿಯ ಕಾರಣದಿಂದಲೋ ಸರ್ಕಾರಕ್ಕೆ ಅಸಹಕಾರ ತೋರುತ್ತ ಅದರ ಯುದ್ಧ ಸನ್ನದ್ಧತೆಗೆ ತಾವು ನೇರವಾಗುವುದಿಲ್ಲ ಎಂದು ಘೋಷಿಸುವವರು ಆತ್ಮವಂಚನೆ ಮತ್ತು ಆತ್ಮ ಸಂತೃಪ್ತಿಯಲ್ಲಿ ಮುಳುಗಿದ್ದಾರೆ ಎಂಬುದನ್ನು ಮರೆಯಬಾರದು. (ಅದೇ ಪುಸ್ತಕ)
- "ಈ ಸಂಬಂಧದಲ್ಲಿ ನಮ್ಮ ಹಿತಾಸಕ್ತಿಗೆ ಪೂರಕವಾದ ಒಂದು ಅಂಶವನ್ನು ಒತ್ತಿಹೇಳಬೇಕು, ಭಾರತದ (ಬ್ರಿಟಿಷ್) ಪಡೆಗಳನ್ನು ಸೇರುವ ಹಿಂದೂಗಳು ಮಿಲಿಟರಿ ಶಿಸ್ತಿಗೆ ಸಂಪೂರ್ಣವಾಗಿ ಹೊಂದಿಕೊಳ್ಳಬೇಕು ಮತ್ತು ಬ್ರಿಟಿಷರು ಉದ್ದೇಶಪೂರ್ವಕವಾಗಿ ಹಿಂದೂ ಗೌರವಕ್ಕೆ ಧಕ್ಕೆ ತರದಿದ್ದರೆ ಅವರಿಗೆ ವಿಧೇಯರಾಗಿ ಆಜ್ಞೆಗಳನ್ನು ಪಾಲಿಸಬೇಕು. (ಅದೇ ಪುಸ್ತಕ)

**ಮುಸ್ಲಿಂ ಲೀಗ್ ಜೊತೆ ಏಕತೆ**

ಸಾವರ್ಕರ್ ಅವರ "ಸ್ಪಂದನಾ ಶೀಲ ಸಹಕಾರ" ಸಿದ್ಧಾಂತವು ಮಹಾಸಭಾವನ್ನು ಮುಸ್ಲಿಂ ಲೀಗ್‌ನೊಂದಿಗೆ ಮೈತ್ರಿ ಮಾಡಿಕೊಳ್ಳಲು ಮತ್ತು ಬಂಗಾಳ ಸಿಂಧ್ ಮತ್ತು ವಾಯುವ್ಯ ಫ್ರಾಂಟಿಯರ್ ಪ್ರಾಂತ್ಯಗಳಲ್ಲಿ ಸಮ್ಮಿಶ್ರ ಸರ್ಕಾರಗಳನ್ನು ರಚಿಸಲು ಅನುವು ಮಾಡಿಕೊಟ್ಟಿತು. ಮುಸ್ಲಿಂ ಲೀಗ್‌ನ ಫಜ್ಲುಲ್ ಹಕ್ ಬಂಗಾಳದ ಮುಖ್ಯಮಂತ್ರಿಯಾದರು, ಹಿಂದೂ ಮಹಾಸಭಾದ ಶ್ಯಾಮ ಪ್ರಸಾದ್ ಮುಖರ್ಜಿ ಉಪಮುಖ್ಯಮಂತ್ರಿಯಾದರು. ಬ್ರಿಟಿಷ್ ಸರ್ಕಾರದ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ಹಕ್ ಅವರು, ಸ್ವಾತಂತ್ರ್ಯ ಹೋರಾಟಗಾರ ತ್ರೈಲೋಕ್ಯನಾಥ ಚಕ್ರವರ್ತಿಯವರನ್ನು ಸೆಲ್ಯುಲಾರ್ ಜೈಲಿಗೆ ಕಳಿಸಿದರು!

- "ಇಂಗ್ಲೆಂಡ್ ವಿರುದ್ಧದ ಯುದ್ಧದಲ್ಲಿ ಅಫ್ಘಾನಿಸ್ತಾನದ ಮೂಲಕ ರಷ್ಯಾದ ಸಂಭವನೀಯ ಪ್ರವೇಶವು ಭಾರತಕ್ಕೆ ಗಂಭೀರ ಅಪಾಯವನ್ನು ಒಡ್ಡಬಹುದು. 1914ರ ಮಹಾಯುದ್ಧ ಸಂದರ್ಭದಲ್ಲಿ, ಭಾರತದಲ್ಲಿ ನಡೆದ ಖಿಲಾಫತ್ ಚಳುವಳಿಯಲ್ಲಿ ಭಾಗವಹಿಸಿದ ಅಸಂಖ್ಯಾತ ಮುಸ್ಲಿಮರ ವಿಶ್ವಾಸಘಾತುಕ ನಡೆ ನಮಗೆ ಎಂದಿಗೂ ಮರೆಯಲಾಗದ ಪಾಠವನ್ನು ಕಲಿಸಿದೆ. ಭವಿಷ್ಯದಲ್ಲಿಯೂ ಭಾರತದ ವಾಯುವ್ಯ ಗಡಿನಾಡಿನ ಮೇಲೆ ವಿದೇಶಿ ದಾಳಿಯಾದರೆ ಇದು ಪುನರಾವರ್ತನೆಯಾಗುತ್ತದೆ. ಪಂಜಾಬ್, ಸಿಂಧ್ ಇತ್ಯಾದಿ ಪ್ರಾಂತ್ಯಗಳ ಆದಿವಾಸಿಗಳು ಹಾಗೂ ಮುಸ್ಲಿಂ ಪಡೆಗಳು ಹಿಂದೂಗಳಿಗೆ ದ್ರೋಹ ಮಾಡುವ ಸಾಧ್ಯತೆಯಿದ್ದು ಬಲೂಚಿಸ್ತಾನದಿಂದ ಕಾಶ್ಮೀರ–ದೆಹಲಿಯವರೆಗೆ ವಿಸ್ತರಿಸಿರುವ ಸ್ವತಂತ್ರ ಮುಸ್ಲಿಂ ರಾಜ್ಯ ಅಥವಾ ಫೆಡರೇಶನ್ ಅನ್ನು ಸಂಪೂರ್ಣ ಇಸ್ಲಾಮಿಕ್ ವಿನ್ಯಾಸದಲ್ಲಿ ಕಟ್ಟಬಹುದು. ಭಾರತದ ಅನೇಕ ಜವಾಬ್ದಾರಿಯುತ ಮುಸ್ಲಿಂ ಸಂಘಟನೆಗಳ ಧೋರಣೆಯನ್ನು ಗಮನಿಸಿದರೆ, ಹೊರದೇಶಗಳ ಮುಸ್ಲಿಂಮರೆಡೆಗಿನ ಅವರ ಒಲವನ್ನು ಪ್ರತಿಬಿಂಬಿಸುವ ಅವರ ಬಹಿರಂಗ ಅಧಿವೇಶನಗಳ ನಿರ್ಣಯಗಳು ಈ ಸಂಗತಿಯನ್ನು ಬಯಲುಗೊಳಿಸಿವೆ. ಇದನ್ನು ಹಿಂದೂಗಳು ನಿರ್ಲಕ್ಷಿಸಿದರೆ ಇದಕ್ಕಿಂತ ಆತ್ಮಹತ್ಯಾಕಾರಿ ಮತ್ತು ಕುರುಡು ಹೆಜ್ಜೆ ಬೇರೊಂದಿಲ್ಲ. ಇದು ಹಿಂದೂಗಳಿಗೆ ಅಪಾಯದ ಕರೆಗಂಟೆ. ಇಂತಹ ತುರ್ತು ಪರಿಸ್ಥಿತಿಯಲ್ಲಿ ಹಿಂದೂಗಳು ಇಂತಹ ರಾಷ್ಟ್ರೀಯ ವಿಪತ್ತನ್ನು ನಿವಾರಿಸುವ ಸಾಮಾನ್ಯ ಉದ್ದೇಶದಲ್ಲಿ ಬ್ರಿಟಿಷ್ ಪಡೆಗಳೊಂದಿಗೆ ಕೈಜೋಡಿಸಬೇಕಾಗುತ್ತದೆ" (ಅದೇ ಪುಸ್ತಕ)
- "ಉದಾಹರಣೆಗೆ ಬಾಂಬೆ ಪ್ರೆಸಿಡೆನ್ಸಿಯಲ್ಲಿ ನೇಮಕಾತಿ ಕಮಿಷನರ್‌ಗಳು ಮತ್ತು ಅಧಿಕಾರಿಗಳು ವಾಸ್ತವವಾಗಿ ಹಿಂದೂ ಮಹಾಸಭಾ ಪ್ರಾರಂಭಿಸಿದ ಹಿಂದೂ ಸೈನಿಕ ಮಂಡಳಿಗಳೊಂದಿಗೆ ಸಂಪರ್ಕವನ್ನು ಸ್ಥಾಪಿಸುತ್ತಿದ್ದಾರೆ. ಮತ್ತು ಹಿಂದೂ ಅಭ್ಯರ್ಥಿಗಳು ನೌಕಾಪಡೆಗೆ ಪ್ರವೇಶಿಸಲು, ಹುದ್ದೆಗಳನ್ನು ಹೊಂದಲು ಮತ್ತು ವೈಮಾನಿಕ, ನೌಕಾ ಮತ್ತು ಭೂ ಪಡೆಗಳಲ್ಲಿ ತರಬೇತಿ ಪಡೆಯಲು ತಕ್ಕ ಮಟ್ಟಿಗೆ ಸಹಾಯ ಮಾಡಲು ಪ್ರಯತ್ನಿಸುತ್ತಿದ್ದಾರೆ. ಬೆವಿನ್ ಯೋಜನೆಯು ಚೆನ್ನಾಗಿ ಕಾರ್ಯನಿರ್ವಹಿಸುತ್ತಿದ್ದು ದೊಡ್ಡಪ್ರಮಾಣದಲ್ಲಿ ಹಿಂದೂ ಯಂತ್ರಶಾಸ್ತ್ರಜ್ಞರು ದೊಡ್ಡ ಸಂಖ್ಯೆಯಲ್ಲಿ ಅದರಲ್ಲಿ ಸೇರುತ್ತಿದ್ದಾರೆ." (ಅದೇ ಪುಸ್ತಕ ಪುಟಸಂಖ್ಯೆ 149–50)
- ರಕ್ಷಣಾ ಸಮಿತಿ ಮತ್ತದರ ಸಿಬ್ಬಂದಿ ಕುರಿತಾದ ಘನತೆವೆತ್ತ ತಮ್ಮ ಘೋಷಣೆಯು ಸ್ವಾಗತಾರ್ಹವಾಗಿದೆ. ಹಿಂದೂ ಮಹಾಸಭಾವು ಮೆ॥ ಕಲಿಕರಂದ್ ಜಮ್ನಾದಾಸ್ ಮೆಹ್ತಾ ಅವರ ನೇಮಕಾತಿಯನ್ನು ಬಹಳಷ್ಟು ಸಂತೋಷದಿಂದ ಸ್ವಾಗತಿಸುತ್ತದೆ." (1941 ರ ಜುಲೈ 18 ರಂದು ಸಾವರ್ಕರ್ ಅವರು ಕಮಾಂಡರ್ ಇನ್ ಚೀಫ್, ಜನರಲ್ ವೇವೆಲ್ ಮತ್ತು ಭಾರತದ ವೈಸ್ ರಾಯ್ ಅವರಿಗೆ ಈ ಟೆಲಿಗ್ರಾಮ್ ಕಳುಹಿಸಿದ್ದಾರೆ.)

**ಕ್ಷಮಾದಾನ ಅರ್ಜಿಗಳು**

- 1911 ರಲ್ಲಿ ಕೇವಲ ಒಂದು ತಿಂಗಳ ಕಠಿಣ ಸೆರೆವಾಸದಲ್ಲಿ, ಸಾವರ್ಕರ್ ಅವರು ತಮ್ಮ ಮೊದಲ ಕ್ಷಮಾದಾನ ಅರ್ಜಿಯನ್ನು ಬರೆದರು. ಆದರೆ ಅದನ್ನು ತಿರಸ್ಕರಿಸಲಾಯಿತು. ಅವರು 1913ರಲ್ಲಿ ಬರೆದ ಎರಡನೇ ಕ್ಷಮಾದಾನ ಅರ್ಜಿಯು, ಅವರ ಪಕ್ಷದ ಇತರ ಅಪರಾಧಿಗಳು ತನಗಿಂತ ಉತ್ತಮ ಸೌಲಭ್ಯ ಪಡೆಯುತ್ತಿರುವ ಬಗ್ಗೆ ಕಟುವಾದ ದೂರುಗಳೊಂದಿಗೆ ಪ್ರಾರಂಭವಾಗುತ್ತದೆ: "ನಾನು 1911 ಜೂನ್‌ನಲ್ಲಿ ಇಲ್ಲಿಗೆ ಬಂದಾಗ, ನನ್ನ ಪಕ್ಷದ ಉಳಿದ ಅಪರಾಧಿಗಳೊಂದಿಗೆ ನನ್ನನ್ನು ಮುಖ್ಯ ಆಯುಕ್ತರ ಕಚೇರಿಗೆ ಕರೆದೊಯ್ಯಲಾಯಿತು. ಅಲ್ಲಿ

೨ನೇ ಪುಟಕ್ಕೆ....

### ಲೋಕಸಭಾ ಚುನಾವಣೆ 18, ಇಂದೋರ್:

# ಬಿಜೆಪಿಯ ಆಮಿಷ–ಒತ್ತಡಗಳಿಗೆ ಮಣಿಯದ ಎಸ್‌ಯುಸಿಐ(ಸಿ) ಪಕ್ಷ ಮತ್ತು ಅಭ್ಯರ್ಥಿ!

ಮಧ್ಯಪ್ರದೇಶದ ಇಂದೋರಿನ ಲೋಕಸಭಾ ಚುನಾವಣಾ ಕಣದಲ್ಲಿದ್ದ ನಮ್ಮ ಪಕ್ಷ ಎಸ್‌ಯುಸಿಐ(ಸಿ)ಯ ಧೀರೋದಾತ್ತ ಅಭ್ಯರ್ಥಿಯಾದ ಕಾ. ಅಜಿತ್ ಸಿಂಗ್ ಪನ್ವಾರ್‌ರವರು ಕಣದಿಂದ ಹಿಂದೆ ಸರಿಯಬೇಕೆಂದು ಸರ್ಕಾರಿ ಅಧಿಕಾರಿಗಳು ಮತ್ತು ಬಿಜೆಪಿಯ ರಾಯಭಾರಿಗಳು ಎಂದು ಕರೆದುಕೊಂಡವರಿಂದ ಅವರ ಮೇಲೆ ಅವಿರತವಾಗಿ ರಾಜಕೀಯ ಒತ್ತಡ ಹೇರಲಾಗಿತ್ತು. ನೂರಾರು ಮಿಸ್ಡ್ ಕಾಲ್‌ಗಳನ್ನು ಸಹ ಮಾಡಿ ಬೆದರಿಕೆ ಒಡ್ಡಲಾಗಿತ್ತು. ಮಾಧ್ಯಮ ಪ್ರತಿನಿಧಿಯೊಬ್ಬರೊಂದಿಗೆ ಮಾತನಾಡಿದ ಕಾ. ಪನ್ವಾರ್‌ರವರು ಹೇಳಿದ್ದು: "ನನಗೆ ಪರಿಚಯಸ್ಥರಾದ ವಕೀಲ ಮೋಹರ್ ಸಿಂಗ್, ಏಪ್ರಿಲ್ 27ರಂದು ಕರೆ ಮಾಡಿ ಬಿಜೆಪಿಯ ಮಾಜಿ ಶಾಸಕರೊಬ್ಬರು ಯಾವುದೋ ಮುಖ್ಯ ವಿಷಯದ ಬಗ್ಗೆ ಮಾತನಾಡಲು ನನ್ನನ್ನು ಭೇಟಿಯಾಗಲು ಬಯಸುತ್ತಾರೆ ಎಂದು ಹೇಳಿದರು. ನಾನು ನಿರಾಕರಿಸಿದೆ. ನನ್ನ ಹುಟ್ಟೂರಾದ ಗುಣಾದ ಓರ್ವ ಪೊಲೀಸ್ ಅಧಿಕಾರಿ ಸಹ ಕರೆ ಮಾಡಿ ಇಂಥದ್ದೇ ಹೇಳಿದರು. ಸೂರತ್‌ನಲ್ಲಿ ಬಿಜೆಪಿ, ಇತರೆಲ್ಲಾ ಪಕ್ಷಗಳ ಅಭ್ಯರ್ಥಿಗಳು ಹಿಂತೆಗೆಯುವಂತೆ ಮಾಡಿ ತನ್ನ ಅಭ್ಯರ್ಥಿ ಅವಿರೋಧವಾಗಿ ಆಯ್ಕೆಯಾಗುವಂತೆ ಮಾಡಿರುವ ರೀತಿ ಇಲ್ಲಿಯೂ ನಡೆಯುತ್ತಿದೆ ಎಂದರ್ಥ ಮಾಡಿಕೊಂಡ ನಾನು ಒಪ್ಪಲಿಲ್ಲ." ಆದಾಗ್ಯೂ ಕಾ. ಪನ್ವಾರ್ ಅವರಿಗೆ ಅನಾಮಧೇಯ ಕರೆಗಳು ಬರುತ್ತಲೇ ಇದ್ದವು. ಅವರ ಚುನಾವಣಾ ಏಜೆಂಟರ ಮೂಲಕವೂ ಒತ್ತಡ ಹೇರಲಾಯಿತು. ಇಂದೋರ್ ಮತ್ತು ಗುಣಾದಲ್ಲಿಯ ನಮ್ಮ ಪಕ್ಷದ ಕಾಮ್ರೇಡರನ್ನೂ ಸಹ ಭೇಟಿ ಮಾಡಿ ಒತ್ತಡ ಹೇರುವ ಪ್ರಯತ್ನ ನಡೆಯಿತು.

ಹತಾಶ ಬಿಜೆಪಿ, ನಮ್ಮ ಅಭ್ಯರ್ಥಿಯ ಸೂಚಕರನ್ನು ಗುರಿಯಾಗಿಸಿ ನಮ್ಮ ಪಕ್ಷದೆಡೆಗೆ ಅವರಿಗಿರುವ ಬದ್ಧತೆಯಿಂದ ಅವರನ್ನು ವಿಮುಖರನ್ನಾಗಿಸಲು ಒತ್ತಡ ಹೇರಿತು. ಬಿಜೆಪಿಯ ಪ್ರಭಾವಿ ನಾಯಕರೊಬ್ಬರು, ನಮ್ಮ ಪಕ್ಷದ ಹಿರಿಯ ಕಾಮ್ರೇಡರಾದ ಓರ್ವ ಪ್ರಸ್ತಾಪಕರಿಗೆ ಕರೆ ಮಾಡಿ ನಮ್ಮ ಅಭ್ಯರ್ಥಿಗೆ ಅವರು ನೀಡಿರುವ ಬೆಂಬಲವನ್ನು ಹಿಂತೆಗೆದುಕೊಳ್ಳುವಂತೆ ಹೇಳಿದರು. ಆದರೆ, ಅವರು ಜಗ್ಗಲಿಲ್ಲ. ನಮ್ಮ ಅಭ್ಯರ್ಥಿ ಹಿಂದೆ ಸರಿದರೆ, ತಮ್ಮ ಅಭ್ಯರ್ಥಿ ಶಂಕರ್ ಲಾಲ್ವಾನಿ ಅವಿರೋಧವಾಗಿ ಆಯ್ಕೆಯಾಗಬಹುದು ಎಂದುಕೊಂಡ ಬಿಜೆಪಿಯವರು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಇತರ ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವಂತೆ ಅವುಗಳ ಮೇಲೆ ಒತ್ತಡ ಹೇರಿದ್ದರು. ಕಾಂಗ್ರೆಸ್‌ನ ಅಭ್ಯರ್ಥಿ ಕಣದಿಂದ ದೂರಸರಿದ ಬಳಿಕ ನಮ್ಮ ಪಕ್ಷವನ್ನು ಬಿಟ್ಟು ಕಣದಲ್ಲಿ ಉಳಿದವರೆಂದರೆ 13 ಅಭ್ಯರ್ಥಿಗಳು. ಅವರನ್ನೂ ಸಹ ಹಿಂತೆಗೆದುಕೊಳ್ಳುವಂತೆ ಒಪ್ಪಿಸಿದ್ದರು. ಆದರೆ, ನಮ್ಮ ಅಭ್ಯರ್ಥಿ ಹಿಂತೆಗೆದುಕೊಳ್ಳದ ಕಾರಣ, ಅವರನ್ನು ಕಣದಲ್ಲಿ ಉಳಿಯಲು ಬಿಟ್ಟರು. ಹಾಗಾಗಿ, ಇಂದೋರ್ ಸಹ ಸೂರತ್‌ನ ದಾರಿ ಹಿಡಿಯದೆ ಅಲ್ಲಿ 13.05.2024ರಂದು ಚುನಾವಣೆ ನಡೆಯಲು ಕಾರಣವಾಗಿದ್ದು ನಮ್ಮ ಪಕ್ಷದ ದೃಢ ನಿಲುವು! ಹೀಗೆ, ಪ್ರಭಾವಿ ಬಿಜೆಪಿ ನಾಯಕರ ಒತ್ತಡವನ್ನು ರಾಜ್ಯ ಸಮಿತಿ ಕಾರ್ಯದರ್ಶಿಗಳಾದ ಕಾ. ಪ್ರತಾಪ್ ಸಮಲ್‌ರವರ ಸಮರ್ಥ ನೇತೃತ್ವದಲ್ಲಿ, ಇಡೀ ರಾಜ್ಯ ಸಮಿತಿ, ಜಿಲ್ಲಾ ಸಮಿತಿ ಮತ್ತು ಇಂದೋರಿನ ಪಕ್ಷದ ಇಡೀ ಘಟಕ, ಎಲ್ಲವೂ ಒಗ್ಗೂಡಿ ದಿಟ್ಟವಾಗಿ ಎದುರಿಸಿದವು. ಪಕ್ಷದ ಈ ಅವಿಚಲ ನಿಲುವು ಮತ್ತು ದೃಢವಾದ ನಿರ್ಧಾರದ ಕಾರಣದಿಂದ ಬಿಜೆಪಿಗೆ ಒಂದು ಕ್ರಾಂತಿಕಾರಿ ಕಮ್ಯುನಿಸ್ಟ್ ಪಕ್ಷದ ಸಾಮರ್ಥ್ಯದ ಅರಿವಾಗಿದೆ. ಬಿಜೆಪಿಯ ಒತ್ತಡಕ್ಕೆ ಮಣಿಯದೆ ನಮ್ಮ ಪಕ್ಷ ಒಡ್ಡಿದ ದೃಢವಾದ ಪ್ರತಿರೋಧ, ಕಾರ್ಮಿಕವರ್ಗದ ಮಹಾನ್ ನಾಯಕರಾದ ಕಾಮ್ರೇಡ್ ಶಿವದಾಸ್ ಘೋಷ್‌ರವರು ಸ್ಥಾಪಿಸಿ, ಪೋಷಿಸಿ, ಮುನ್ನಡೆಸಿರುವ ಕಾರ್ಮಿಕವರ್ಗದ ಕ್ರಾಂತಿಕಾರಿ ಪಕ್ಷವಾದ ಎಸ್‌ಯುಸಿಐ(ಸಿ)ನ ಅದಮ್ಯ ಚೇತನವನ್ನು ಮುನ್ನೆಲೆಗೆ ತಂದಿದೆ. ನಾವು ಕಾ. ಶಿವದಾಸ್ ಘೋಷ್‌ರವರ ರಾಜಿರಹಿತ ಪರಂಪರೆಯ ಉತ್ತರಾಧಿಕಾರಿಗಳಾಗಿ ನಮ್ಮ ದೇಹದಲ್ಲಿ ರಕ್ತದ ಕೊನೆಯ ಹನಿ ಇರುವವರೆಗೂ ಹೋರಾಡುತ್ತೇವೆ. ಸಂಸದರನ್ನು ಮತ್ತು ಶಾಸಕರನ್ನು ಖರೀದಿಸುವ ಬಿಜೆಪಿಯ ನಿರ್ಲಜ್ಜ ಪ್ರಯತ್ನಗಳ ಮಧ್ಯೆಯೂ ನಾವು ಅವರೆಲ್ಲಾ ಯೋಜನೆಗಳಿಗೆ ಬಲಿ ಬೀಳದೆ ದೃಢವಾಗಿ ನಿಂತಿದ್ದೇವೆ. ಚುನಾವಣೆಯ ಫಲಿತಾಂಶ ಏನೇ ಬರಲಿ, ಬೂರ್ಜ್ವಾ ಪಕ್ಷಗಳ ಕುಟಿಲೋಪಾಯಗಳನ್ನು ಮೆಟ್ಟಿ ನಿಂತ ನಮ್ಮ ಪಕ್ಷ ನೈತಿಕ ನೆಲೆಗಟ್ಟಿನಲ್ಲಿ ಗೆದ್ದಿದೆ. ಈ ಬೆಳವಣಿಗೆಗಳ ಬಗ್ಗೆ ಅರಿತ ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್ ಘೋಷ್‌ರವರು ನಮ್ಮ ಕಾಮ್ರೇಡರುಗಳಿಗೆ ಕ್ರಾಂತಿಕಾರಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ■

**ಸಿಪಿಐ(ಎಂ) ನೀಡಿರುವ ಹೇಳಿಕೆಯಲ್ಲಿ ಇಂದೋರಿನ ಮತದಾರರು ಬಿಜೆಪಿಯನ್ನು ಸೋಲಿಸಲು 'ನೋಟಾ'(ಯಾರೂ ಬೇಡ) ಒತ್ತಲು ಕರೆ ನೀಡಿದೆ. ಇದರಿಂದ ಬಿಜೆಪಿಯನ್ನು ಹೇಗೆ ಸೋಲಿಸಬಹುದು ಎಂಬುದೇ ಯಕ್ಷಪ್ರಶ್ನೆ! ಆದರೆ, ಸಿಪಿಐ, ಎಸ್‌ಯುಸಿಐ(ಸಿ) ಅಭ್ಯರ್ಥಿಗೆ ಮತ ನೀಡಲು ಮನವಿ ಮಾಡಿದೆ.**

# ಯುಎಸ್‌ಎ ಪಾರ್ಟಿ ಆಫ್ ದಿ ಕಮ್ಯುನಿಸ್ಟ್ಸ್ [ಪಿಸಿಯುಎಸ್‌ಎ] ಪಕ್ಷದ 4 ನೇ ಮಹಾಧಿವೇಶನ:

## ಎಸ್‌ಯುಸಿಐ(ಸಿ) ಪಕ್ಷದ ಕ್ರಾಂತಿಕಾರಿ ಶುಭಾಶಯಗಳು

**(ಅಮೆರಿಕಾದ ಕಮ್ಯುನಿಸ್ಟ್ ಪಕ್ಷವು ತನ್ನ 4ನೇ ಮಹಾಧಿವೇಶನವನ್ನು ಸಂಘಟಿಸಿರುವ ಸಂದರ್ಭದಲ್ಲಿ ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾ.ಪ್ರವಾಶ್‌ಘೋಷ್‌ರವರು ಕಳುಹಿಸಿದ್ದ ಅಭಿನಂದನಾ ಸಂದೇಶ)**

31 ಮಾರ್ಚ್ 2024
ಕಾಮ್ರೇಡ್ ಏಂಜೆಲೊ ಡಿ'ಏಂಜೆಲೊ,
ಪ್ರಧಾನ ಕಾರ್ಯದರ್ಶಿ, ಪಾರ್ಟಿ ಆಫ್ ಕಮ್ಯುನಿಸ್ಟ್, ಯುಎಸ್‌ಎ
ಆತ್ಮೀಯ ಕಾಮ್ರೇಡ್,

ನಿಮ್ಮ ಪಕ್ಷ ಪಿಸಿಯುಎಸ್‌ಎಯು ತನ್ನ 4 ನೇ ಮಹಾಧಿವೇಶನವನ್ನು (ಕಾಂಗ್ರೆಸ್) 2024 ರ ಏಪ್ರಿಲ್ ತಿಂಗಳಲ್ಲಿ ನಡೆಸಲಿದೆ ಎಂದು ತಿಳಿದು ನಮಗೆ ಸಂತೋಷವಾಗಿದೆ.

ಸಾಮ್ರಾಜ್ಯಶಾಹಿ ಮತ್ತು ಪ್ರತಿಗಾಮಿ ನಿಲುವುಗಳ ಹೃದಯ ಸ್ಥಾನದಲ್ಲಿ ನಿಮ್ಮ ಕಮ್ಯುನಿಸ್ಟ್ ಪಕ್ಷವು ಕೆಲಸ ಮಾಡುತ್ತಿದ್ದು, ಮಾರ್ಕ್ಸ್‌ವಾದ ಲೆನಿನ್‌ವಾದದ ಬ್ಯಾನರ್ ಅನ್ನು ಎತ್ತಿ ಹಿಡಿದು ಕ್ರಾಂತಿಕಾರಿ ಸಾಮಾಜಿಕ ರಾಜಕೀಯ ಬದಲಾವಣೆಗಾಗಿ ಕಾರ್ಮಿಕ ವರ್ಗವನ್ನು ಮತ್ತು ದುಡಿಯುವ ಜನತೆಯನ್ನು ಸಂಘಟಿಸಲು ಪ್ರಯತ್ನಿಸುತ್ತಿದೆ ಎಂದು ತಿಳಿದು ನಮಗೆ ಸಂತೋಷವಾಗಿದೆ.

ಇಡೀ ಬಂಡವಾಳಶಾಹಿ–ಸಾಮ್ರಾಜ್ಯಶಾಹಿ ಜಗತ್ತು ಆಳವಾದ ಬಿಕ್ಕಟ್ಟುಗಳ ಬಲೆಯಲ್ಲಿ ಸಿಲುಕಿರುವ ಸಮಯದಲ್ಲಿ ನೀವು ನಿಮ್ಮ ಪಕ್ಷದ ಕಾಂಗ್ರೆಸ್ ಅನ್ನು ನಡೆಸುತ್ತಿದ್ದೀರಿ. ಬಿಕ್ಕಟ್ಟು ಕೇವಲ ಆರ್ಥಿಕ ಮಾತ್ರವೇ ಆಗಿರದೆ ಜೀವನದ ಎಲ್ಲಾ ರಂಗಗಳನ್ನು ಆವರಿಸಿದ್ದು ಮಾರ್ಕ್ಸ್‌ವಾದಿ ಭವಿಷ್ಯವಾಣಿಯನ್ನು ನಿಜವೆಂದು ಸಾಬೀತುಪಡಿಸುತ್ತಿದೆ. ಜನರ ಜೀವನದಲ್ಲಿ ಹಿಂದೆಂದೂ ಕಂಡರಿಯದ ಆರ್ಥಿಕ ಸಂಕಷ್ಟವು ತೀವ್ರ ಅಸಮಾಧಾನಕ್ಕೆ ಜನ್ಮ ನೀಡುತ್ತಿದೆ, ಅದು ರಾಜ್ಯದ ಕ್ರೂರ ದಮನವನ್ನು ಎದುರಿಸಿ ಬೀದಿಗಿಳಿದು ಪ್ರತಿಭಟನೆ ಮಾಡಲು ಜನತೆಗೆ ಆಗ್ರಹಿಸುತ್ತಿದೆ. ಹೀಗಾಗಿ ಎಲ್ಲಾ ಸಾಮ್ರಾಜ್ಯಶಾಹಿ–ಬಂಡವಾಳಶಾಹಿ ದೇಶಗಳಲ್ಲಿ ವಿವಿಧ ವಿಭಾಗಗಳ ದುಡಿಯುವ ಜನತೆಯ ಪ್ರತಿಭಟನೆಯ ಅಲೆಗಳು ಈಗ ದೈನಂದಿನ ಕ್ರಮವಾಗಿ ಮಾರ್ಪಟ್ಟಿದ್ದು ಅದು ತನ್ನ ತಾರ್ಕಿಕ ಗಮ್ಯತೆಯನ್ನು ಇನ್ನೂ ತಲುಪಬೇಕಷ್ಟೆ. ಹೀಗಾಗಿ ಕ್ರಾಂತಿಗೆ ವಸ್ತುನಿಷ್ಠ ಸ್ಥಿತಿಯು ಪೂರೈಸಲ್ಪಟ್ಟಿದೆ, ಆದರೆ ವ್ಯಕ್ತಿನಿಷ್ಠ ಸ್ಥಿತಿ ಇನ್ನೂ ನಿರ್ಮಾಣವಾಗಿಲ್ಲ.

ಅಮೆರಿಕಾ ಸಾಮ್ರಾಜ್ಯಶಾಹಿ ತನ್ನ ಯುದ್ಧ ಸ್ನೇಹಿತ ನ್ಯಾಟೋ ಜೊತೆ ಈಗ ಉಕ್ರೇನ್‌ನಲ್ಲಿ ರಷ್ಯಾ ಸಾಮ್ರಾಜ್ಯಶಾಹಿಯ ವಿರುದ್ಧ ಛಾಯಾ ಯುದ್ಧದಲ್ಲಿ ತೊಡಗಿದೆ ಮತ್ತು ಗಾಜಾದಲ್ಲಿ ಪ್ಯಾಲೆಸ್ಟೀನ್ ವಿರುದ್ಧ ಬೃಹತ್ ವಿನಾಶವನ್ನು ಮತ್ತು ಮುಗ್ಧ ಜನರ ಮಾರಣಹೋಮವನ್ನು ನಡೆಸುತ್ತಿದೆ.

ಎರಡನೇ ಮಹಾಯುದ್ಧದ ನಂತರ ಮಹಾನ್ ಸ್ಟಾಲಿನ್‌ರ ನೇತೃತ್ವದಲ್ಲಿ ಸೋವಿಯತ್ ಒಕ್ಕೂಟದ ವಿಜಯದ ನಂತರ, ವಸಾಹತುಗಳು ಮತ್ತು ಅರೆ–ವಸಾಹತುಗಳಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಸ್ವಾತಂತ್ರ್ಯ ಚಳುವಳಿಗಳು ಮತ್ತು ಮಹಾನಗರ ಕೇಂದ್ರಿತ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಕಾರ್ಮಿಕ ವರ್ಗ ಚಳುವಳಿಗಳು ಯಥೇಚ್ಛವಾಗಿ ಏರಿಕೆಯಾದವು. ಮಹಾನ್ ಮಾವೋ ಅವರ ನೇತೃತ್ವದಲ್ಲಿ ಚೀನಾ ಕ್ರಾಂತಿಯ ವಿಜಯದ ನಂತರ ಇದಕ್ಕೆ ಇನ್ನೂ ಬಲ ದೊರೆತಿತ್ತು. ಆದರೆ, ಮಹಾನ್ ಸ್ಟಾಲಿನ್‌ರ ನಿಧನದ ನಂತರ, ರಷ್ಯಾದ ಕಮ್ಯುನಿಸ್ಟ್ ನಾಯಕತ್ವವನ್ನು ಕ್ರುಶ್ಚೇವ್‌ವಾದಿ ಪರಿಷ್ಕರಣವಾದಿ ನಾಯಕತ್ವವು ವಶಪಡಿಸಿಕೊಂಡಿತು. ನಮ್ಮ ಪಕ್ಷ ಎಸ್‌ಯುಸಿಐ(ಸಿ)ನ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಗಳು ಮತ್ತು ಈ ಯುಗದ ಅಪ್ರತಿಮ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್‌ರವರು, 1956 ರಲ್ಲಿ ಮಹಾನ್ ಸ್ಟಾಲಿನ್‌ರ ಅಥಾರಿಟಿಯನ್ನು ಅಲ್ಲಗಳೆಯುವುದು ಎಂದರೆ, ಅದು ಸ್ವತಃ ಮಹಾನ್ ಲೆನಿನ್‌ರನ್ನು ಪದಚ್ಯುತಗೊಳಿಸಿದಂತೆ ಎಂದು ಹೇಳಿದ್ದರು. ಸಮಯೋಚಿತವಾಗಿ ಪರಿಷ್ಕರಣವಾದದ ಪ್ರಭಾವದ ವಿರುದ್ಧ ಹೋರಾಡದಿದ್ದರೆ, ವಿಶ್ವ ಕಮ್ಯುನಿಸ್ಟ್ ಚಳುವಳಿಯು ಆ ಉಸುಕಿನಲ್ಲಿ ಸಿಲುಕಿ ನಾಶವಾಗುತ್ತದೆ ಹಾಗೂ ಪ್ರತಿಕ್ರಾಂತಿಯು ಪ್ರಚೋದನೆ ಪಡೆಯುತ್ತದೆ ಎಂದು ಆಗಲೇ ಕಾ. ಶಿವದಾಸ್ ಘೋಷ್‌ರವರು ಹೇಳಿದ್ದರು. ನಮ್ಮ ಪಕ್ಷದ ಈ ಸಂದರ್ಭೋಚಿತ ನಿರ್ದೇಶನವನ್ನು ಜಗತ್ತಿನ ಕಮ್ಯುನಿಸ್ಟರಿಗೆ ತಲುಪಿಸಲಾಗಲಿಲ್ಲ.

ಭಾರತದಲ್ಲಿ ನಮ್ಮ ಪಕ್ಷವು ಮಾರ್ಕ್ಸ್‌ವಾದ–ಲೆನಿನ್‌ವಾದ–ಶಿವದಾಸ್ ಘೋಷ್ ಚಿಂತನೆಯೊಂದಿಗೆ ಸುಸಜ್ಜಿತವಾಗಿದೆ, ಭಾರತದ ಸಾಮ್ರಾಜ್ಯಶಾಹಿ–ಬಂಡವಾಳಶಾಹಿಯ ವಿರುದ್ಧ ಸಮೂಹ ಮತ್ತು ವರ್ಗ ಹೋರಾಟಗಳನ್ನು ಆಯೋಜಿಸುತ್ತಿದೆ. ಪರಿಷ್ಕರಣವಾದಿ ಮತ್ತು ಸುಧಾರಣಾವಾದಿ ಹುಸಿ–ಕಮ್ಯುನಿಸ್ಟ್ ಪಕ್ಷಗಳ ವಿರುದ್ಧ ಏಕಕಾಲದಲ್ಲಿ ವೈಚಾರಿಕ ಯುದ್ಧಗಳನ್ನು ನಡೆಸುತ್ತಾ ಬಂದಿದ್ದೇವೆ. ಇದರೊಟ್ಟಿಗೆ, ನಮ್ಮ ಪಕ್ಷದಲ್ಲಿ ಕಾರ್ಮಿಕ ವರ್ಗದ ಸಂಸ್ಕೃತಿ ಮತ್ತು ನೈತಿಕತೆಯ ಆಧಾರದ ಮೇಲೆ ಕಮ್ಯುನಿಸ್ಟ್ ಚಾರಿತ್ರ್ಯವನ್ನು ಮೇಲೆತ್ತಲು ನಿರಂತರವಾಗಿ ಅವಿರತ ಹೋರಾಟಗಳನ್ನು ಪಕ್ಷದಲ್ಲೇ ನಡೆಸುತ್ತಿದ್ದೇವೆ.

ಮಾರ್ಕ್ಸ್‌ವಾದ–ಲೆನಿನ್‌ವಾದ ಮತ್ತು ಕಾರ್ಮಿಕ ವರ್ಗದ ಅಂತರರಾಷ್ಟ್ರೀಯವಾದದ ಆಧಾರದ ಮೇಲೆ ಪರಸ್ಪರ ಸಹೋದರ ಸಂಬಂಧವನ್ನು ಅಭಿವೃದ್ಧಿಪಡಿಸುವ ಮೂಲಕ ವಿಶ್ವ ಕಮ್ಯುನಿಸ್ಟ್ ಚಳುವಳಿಯನ್ನು ಅಭಿವೃದ್ಧಿಪಡಿಸುವುದು ಮತ್ತು ಬಲಪಡಿಸುವುದು ಈ ಸಮಯದ ಅಗತ್ಯವಾಗಿದೆ ಎಂದು ನಾವು ಭಾವಿಸುತ್ತೇವೆ.

ನಾವು ಈ ನಿಟ್ಟಿನಲ್ಲಿ ಒಟ್ಟಿಗೆ ಕೆಲಸ ಮಾಡಲು ಇಷ್ಟಪಡುತ್ತೇವೆ.

**ಕ್ರಾಂತಿ ಚಿರಾಯುವಾಗಲಿ**
**ಕ್ರಾಂತಿಕಾರಿ ಶುಭಾಶಯಗಳೊಂದಿಗೆ,**
**ಪ್ರವಾಶ್‌ಘೋಷ್, ಪ್ರಧಾನ ಕಾರ್ಯದರ್ಶಿ**
**ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್)**

...8ನೇ ಪುಟದಿಂದ

## ವಿನಾಯಕ ದಾಮೋದರ್ ಸಾವರ್ಕರ್ ಅವರ "ದೇಶಪ್ರೇಮ"!

ನನಗೆ ಡಿ ದರ್ಜೆಯ ಆಪಾಯಕಾರಿ ಅಪರಾಧಿಯೆಂದು ಕರೆಯಲಾಯಿತು. ಉಳಿದವರಿಗೆ ಆ ದರ್ಜೆಯನ್ನು ಕೊಡಲಿಲ್ಲ. ನಂತರ ನನಗೆ ಆರು ತಿಂಗಳ ಏಕಾಂಗಿ ಸೆರೆವಾಸವನ್ನು ವಿಧಿಸಲಾಯಿತು. ಎಲ್ಲಾ ಸಮಯದಲ್ಲಿ ನನ್ನ ನಡವಳಿಕೆಯು ಅಸಾಧಾರಣವಾಗಿ ಉತ್ತಮವಾಗಿದ್ದರೂ ಈ ಆರು ತಿಂಗಳ ನಂತರ, ನನ್ನ ಜೊತೆ ಬಂದಿದ್ದ ಇತರ ಅಪರಾಧಿಗಳನ್ನು ಬಿಡುಗಡೆ ಮಾಡಿದರೂ ನನ್ನನ್ನು ಜೈಲಿನಿಂದ ಹೊರಗೆ ಕಳುಹಿಸಲಾಗಿಲ್ಲ.... ಕಾಲಾವಧಿ ಅಪರಾಧಿಗಳ ವಿಷಯವೇ ಬೇರೆ ಸ್ವಾಮಿ, 50ವರ್ಷಗಳ ಸೆರೆವಾಸ ನನ್ನ ಮುಂದಿದೆ ಅತ್ಯಂತ ಕೆಟ್ಟ ಅಪರಾಧಿಗಳೂ ತಮ್ಮ ಜೀವನವನ್ನು ಸುಗಮವಾಗಿ ಸಾಗಿಸಲು ನೀಡಿದ ರಿಯಾಯಿತಿಗಳನ್ನು ಸಹ ನನಗೆ ನಿರಾಕರಿಸಿದರೆ ಏಕಾಂತ ವಾಸದಲ್ಲಿ ಇಷ್ಟು ವರ್ಷಗಳನ್ನು ಕಳೆಯುವ ನೈತಿಕ ಶಕ್ತಿ ನನಗೆ ಹೇಗೆ ದೊರೆತೀತು?"

- ". . . . ಸರ್ಕಾರವು ವಿಶಾಲ ಹೃದಯ, ಕರುಣೆಯಿಂದ ನನ್ನನ್ನು ಬಿಡುಗಡೆ ಮಾಡಿದರೆ, ಇಂಗ್ಲಿಷ್ ಸರ್ಕಾರಕ್ಕೆ ನನ್ನಷ್ಟು ದೃಢನಿಷ್ಠೆಯನ್ನು ಪ್ರತಿಪಾದಿಸುವ ವ್ಯಕ್ತಿ ಮತ್ತಾರೂ ಇರಲು ಸಾಧ್ಯವಿಲ್ಲ." (14 ನವೆಂಬರ್ 1913 ದಿನಾಂಕದ ಕ್ಷಮಾದಾನ ಅರ್ಜಿ)
- "ಪ್ರಸ್ತುತ ಯುದ್ಧದಲ್ಲಿ ಭಾರತ ಸರ್ಕಾರ ನನಗೆ ಸೂಕ್ತವೆಂದು ನನ್ನಿಂದ ಅಗ್ರಹಿಸುವ ಯಾವುದೇ ಸೇವೆಯನ್ನು ನಾನು ಸ್ವಯಂಸೇವಕನಾಗಿ ನೀಡಲು ವಿನಮ್ರತೆಯಿಂದ ನನ್ನನ್ನೇ ಒಪ್ಪಿಸಿಕೊಳ್ಳಲು ಬೇಡಿಕೊಳ್ಳುತ್ತಿದ್ದೇನೆ..... ತಮ್ಮ ಮಹಾಸಾಮ್ರಾಜ್ಯಕ್ಕೆ ನನ್ನಂತಹ ಅತ್ಯಲ್ಪ ವ್ಯಕ್ತಿಯ ಸಹಾಯದ ಅವಶ್ಯಕತೆಯಿರಲಾರದೆಂದೂ ನನಗೆ ಗೊತ್ತು. ಆದರೂ ಪ್ರತಿಯೊಬ್ಬ ವ್ಯಕ್ತಿಯೂ, ಎಷ್ಟೇ ಅಲ್ಪನಾಗಿದ್ದರೂ, ರಾಷ್ಟ್ರದ ರಕ್ಷಣೆಗಾಗಿ ಸ್ವಯಂಸೇವಕನಾಗಲು ತನ್ನಲ್ಲಿನ ಅತ್ಯುತಮವಾದುದನ್ನೆಲ್ಲವನ್ನು ಅರ್ಪಿಸಲು ಕರ್ತವ್ಯ ಬದ್ಧನಾಗಿರುತ್ತಾನೆ." (3ನೇ ದಯಾ ಅರ್ಜಿ, 1914)
- "...ಸಾಂವಿಧಾನಿಕ ಮಾರ್ಗಕ್ಕೆ ಹಿಂದಿರುಗಿದ ನನ್ನ ಪರಿವರ್ತನೆಯು, ನನ್ನನ್ನು ತಮ್ಮ ಮಾರ್ಗದರ್ಶಕನನ್ನಾಗಿ ಹಿಂದೊಮ್ಮೆ ಕಂಡ ಭಾರತ ಮತ್ತು ವಿದೇಶಗಳಲ್ಲಿನ ಎಲ್ಲಾ ದಾರಿತಪ್ಪಿದ ಯುವಕರನ್ನು ವಾಪಸು ಕರೆತರುತ್ತದೆ. ನನ್ನ ಈ ಮನಪರಿವರ್ತನೆಯು ಆತ್ಮಸಾಕ್ಷಿಗೆ ಅನುಗುಣವಾಗಿರುವುದರಿಂದ ಸರಕಾರವು ಇಷ್ಟಪಟ್ಟ ರೀತಿಯಲ್ಲಿ ನಾನು ಸರ್ಕಾರಕ್ಕೆ ಸೇವೆ ಸಲ್ಲಿಸಲು ಸಿದ್ಧನಿದ್ದೇನೆ. ಒಬ್ಬ ಶಕ್ತಿಶಾಲಿ ಮಾತ್ರ ಕರುಣಾಮಯಿಯಾಗಲು ಸಾಧ್ಯ. ಹಾಗಾಗಿ ಒಬ್ಬ ದಾರಿತಪ್ಪಿದ ಉಡಾಳ ಮಗ, ತಂದೆಯಂತಹ ಸರ್ಕಾರದ ಬಾಗಿಲ ಹೊರತು ಮತ್ತೆಲ್ಲಿಗೆ ಹೋಗುವುದು?" (ಭಾರತದ ಸ್ವಾತಂತ್ರ್ಯ ಹೋರಾಟಗಾರರಿಗೆ)
- "...ಸರ್ಕಾರವು ನನ್ನಿಂದ ಹೆಚ್ಚಿನ ಖಾತ್ರಿಯನ್ನು ಬಯಸಿದರೆ, ನಾನು ಮತ್ತು ನನ್ನ ಸಹೋದರ, ಸರ್ಕಾರವು ಸೂಚಿಸುವ ಒಂದು ನಿರ್ದಿಷ್ಟ ಮತ್ತು ಸಮಂಜಸವಾದ ಅವಧಿಯವರೆಗೆ ರಾಜಕೀಯದಲ್ಲಿ ಭಾಗವಹಿಸುವುದಿಲ್ಲ ಎಂಬ ಪ್ರತಿಜ್ಞೆಯನ್ನು ಮಾಡಲು ಸಂಪೂರ್ಣವಾಗಿ ಸಿದ್ಧರಿದ್ದೇವೆ... ಇದು ಅಥವಾ ಯಾವುದೇ ಪ್ರತಿಜ್ಞೆ, ಉದಾ: ಒಂದು ನಿರ್ದಿಷ್ಟ ಪ್ರಾಂತ್ಯದಲ್ಲಿ ವಾಸಿಸುವುದು ಅಥವಾ ನಮ್ಮ ಬಿಡುಗಡೆಯ ನಂತರ ನಿರ್ದಿಷ್ಟ ಅವಧಿಯವರೆಗೆ ನಮ್ಮ ಚಲನವಲನಗಳನ್ನು ಪೊಲೀಸರಿಗೆ ವರದಿ ಮಾಡುವುದು–ನಿಜವಾಗಿ ಖಚಿತಪಡಿಸುವ ಇಂತಹ ಯಾವುದೇ ಸಮಂಜಸವಾದ ಷರತ್ತುಗಳನ್ನು ರಾಜ್ಯದ ಸುರಕ್ಷತೆಯನ್ನು ನಾನು ಮತ್ತು ನನ್ನ ಸಹೋದರ ಸಂತೋಷದಿಂದ ಒಪ್ಪಿಕೊಳ್ಳುತ್ತೇವೆ. (ನಾಲ್ಕನೇ ದಯಾ ಅರ್ಜಿ ದಿನಾಂಕ: 30 ಮಾರ್ಚ್ 1920)

ಇಂತಹ ಒಬ್ಬ ಹೆದರುಪುಕ್ಕ, ಬ್ರಿಟಿಷ್ ಸರ್ಕಾರದ ನಿಷ್ಠಾವಂತ ಸೇವಕನನ್ನು ವೀರನೋ ಅಥವಾ ಹೇಡಿಯೋ ಎಂದು ತೀರ್ಮಾನಕ್ಕೆ ಬರುವುದು ಓದುಗರಿಗೆ ಬಿಟ್ಟಿದ್ದು. ■

# ಭಾರತದ ಜೈಲುಗಳಲ್ಲಿ ಕೊಳೆಯುತ್ತಿರುವ ವಿಚಾರಣಾಧೀನ ಖೈದಿಗಳು: ನ್ಯಾಯ..... ಎಲ್ಲಿದೆ...?

ಆಳುವವರು ನಮ್ಮ ದೇಶವನ್ನು ಅತೀ ದೊಡ್ಡ ಪ್ರಜಾತಂತ್ರ ಎಂದು ಘೋಷಿಸುತ್ತಾರೆ. ಹಾಗಿದ್ದಲ್ಲಿ ಪ್ರಜಾತಾಂತ್ರಿಕ ರೂಢಿಗಳು, ತತ್ವಗಳು ಆಚರಣೆಯಲ್ಲಿ ಇರಲೇಬೇಕಲ್ಲವೇ? ಆದರೆ ಭಾರತದಲ್ಲಿ ಪ್ರಜಾತಾಂತ್ರಿಕ ನಡೆಯ ಉಲ್ಲಂಘನೆ, ಮೌಲ್ಯಗಳನ್ನು ಹೊಸಕಿಹಾಕುವ ಗಾಥೆಯನ್ನೇ ಈ ದೇಶದ ಜನ ಬಲ್ಲರು. ಭಾರತದಲ್ಲಿನ ಜೈಲುಗಳ ಪರಿಸ್ಥಿತಿ ಕೊನೆಯಿರದ ದುಃಸ್ವಪ್ನದಂತಿದೆ. ಖೈದಿಗಳಿಗೂ, ಅವರ ಪ್ರೀತಿಪಾತ್ರರಿಗೂ ಅಲ್ಲಿ ಎಲ್ಲೆ ಮೀರಿದ ಚಿತ್ರಹಿಂಸೆ. ಈ ಜೈಲುಗಳಲ್ಲಿರುವುದು ಖೈದಿಗಳ ಮನುಷ್ಯತ್ವವನ್ನೂ ಕೊಂದು ಅಮಾನವೀಯ ಬದುಕಿಗೆ ದೂಡುವಂತಹ ಪರಿಸ್ಥಿತಿ. ವಿಚಾರಣೆ ಇಲ್ಲದೆ ವರ್ಷಗಟ್ಟಲೆ ಈ ಜೈಲುಗಳಲ್ಲಿ ಕೊಳೆಯುತ್ತಿರುವವನಿಗೆ ಬದುಕಿನ ಘನತೆ ಉಳಿದಿರಲು ಸಾಧ್ಯವೇ?

ನ್ಯಾಯಾಲಯದ ಮೂಲಕ ನ್ಯಾಯ ಒದಗಿಸುವುದು ಪ್ರಜಾತಂತ್ರದ ಭಾಗ. ಅತೀ ದೊಡ್ಡ ಪ್ರಜಾತಂತ್ರ ಎಂದು ಕರೆಸಿಕೊಳ್ಳುವ ನಮ್ಮ ದೇಶದ ಗೃಹ ಸಚಿವಾಲಯದ 2022 ರ ವರದಿಯ ಪ್ರಕಾರ, ಜೈಲುಗಳಲ್ಲಿರುವ ಒಟ್ಟು 5,54,034 ಖೈದಿಗಳಲ್ಲಿ, ಶೇಕಡಾ 76 ರಷ್ಟು, ಅಂದರೆ, 4,27,165 ಜನರ ವಿಚಾರಣೆ ಇನ್ನೂ ನಡೆಯುತ್ತಿದೆ.

**ಪ್ರಭಾವಿಗಳಿಗೆ ಜಾಮೀನು, ಸಾಮಾನ್ಯರಿಗಷ್ಟೇ ಜೈಲು**

ಗುಜರಾತ್‌ನಲ್ಲಿ ಇತ್ತೀಚಿಗೆ ನಡೆದ ನ್ಯಾಯಾಧೀಶರ ಸಮ್ಮೇಳನದಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿ ಹೀಗೆನ್ನುತ್ತಾರೆ: 'ಜಾಮೀನೇ ನಿಯಮ, ಜೈಲು ಅಪವಾದ!'(Bail is the rule, Jail is exception) ರಾಜಸ್ಥಾನ ರಾಜ್ಯ ವಿರುದ್ಧ ಬಾಲ್ಚಂದ್ ಅಲಿಯಾಸ್ ಬಲಿಯಾ(1978) ಎಂಬ ಮಹತ್ವದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಈ ನಿಲುವನ್ನೇ ಎತ್ತಿಹಿಡಿದಿತ್ತಾದರೂ ವಾಸ್ತವವು ಇದಕ್ಕೆ ವ್ಯತಿರಿಕ್ತವಾಗಿದೆ ಎಂಬುದಕ್ಕೆ ಇದನ್ನು ಈಗ ನೆನಪಿಸಬೇಕಾಗಿದೆ!

ವಿಚಾರಣೆ ನಡೆಯದೇ ಅಂತಿಮ ತೀರ್ಪಿಗಾಗಿ ಕಾಯುತ್ತಾ ಅನೇಕರು ಜೈಲುಗಳಲ್ಲಿ ದಿನಕಳೆಯುತ್ತಿದ್ದಾರೆ. "ವಿಚಾರಣೆ ಬಾಕಿ ಇರುವ ಕಾರಣಕ್ಕೇ ಒಬ್ಬ ವ್ಯಕ್ತಿಯನ್ನು ಅನಿರ್ದಿಷ್ಟ ಅವಧಿಗೆ ಜೈಲಿನಲ್ಲಿ ಇರಿಸಲಾಗುವುದಿಲ್ಲ, ಇದು ಸಂವಿಧಾನದಲ್ಲಿ ಪ್ರತಿಪಾದಿಸಿರುವ ಮೂಲಭೂತ ಹಕ್ಕನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತದೆ ಹಾಗೂ ಇದೇ ಆಧಾರದ ಮೇಲೆ ಆರೋಪಿಯನ್ನು ಬಿಡುಗಡೆ ಮಾಡುವ ವಿವೇಚನೆಯನ್ನು ನ್ಯಾಯಸಮ್ಮತ ಎಂದು ನ್ಯಾಯಾಲಯ ಪರಿಗಣಿಸುತ್ತದೆ. ನ್ಯಾಯದ ಮತ್ತು ತ್ವರಿತ ವಿಚಾರಣೆಯ ಹಕ್ಕನ್ನು ಸಂವಿಧಾನದ ಭಾಗ III ರಲ್ಲಿ ಸ್ವಾತಂತ್ರ್ಯದ ವಿಶಿಷ್ಟ ಲಕ್ಷಣವೆಂದು ಪರಿಗಣಿಸಲಾಗಿದೆ. ಮತ್ತು ಸಕಾಲಿಕ ವಿಚಾರಣೆ ಸಾಧ್ಯವಾಗದಿದ್ದಾಗ ಆರೋಪಿಯ ಸೆರೆವಾಸವನ್ನು ಮುಂದುವರೆಸುವಂತಿಲ್ಲ." ಬಾಂಬೆ ಹೈಕೋರ್ಟ್ ಕಳೆದ ಸೆಪ್ಟೆಂಬರ್‌ನಲ್ಲಿ ಜೋಡಿ ಕೊಲೆ ಪ್ರಕರಣದ ಆರೋಪಿಗೆ ಜಾಮೀನು ನೀಡುವ ಸಂದರ್ಭದಲ್ಲಿ ಹೀಗೆ ಹೇಳಿತ್ತು. ಇಲ್ಲಿಯವರೆಗೂ, ಸೆಕ್ಷನ್ 57, ಅಪರಾಧ ದಂಡಸಂಹಿತೆ ಸೆಕ್ಷನ್ 167 ನೊಂದಿಗೆ ಪರಿಗಣಿಸಿ ನೋಡಿದಾಗ ಬಂಧನಕ್ಕೆ ತೆಗೆದುಕೊಳ್ಳುವ ಕಾರ್ಯವಿಧಾನದ ಬಗ್ಗೆ ಸ್ಪಷ್ಟ ಚಿತ್ರಣ ಸಿಕ್ಕುತ್ತಿತ್ತು. ಹಾಗೂ ಒಬ್ಬ ಆರೋಪಿಯನ್ನು ಎಷ್ಟು ಕಾಲ ಬಂಧಿಸಿಡಬೇಕು ಎಂದು ಹಾಗೂ ಆತನ ಸೆರೆವಾಸದ ವಿಧಾನವನ್ನು ಸ್ಪಷ್ಟಪಡಿಸಿದೆ. ಅಪರಾಧಿಯು ಪೊಲೀಸ್ ಸೆರೆಯಲ್ಲಿ ಇರುವುದನ್ನು ಪೊಲೀಸ್ ಬಂಧನ ಎಂದೂ, ನ್ಯಾಯಾಲಯದ ಅಡಿ ಅಥವಾ ನ್ಯಾಯಾಲಯದ ಸುಪರ್ದಿಯಲ್ಲಿ ಸೆರೆಯಲ್ಲಿದ್ದರೆ, ನ್ಯಾಯಾಂಗ ಬಂಧನವೆಂದೂ ಕರೆಯಲಾಗುತ್ತದೆ.

ಕೆಲವು ತಿಂಗಳ ಹಿಂದೆ ಸಂಸತ್ತಿನಲ್ಲಿ ಅಂಗೀಕರಿಸಿಲಾದ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ 187ನೇ ಅನುಚ್ಛೇದವು, ವಿಚಾರಣೆ ಹಂತದಲ್ಲಿ ಪೊಲೀಸ್ ಹಾಗೂ ನ್ಯಾಯಾಂಗ ಬಂಧನ ಕುರಿತಂತೆ ಇರುವ ಸಿಆರ್‌ಪಿಸಿಯ ಸೆಕ್ಷನ್ 167 ಅನ್ನು ಬದಲಿಸಿದೆ.

ಅಪರಾಧಿಯು ಬಂಧಿತನಾದ ನಂತರ ಮಾಜಿಸ್ಟ್ರೇಟ್‌ರ ಮುಂದೆ ಹಾಜರುಪಡಿಸಿದ ಮೊದಲ 15 ದಿನಗಳ ಅವಧಿ ಮಾತ್ರ ಪೊಲೀಸ್ ಸೆರೆಯಲ್ಲಿ ಇರಬಹುದಾಗಿತ್ತು ಎಂಬುದು ಈವರೆಗೆ ಇದ್ದ ಕಾನೂನು. ಆತ ಕೆಲ ದಿನಗಳು ವಿಚಾರಣೆಗೆ ಸಿಗದಿದ್ದರೂ ಈ ಕಾನೂನೇ ಪಾಲನೆಯಾಗಬೇಕಿತ್ತು. ಆದರೆ ಹೊಸ ಕಾನೂನಿನ ಪ್ರಕಾರ ಮೊದಲ 40 ಅಥವಾ 60 ದಿನಗಳ ವಿಚಾರಣಾ ಅವಧಿಯಲ್ಲಿ ಯಾವ ಸಮಯದಲ್ಲಿಯಾದರೂ 15 ದಿನಗಳ(ಒಮ್ಮೆಗೆ ಅಥವಾ ಬಿಡಿ ಬಿಡಿಯಾಗಿ) ಕಸ್ಟಡಿಯನ್ನು ಪೊಲೀಸರು ಹೊಂದಬಹುದು. ಇದರಿಂದಾಗಿ ವಿಚಾರಣೆಯ ಕೊನೆಯ ದಿನಗಳವರೆಗೂ ಬಂಧನದ ಪ್ರಕ್ರಿಯೆಗೆ ಆರೋಪಿ ಒಳಗಾಗಬೇಕಾಗುತ್ತದೆ. ನ್ಯಾಯಾಂಗ ಬಂಧನವು 60 ದಿನಗಳನ್ನು ಮೀರಬಾರದೆಂಬ ನಿಯಮವಿದೆ. ಈ ಕಾಲಾವಧಿ ಮುಗಿದಾಕ್ಷಣ ಆರೋಪಿ ಜಾಮೀನಿಗೆ ಅರ್ಹನಾಗುತ್ತಾನೆ. ಹೊಸ ಕಾನೂನಿನ ಪ್ರಕಾರ ಇದೇನೂ ಬದಲಾವಣೆ ಕಂಡಿಲ್ಲ. ಹಾಗಿದ್ದರೆ, ಸಾವಿರಾರು ಸಂಖ್ಯೆಯಲ್ಲಿ ವಿಚಾರಣಾಧೀನ ಖೈದಿಗಳನ್ನು ವರ್ಷಗಟ್ಟಲೇ ಅದು ಹೇಗೆ ಬಂಧಿಸಿಟ್ಟುಕೊಂಡಿದ್ದಾರೆ?

ಮತ್ತೊಂದು ಮುಖ್ಯ ವಿಷಯವೆಂದರೆ, ಕಾಲಮಿತಿಗೂ ಮೀರಿ ಬಂಧಿಸಲ್ಪಟ್ಟಿರುವ ಖೈದಿಗಳಲ್ಲಿ ಬಹುತೇಕರು ಬಡವರು, ನಿರ್ಗತಿಕರು. ಸಣ್ಣ ಪುಟ್ಟ ಕಳ್ಳತನಗಳಿಗೆ ಬಂಧಿಸಲ್ಪಟ್ಟವರು. ನಿರಪರಾಧಿಗಳಾಗಿಯೂ ವಕೀಲರಿಗಾಗಿ ದುಡ್ಡು ಹಣ ಖರ್ಚುಮಾಡಲಾಗದೆ, ಜೈಲಿನಲ್ಲಿ ದಿನಗಳನ್ನು ಎಣಿಸುತ್ತಿರುವವರು. ಎರಡು, ಮೂರು ಕೆಲವೊಮ್ಮೆ ಐದು ದಶಕಗಳ ನಂತರ ನಿರಪರಾಧಿ ಎಂದು ಸಾಬೀತಾದ ಮೇಲೆ ಹೊರಬಂದವರ ಕಣ್ಣೀರಿನ ಕಥೆಗಳು ಅದೆಷ್ಟೋ! ನಾಣ್ಣುಡಿಯೊಂದಿದೆ, ತಡವಾದ ನ್ಯಾಯ, ನ್ಯಾಯದ ನಿರಾಕರಣೆ ಎಂದು. ಈ ನಿರ್ಗತಿಕರಿಗೆ ನ್ಯಾಯ ಪಡೆಯುವ ಹಕ್ಕಿಲ್ಲವೆ?

**ನ್ಯಾಯ ಮರೀಚಿಕೆಯಾದಾಗ!**

ಮಚಾಂಗ್ ಲಾಲು ಅವರನ್ನು 'ಘೋರ ಹಾನಿಯುಂಟುಮಾಡಿದ' ಎನ್ನಲಾದ ಅಪರಾಧದ ಮೇಲೆ 1951 ರಲ್ಲಿ ಬಂಧಿಸಲಾಗಿತ್ತು. ಸ್ಥಳೀಯ ಮಾನವ ಹಕ್ಕುಗಳ ಗುಂಪು ಇದನ್ನು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಗಮನಕ್ಕೆ ತಂದ ನಂತರ 2005ರಲ್ಲಿ 54 ವರ್ಷಗಳ ನಂತರ ಅವರನ್ನು ನಿರಪರಾಧಿ ಎಂದು ಘೋಷಿಸಿ ಬಿಡುಗಡೆಗೊಳಿಸಲಾಯಿತು. ಸರ್ವೋಚ್ಚ ನ್ಯಾಯಾಲಯವು ಅವರಿಗೆ ಪರಿಹಾರ ನೀಡಲು ಮತ್ತು ಪ್ರತಿ ತಿಂಗಳು ಹಣ ನೀಡಲು ಅಸ್ಸಾಂ ಸರ್ಕಾರಕ್ಕೆ ನಿರ್ದೇಶಿಸಿತ್ತು. ಈ ಪರಿಹಾರ ಹಣವು ಆತನ 54 ವರ್ಷಗಳ ಜೀವನವನ್ನು ಮರಳಿಸಲು ಸಾಧ್ಯವೆ? ಎರಡು ವರ್ಷಗಳ ನಂತರ, ಅಂದರೆ, 2007ರಲ್ಲಿ ಮಚಾಂಗ್ ಲಾಲು ತೀರಿಕೊಂಡರು. ಜೆಎನ್‌ಯುನ ಪ್ರತಿಭಾವಂತ ಮಾಜಿ ವಿದ್ಯಾರ್ಥಿ ಉಮರ್ ಖಾಲಿದ್ ಇಂತಹದ್ದೇ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಫೆಬ್ರುವರಿ 2020 ರ ದೆಹಲಿ ದಂಗೆಯ ಮಾಸ್ಟರ್ ಮೈಂಡ್ ಎಂದು ಆತನ ಮೇಲೆ ಯುಎಪಿಎ ಹಾಗೂ ಭಾರತೀಯ ದಂಡ ಸಂಹಿತೆಯ ಬೇರೆ ಬೇರೆ ವಿಧಿಗಳನ್ನು ಹೇರಿ 2022 ರಿಂದ ಯಾವ ಅಪರಾಧವೂ ಸಾಬೀತಾಗದೇ ಇಂದಿಗೂ ಜೈಲಿನಲ್ಲಿದ್ದಾರೆ. ಸರಿ ಸುಮಾರು 14 ಬಾರಿ ಸರ್ವೋಚ್ಚ ನ್ಯಾಯಾಲಯವು ಆತನ ಜಾಮೀನು ಅರ್ಜಿಯನ್ನು ಮುಂದೂಡಿದೆ. ದೆಹಲಿ ವಿಶ್ವವಿದ್ಯಾಲಯದ ಪೋಲಿಯೊ ಪೀಡಿತ ಪ್ರೊ.ಜಿ.ಎನ್.ಸಾಯಿಬಾಬಾ ರವರು ಉಗ್ರವಾದಿ ಸಂಘಟನೆಗಳೊಂದಿಗೆ ಸಂಬಂಧ ಇಟ್ಟುಕೊಂಡಿರುವ ಆರೋಪದ ಮೇಲೆ ಯಾವ ಆರೋಪವು ಸಾಬೀತಾಗದೇ 10 ವರ್ಷ ಶಿಕ್ಷೆ ಅನುಭವಿಸಿದರು. ಇದೀಗ ಅವರು ಬಿಡುಗಡೆ ಹೊಂದಿದ್ದಾರೆ. ಬೀಮಾ ಕೋರೆಗಾವ್ ಪ್ರಕರಣದಲ್ಲಿ ಬಂಧಿತರಾದ ಆದಿವಾಸಿ ಹಕ್ಕುಗಳ ಹೋರಾಟಗಾರ ಕ್ರೈಸ್ತ ಪಾದ್ರಿ 81ವರ್ಷದ ಸ್ಟಾನ್ ಸ್ವಾಮಿಯವರ ನ್ಯಾಯಾಂಗ ಪ್ರಕ್ರಿಯೆಯು ಅತ್ಯಂತ ಕೆಳಮಟ್ಟವನ್ನು ಮುಟ್ಟಿತ್ತು. ಪಾರ್ಕಿನ್‌ಸನ್ ರೋಗದಿಂದ ಬಳಲುತ್ತಿದ್ದ ಅವರಿಗೆ ಕನಿಷ್ಠ ಅವಶ್ಯಕತೆಗಳನ್ನೂ ಒದಗಿಸಲಾಗಿರಲಿಲ್ಲ. ಅನಾರೋಗ್ಯದ ಕಾರಣದಿಂದಲೂ ಜಾಮೀನು ಸಿಗದೆ 5 ಜುಲೈ 2021 ರಂದು ಅವರು ಅಸುನೀಗಿದರು. ನಾಗಪುರ್ ವಿಶ್ವವಿದ್ಯಾಲಯದ ಡಾ.ಶೋಮಾ ಸೇನ್‌ರವರನ್ನು ಯುಎಪಿಎ ಅಡಿ ಬಂಧಿಸಿ 6 ವರ್ಷ ಜೈಲಿನಲ್ಲಿ ವಿನಾಕಾರಣ ಇರಿಸಿ ನಂತರ ಬಿಡುಗಡೆಗೊಳಿಸಲಾಯಿತು.

ಇನ್ನೊಂದೆಡೆ, ಸರ್ಕಾರದೊಂದಿಗೆ ನಿಕಟ ಸಂಬಂಧ ಹೊಂದಿರುವ 'ದೊಡ್ಡ ವ್ಯಕ್ತಿಗಳು' ಕೆಲವೇ ಗಂಟೆಗಳಲ್ಲಿ ಜಾಮೀನು ಪಡೆದು ಇದೇ ಕಾನೂನಿನಡಿ ಶಿಕ್ಷೆಯಿಂದ ಪಾರಾಗುತ್ತಿದ್ದಾರೆ. 6 ಬಾರಿ ಸಂಸದನಾಗಿದ್ದ ಬ್ರಿಜ್ ಭೂಷಣ್ ಶರಣ್ ಸಿಂಗ್ ಬಿಜೆಪಿಯ ದೊಡ್ಡ ಕುಳ, ಭಾರತೀಯ ಕುಸ್ತಿ ಫೆಡರೇಶನ್ನಿನ ಮಾಜಿ ಅಧ್ಯಕ್ಷ. ಕುಸ್ತಿ ಪಟುಗಳ ಮೇಲೆ ಲೈಂಗಿಕ ಕಿರುಕುಳದ ಆಪಾದನೆ ಹೊಂದಿದ್ದರೂ, ಚಾರ್ಜ್‌ಶೀಟ್ ನಂತರವೂ ಆತನನ್ನು ಬಂಧಿಸಲಿಲ್ಲ. ವಿಚಾರಣೆಯೊಂದಿಗೆ ಸಹಕರಿಸುತ್ತಿದ್ದಾನೆ ಎಂದು ಆತನಿಗೆ ಸೆರೆ ಇಲ್ಲದ ವಿಚಾರಣೆಯ ಭೋಗ! ಬಿಜೆಪಿಯ ಉನ್ನಾವ್ ಜಿಲ್ಲೆಯ ಮಾಜಿ ಶಾಸಕ ಕುಲದೀಪ್ ಸಿಂಗ್ ಸೆನೆಗರ್ ಮೇಲೆ ಅತ್ಯಾಚಾರ, ಕೊಲೆ, ಕೊಲೆ ಯತ್ನದಂತಹ ಗಂಭೀರ ಆಪಾದನೆಗಳಿದ್ದರೂ ದೆಹಲಿ ಹೈಕೋರ್ಟ್ ಈತನಿಗೆ ಮಧ್ಯಂತರ ಜಾಮೀನು ನೀಡಿತ್ತು. ಲಖಿಂಪುರ್ ಖೇರಿಯಲ್ಲಿ ರೈತರ ಮೇಲೆ ಕಾರ್ ಏರಿಸಿದ ಕೇಂದ್ರದ ಮಂತ್ರಿ ಅಜಯ್ ಮಿಶ್ರ ತೇನಿಯವರ ಮಗ ಅಶೀಶ್ ಮಿಶ್ರನಿಗೆ 8 ವಾರಗಳ ಮಧ್ಯಂತರ ಜಾಮೀನು ಪ್ರಾಪ್ತಿಯಾಗಿತ್ತು. ಇಂದಿಗೂ ಈತ ಸ್ವತಂತ್ರನಾಗಿ ಓಡಾಡುತ್ತಿದ್ದಾನೆ. ದಿನಕಳೆದಂತೆಲ್ಲಾ ಆ ದುರ್ಘಟನೆಯಲ್ಲಿ ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ನ್ಯಾಯ ಮರೀಚಿಕೆಯಾಗುತ್ತಿದೆ. 2002ರಲ್ಲಿ ಮೋದಿ ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದಾಗ ನಡೆದ ಕೋಮುಗಲಭೆಯ ಸಂದರ್ಭದಲ್ಲಿ ಗುಂಪು ಅತ್ಯಾಚಾರಕ್ಕೆ ಒಳಗಾದ ಬಿಲ್ಕಿಸ್ ಬಾನು ತನ್ನ ಕಣ್ಣ ಮುಂದೆಯೇ ತನ್ನ ಕುಟುಂಬದ 07 ಜನ ಹತ್ಯೆಗೊಳಗಾದದ್ದನ್ನು ಕಂಡಿದ್ದಳು. ಆ 11 ಜನ ಪಾತಕಿಗಳಿಗೆ ಜೀವಾವಧಿ ಶಿಕ್ಷೆಯಾಗಿತ್ತು. ಆದರೆ ಸನ್ನಡತೆಯ ಆಧಾರದ ಮೇಲೆ ಅವರ ಶಿಕ್ಷೆಯನ್ನು ಮೊಟಕುಗೊಳಿಸಿ ಬಿಡುಗಡೆ ಮಾಡಲಾಯಿತು. ನಂತರ ಸರ್ವೋಚ್ಚ ನ್ಯಾಯಾಲಯದ ಮಧ್ಯಸ್ಥಿಕೆಯಿಂದಾಗಿ ಅವರನ್ನು ವಾಪಸ್ಸು ಜೈಲಿಗೆ ತಳ್ಳಲಾಯಿತು. ಹೀಗೆ ಪಟ್ಟಿ ಮಾಡುತ್ತಾ ಹೋದಲ್ಲಿ ಪುಟಗಳು ಸಾಲುವುದಿಲ್ಲ.

ಇವೆಲ್ಲವನ್ನು ಕಂಡಾಗ ನ್ಯಾಯದ ಮುಂದೆ ಎಲ್ಲರೂ ಸಮಾನರು ಎಂಬುದರಲ್ಲಿ ನೈಜತೆ ಕಾಣುತ್ತದೆಯೆ? ಈ ದೇಶದ ಬಡ, ನಿರ್ಗತಿಕರ ಪಾಲಿಗೆ ನ್ಯಾಯದ ಅಪಹಾಸ್ಯ ಮಾತ್ರವೇ ಸತ್ಯ. ಆದರೆ ನಮ್ಮ ದೇಶದ 'ದೊಡ್ಡ ಜನಗಳಿಗೆ', ಹಣ, ಅಧಿಕಾರ ಉಳ್ಳವರಿಗೆ ಕಾನೂನು ಎಷ್ಟರ ಮಟ್ಟಿಗೆ ಉದಾರವೆಂದರೆ ಅವರು ಶಿಕ್ಷೆಗೊಳಪಟ್ಟಿದ್ದೇ ವಿರಳ. ನಮ್ಮದು ಅತೀ ದೊಡ್ಡ ಪ್ರಜಾತಂತ್ರ ಎಂಬುದೇ ಅತೀ ದೊಡ್ಡ ಪ್ರಹಸನ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಎಲ್ಲಾ ರಂಗದಲ್ಲೂ ಶೋಷಣೆ ಮುಗಿಲುಮುಟ್ಟುವಂತೆ ನ್ಯಾಯ ವ್ಯವಸ್ಥೆಯೂ ಶೋಷಣೆಯ ಮತ್ತೊಂದು ಭಾಗವಾಗಿದೆ. ಜನಶಕ್ತಿಯ ಮುಂದೆ ತಲೆಬಾಗುವಂತಹ ಪ್ರಬಲ ಜನ ಹೋರಾಟದ ಕಿಚ್ಚು ಹತ್ತಿಸದೆ ಈ ಪರಿಸ್ಥಿತಿಗೆ ಪರಿಹಾರವಿಲ್ಲ.




23, ಏಪ್ರಿಲ್ ಕಠ್ಮಂಡು, ನೇಪಾಳ: ಓರ್ವ ಖ್ಯಾತ ಮಾರ್ಕ್ಸ್‌ವಾದಿ ನಾಯಕರಾದ ನಿಲು ಛಪಗಾಯನ್ ನೇತೃತ್ವದ 'ಲೆನಿನ್ ಶತಮಾನೋತ್ಸವ ಆಚರಣೆಯ ಕೇಂದ್ರ ಸಂಘಟನಾ ಸಮಿತಿ'ಯಿಂದ ಸಂಘಟಿತವಾದ ಅಂತರರಾಷ್ಟ್ರೀಯ ಸಮಾವೇಶವನ್ನು ಉದ್ದೇಶಿಸಿ ಎಸ್‌ಯುಸಿಐ(ಸಿ) ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರೂ, ಪಕ್ಷದ ಅಂತರರಾಷ್ಟ್ರೀಯ ವೇದಿಕೆಯ ನಿಯೋಜಕರೂ ಆದ ಕಾ. ಅಮಿತಾವ್ ಚಟರ್ಜಿಯವರು ಮಾತನಾಡುತ್ತಿರುವುದು.

## ಕಾ. ಶಿವರಾಜ್ ಲಾಲ್ ಸಲಾಂ



ಕಾಮ್ರೇಡ್ ಶಿವರಾಜ್. ಎಂ ಗೊನ್ವಾರ್ ಇತ್ತೀಚೆಗೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ತಲೆಗೆ ಆದ ತೀವ್ರ ಪೆಟ್ಟಿನಿಂದ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಇದೀಗ ಅವರು ನಮ್ಮನ್ನು ಅಗಲಿದ್ದಾರೆ.

ಅವರ ಆಕಸ್ಮಿಕ ಸಾವು ಅತ್ಯಂತ ದಾರುಣವೂ, ಆಘಾತಕಾರಿಯಾಗಿದ್ದು ನೋವಿನ ಸಂಗತಿಯಾಗಿದೆ. ಎಂ.ಶಿವರಾಜ್ ಗೋನವಾರ ಅವರು ಎಐಯುಟಿ–ಯುಸಿ ರಾಜ್ಯ ಕೌನ್ಸಿಲ್ ಸದಸ್ಯರೂ, ರಾಯಚೂರು ಜಿಲ್ಲಾ ಉಪಾಧ್ಯಕ್ಷರೂ ಆಗಿದ್ದರು. ವಿದ್ಯುತ್ ಗುತ್ತಿಗೆ ಕಾರ್ಮಿಕರ ಸಂಘಟನೆ 'ಕೆಪಿಟಿಸಿಎಲ್ ವಿದ್ಯುತ್ ವಿತರಣಾ ಗುತ್ತಿಗೆ ಕಾರ್ಮಿಕರ ಸಂಘ' ಕಟ್ಟುವಲ್ಲಿ ಮಹತ್ವದ ಪಾತ್ರ ವಹಿಸಿದ್ದ ಅವರು ಸಂಘದ ರಾಜ್ಯ ಖಜಾಂಚಿಯಾಗಿದ್ದರು.. ಅವರ ಅಗಲಿಕೆಯಿಂದ ಕಾರ್ಮಿಕ ಚಳುವಳಿಯು ಓರ್ವ ನಿಷ್ಠಾವಂತ ಸಂಘಟನಾಕಾರರನ್ನು ಕಳೆದುಕೊಂಡಿದೆ. ಕಾ. ಶಿವರಾಜ್ ಅವರ ಆಕಸ್ಮಿಕ ಸಾವಿಗೆ ಎಐಯುಟಿಯುಸಿ ರಾಜ್ಯ ಸಮಿತಿಯು ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ..

## ನಂಜನಗೂಡು: ಎಐಕೆಕೆಎಂಎಸ್ ನೇತೃತ್ವದಲ್ಲಿ ಹೋರಾಟ

# ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ವಿರುದ್ಧ ಹೋರಾಟ ಭಾಗಶಃ ಯಶಸ್ವಿ

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿಗೆ ಸೇರಿರುವ, ವರುಣಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಮಲ್ಲೂಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಳಗಂಚಿಯಲ್ಲಿ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯು ಕಾರ್ಯನಿರ್ವಹಿಸುತ್ತಿದೆ. 1992ರಲ್ಲಿಯೇ ಸದರಿ ಕಾರ್ಖಾನೆಯು ಇಲ್ಲಿ ಉತ್ಪಾದನೆಯನ್ನು ಪ್ರಾರಂಭಿಸಿದೆ. ಈ ಕಾರ್ಖಾನೆಯು ಸುಮಾರು 326 ಎಕರೆ ಭೂಮಿಯಲ್ಲಿ ತನ್ನ ಘಟಕವನ್ನು ಸ್ಥಾಪಿಸಿದೆ. ಇದಕ್ಕಾಗಿ ಅಗತ್ಯವಿರುವ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಮೂಲಕ ರೈತರಿಂದ ಖರೀದಿಸಿದೆ. ಆ ಸಂದರ್ಭದಲ್ಲಿ ಭೂಮಿಯನ್ನು ನೀಡಿದ ರೈತರಿಗೆ ಖಾಯಂ ಉದ್ಯೋಗವನ್ನು ನೀಡುವ ಭರವಸೆ ನೀಡಲಾಗಿತ್ತು. ಹಾಗೆಯೇ ಅಂದು ಕೆಐಎಡಿಬಿ ಮತ್ತು ಕಾರ್ಖಾನೆಯ ನಡುವೆ ನಡೆದ ಒಪ್ಪಂದದ ಪತ್ರದಲ್ಲಿಯೂ ಉದ್ಯೋಗ ನೀಡುವ ಷರತ್ತನ್ನು ಹಾಕಲಾಗಿದೆ. ಆದರೆ ಭೂಮಿ ಕಳೆದುಕೊಂಡ ಬಹುಪಾಲು ರೈತರ ಮಕ್ಕಳಿಗೆ ಖಾಯಂ ಕೆಲಸವನ್ನು ನೀಡಿರಲಿಲ್ಲ. 2008 ರಲ್ಲಿ ಈ ಕುರಿತು ಪ್ರತಿಭಟನೆ ನಡೆದು, ಪ್ರತಿಭಟನಾ ನಿರತರು ವಿಷ ಕುಡಿದು ಆತ್ಮಹತ್ಯೆಗೆ ಪ್ರಯತ್ನಿಸಿದ ನಂತರ 15 ಜನರಿಗೆ ಖಾಯಂ ಕೆಲಸವನ್ನು ನೀಡಲಾಯಿತು. ಖಾಯಂ ಕೆಲಸವನ್ನು ಹಂತಹಂತವಾಗಿ ನೀಡುವುದಾಗಿ ಹೇಳಿ ಹಲವು ರೈತ ಮಕ್ಕಳನ್ನು ಹೊರಗುತ್ತಿಗೆ ಕಾರ್ಮಿಕರನ್ನಾಗಿ ದುಡಿಸಿಕೊಳ್ಳಲಾಗುತ್ತಿದೆ.

ಇವರುಗಳು ಸುಮಾರು 15–20 ವರ್ಷದಿಂದ ಸದರಿ ಕಾರ್ಖಾನೆಯಲ್ಲಿ ಹೊರಗುತ್ತಿಗೆ ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರಿಗೆ ಕನಿಷ್ಠ ವೇತನವನ್ನಾಗಲೀ, ಇಎಸ್ಐ, ಪಿಎಫ್‌ಗಳನ್ನಾಗಲೀ ಅಥವಾ ಸುರಕ್ಷತಾ ಪರಿಕರಗಳನ್ನಾಗಲೀ ನೀಡದೆ ಜೀತದಾಳುಗಳಂತೆ ದುಡಿಸಿಕೊಳ್ಳುತ್ತಿದ್ದಾರೆ. ಇವರಲ್ಲದೆ ಇನ್ನೂ ಸುಮಾರು 44 ರೈತ ಕುಟುಂಬಗಳಿಗೆ ಉದ್ಯೋಗವನ್ನೇ ನೀಡಿಲ್ಲ. ಕಾರ್ಖಾನೆಯ ಸ್ಥಾಪನೆಗಾಗಿ ಕಡಿಮೆ ಹಣಕ್ಕೆ ತಮ್ಮ ಭೂಮಿಯನ್ನು ಕೆಐಎಡಿಬಿಗೆ ನೀಡಿ, ಇತ್ತ ಭೂಮಿಯೂ ಇಲ್ಲದೇ, ಕೆಲಸವು ಇಲ್ಲದೇ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ದಿನಾಂಕ 01–12–2023ರಂದು ಕೈಗಾರಿಕಾ ಅದಾಲತ್ ನಡೆಸಲಾಯಿತು. ಈ ಅದಾಲತ್‌ನಲ್ಲಿ ಕೆಐಎಡಿಬಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು,





ರಾತ್ರಿಯ ವೇಳೆ ಹೋರಾಟದ ಸ್ಥಳದಲ್ಲಿಯೇ ರೈತರು ಮಲಗಿರುವುದು

ಕೈಗಾರಿಕಾ ಇಲಾಖೆ ಹಾಗೂ ಕೆಐಎಡಿಬಿಯ ಅಧಿಕಾರಿಗಳು, ರೈತಸಂಘಟನೆಗಳ ಮುಖಂಡರು, ಭೂಮಿ ಕಳೆದುಕೊಂಡ ರೈತರು ಹಾಗೂ ಸದರಿ ಕೈಗಾರಿಕೆಯು ಸೇರಿದಂತೆ ಕೆಲಸ ನೀಡಬೇಕಿದ್ದ ಎಲ್ಲಾ ಕೈಗಾರಿಕೆಗಳ ಆಡಳಿತ ವರ್ಗದವರು ಹಾಜರಿದ್ದರು. ಅದಾಲತಿನಲ್ಲಿ ರೈತರಿಗೆ ಡಿಸೆಂಬರ್ 31ರ ಒಳಗೆ ಕೆಲಸ ನೀಡಬೇಕು ಎಂದು ತೀರ್ಮಾನಿಸಲಾಯಿತು. ಡಿಸೆಂಬರ್ 31ರ ಒಳಗೆ ಕೆಲಸ ನೀಡದಿದ್ದರೆ, ಸೂಕ್ತ ಕ್ರಮವಹಿಸುತ್ತೇವೆ ಎಂದು ಕೈಗಾರಿಕೆಗಳಿಗೆ ಜಿಲ್ಲಾಧಿಕಾರಿಗಳು ಎಚ್ಚರಿಕೆಯನ್ನು ನೀಡಿದ್ದರು.

ನಂತರ ಮುಖ್ಯಮಂತ್ರಿಗಳು ಮೈಸೂರಿಗೆ 23–12–2023 ರಂದು ಬಂದ ಸಂದರ್ಭದಲ್ಲಿ ನಡೆಸಿದ ಕೈಗಾರಿಕೆಗಳ ಸಭೆಯಲ್ಲೂ, ಉದ್ಯೋಗ ನೀಡಲು ಕೈಗಾರಿಕೆಗಳಿಗೆ ತಾಕೀತು ಮಾಡಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಹಾಗೆಯೇ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ಹಲವಾರು ಬಾರಿ ಸಭೆ ಕರೆದು ರೈತರಿಗೆ ಕೆಲಸ ಕೊಡುವುದರ ಬಗ್ಗೆ ಮಾತನಾಡಿದ್ದಾರೆ. ಆದರೆ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯು ಮುಖ್ಯಮಂತ್ರಿಗಳು ಹಾಗೂ ಸರ್ಕಾರಿ ಅಧಿಕಾರಿಗಳ ಮಾತಿಗೆ ಬೆಲೆಯನ್ನು ಕೊಡುತ್ತಿಲ್ಲ.

ಇದಾದ ನಂತರ ಫೆಬ್ರವರಿ 7ರಿಂದ ಹೋರಾಟ ಪ್ರಾರಂಭವಾಯಿತು. ಈ ಕುರಿತು 16–02–2024 ರಂದು ಜಿಲ್ಲಾಧಿಕಾರಿಗಳು ಹಾಗೂ ರೈತರು, ಸದರಿ ಕಾರ್ಖಾನೆಯ ಆಡಳಿತ ಮಂಡಳಿಯ ಸಭೆ ನಡೆದು ಭೂಮಿ ಕಳೆದುಕೊಂಡು ಹೋರಾಟ ಮಾಡುತ್ತಿರುವ ಕುಟುಂಬಗಳಿಗೆ ಉದ್ಯೋಗ ನೀಡಬೇಕೆಂದು ಸಭೆಯಲ್ಲಿ ನಿರ್ಣಯ ಮಾಡಲಾಯಿತು. ಹಾಗೂ ಫೆಬ್ರವರಿ 28ರ ಒಳಗೆ ರೈತರಿಗೆ ಕೆಲಸ ನೀಡುವ ಬಗ್ಗೆ ವರದಿ ನೀಡಬೇಕೆಂದು ತಿಳಿಸಿದರು. ಆದರೆ ಕಾರ್ಖಾನೆಯ ಆಡಳಿತ ಮಂಡಳಿಯು ಸಭೆಯ ತೀರ್ಮಾನಕ್ಕೆ ಯಾವುದೇ ಬೆಲೆ ನೀಡದೇ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಕಡೆಗಣಿಸಿದ್ದಾರೆ

ಇದರ ವಿರುದ್ಧ ನಡೆದ ನಿರಂತರ ಹೋರಾಟದ ಫಲವಾಗಿ 18ಜನ ರೈತರ ಮಕ್ಕಳಿಗೆ ಹೊರಗುತ್ತಿಗೆಯ ಆಧಾರದಮೇಲೆ ಕೆಲಸ ನೀಡಿದ್ದು ಸರ್ಕಾರ ಹೇಳಿರುವ ಕನಿಷ್ಠ ವೇತನ, ಇಎಸ್ಐ, ಪಿಎಫ್, ಗಳನ್ನು ನೀಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ. ಉಳಿದ 26ಜನ ರೈತರಿಗೆ ಕಬ್ಬನ್ನು ಅರೆಯುವ ಸಂದರ್ಭದಲ್ಲಿ ಕೆಲಸ ನೀಡುವುದಾಗಿ ತಿಳಿಸಿದ್ದಾರೆ. ಈ ಹೋರಾಟ ಭಾಗಶಃ ಯಶಸ್ವಿಯಾಗಿದ್ದು 44ಜನ ರೈತರ ಕುಟುಂಬದವರಿಗೂ ಕೆಲಸ ಸಿಗುವವರೆಗೂ ನಮ್ಮ ಹೋರಾಟ ಮುಂದುವರೆಯುತ್ತದೆ.

## ರಾಜ್‌ಕೋಟ್ ಅಗ್ನಿದುರಂತ: ಎಸ್‌ಯುಸಿಐ(ಸಿ) ಖಂಡನೆ

ಗುಜರಾತ್‌ನ ರಾಜ್‌ಕೋಟ್ ಗೇಮಿಂಗ್ ಝೋನ್‌ನಲ್ಲಿ ಅನೇಕ ಜೀವಗಳನ್ನು ಬಲಿತೆಗೆದುಕೊಂಡ ಮತ್ತು ನೂರಾರು ಮಂದಿ ಗಾಯಗೊಂಡ ಬೆಂಕಿ ದುರಂತವನ್ನು ಖಂಡಿಸಲು ಯಾವುದೇ ಪದಗಳೇ ಸಾಲದು. ಮೃತರ ಮತ್ತು ಗಾಯಗೊಂಡವರ ಕುಟುಂಬಗಳಿಗೆ ನಾವು ಹೃದಯಾಂತರಾಳದಿಂದ ಸಂತಾಪವನ್ನು ವ್ಯಕ್ತಪಡಿಸುತ್ತೇವೆ. ವರದಿಯಾದಂತೆ, ರಾಜ್‌ಕೋಟ್‌ನಲ್ಲಿನ ಈ ಗೇಮಿಂಗ್ ವಲಯ ಮತ್ತು ರಾಜ್ಯದ ಇತರವುಗಳು ಸಹ ಸರಿಯಾದ ಪರವಾನಗಿ ಇಲ್ಲದೆ ಕಾರ್ಯನಿರ್ವಹಿಸುತ್ತಿವೆ. ಇದು ಪ್ರಧಾನಿ ಮೋದಿಯವರ ಬಹು ಪ್ರಚಾರದ 'ವೈಬ್ರೆಂಟ್ ಗುಜರಾತ್' ನ ನೆಲದ ವಾಸ್ತವತೆಯನ್ನು ತೆರೆದಿಡುತ್ತದೆ.

ಈ ಅಗ್ನಿ ದುರಂತಕ್ಕೆ ಮುಂಚೆಯೇ ಸೂರತ್‌ನ ತಕ್ಷಶಿಲಾ, ಅಹಮದಾಬಾದ್‌ನ ಶ್ರೇ ಆಸ್ಪತ್ರೆ (ಕೊರೊನಾ ಸಾಂಕ್ರಾಮಿಕ ಸಮಯದಲ್ಲಿ), ಮೋರ್ಬಿ ತೂಗುಸೇತುವೆ, ವಡೋದರಾದ ಹರ್ನಿ ಸರೋವರದಂತಹ ವಿನಾಶಕಾರಿ ದುರಂತಗಳಿಗೆ ಜನತೆ ಸಾಕ್ಷಿಯಾಗಿದ್ದಾರೆ.

ಇಂತಹ ದುರಂತದ ಸಮಯದಲ್ಲಿ ರಾಜ್ಯ ಸರ್ಕಾರವು ಪ್ರತಿ ಬಾರಿ ಎಸ್‌ಐಟಿ (ವಿಶೇಷ ತನಿಖಾ ತಂಡ) ರಚಿಸುತ್ತದೆ. ಆರಂಭದಲ್ಲಿ ಅಪರಾಧಿಗಳನ್ನು ಹಿಡಿಯಲಾಗುತ್ತದೆ ಮತ್ತು ನಂತರ ಕ್ಲೀನ್–ಚಿಟ್ ನೀಡಿ ಬಿಡುಗಡೆ ಮಾಡಲಾಗುತ್ತದೆ. ಕಳೆದ 5 ವರ್ಷಗಳಲ್ಲಿ ಗುಜರಾತ್‌ನಲ್ಲಿ ರಾಜ್‌ಕೋಟ್‌ನಂತಹ ಅಗ್ನಿ ದುರಂತಗಳಿಂದ 3179 ಅಮಾಯಕರು ಸಾವನ್ನಪ್ಪಿದ್ದಾರೆ. ಇದು 'ವೈಬ್ರೆಂಟ್ ಗುಜರಾತ್'ನ – 'ಸುರಕ್ಷಿತ ಗುಜರಾತ್'ನ ನಿಜವಾದ ಮುಖ!

ಶ್ರೀಮಾನ್ ಮೋದಿ ಮತ್ತು ಶಾ ಚುನಾವಣಾ ಪ್ರಚಾರದಲ್ಲಿ ನಿರತರಾಗಿರುವ ಕಾರಣ ರಾಜ್–



ಕೋಟ್‌ಗೆ ಒಮ್ಮೆಯೂ ಭೇಟಿ ನೀಡಲಾಗಲಿಲ್ಲ. ಜನರ ಕಷ್ಟಕ್ಕಿಂತ ಮತಗಳೇ ಅವರಿಗೆ ಅಮೂಲ್ಯವಲ್ಲವೇ!? ಕಳೆದ ಮೇ 27 ರಂದು ಗುಜರಾತ್ ಹೈಕೋರ್ಟ್ ಕೂಡ ರಾಜ್ಯ ಸರ್ಕಾರವನ್ನು ಟೀಕಿಸಿ, "ನೀವು ಕುರುಡರೇ? ಇಲ್ಲದಿದ್ದರೆ ಹಾಡುಹಗಲಿನಲ್ಲಿ ಇಂತಹ ಅಕ್ರಮಗಳು ಹೇಗೆ ನಡೆಯುತ್ತಿವೆ?" ಎಂದು ತರಾಟೆಗೆ ತೆಗೆದುಕೊಂಡಿದೆ.

ಅಂತಿಮವಾಗಿ ದೇಶದ ಜನರ ನೋವು, ಸಂಕಟ ಮತ್ತು ಆತಂಕವನ್ನು ಹಂಚಿಕೊಳ್ಳುತ್ತಾ, ನಾವು ಈ ಆಗ್ರಹಗಳನ್ನು ಮುಂದಿಡುತ್ತೇವೆ:

1. ರಾಜಕೋಟ್ ಗೇಮಿಂಗ್ ವಲಯದಲ್ಲಿ ಅಗ್ನಿ ದುರಂತದಲ್ಲಿ ಸತ್ತ ಸಂಬಂಧಿಕರಿಗೆ ಮತ್ತು ಗಾಯಗೊಂಡವರಿಗೆಲ್ಲ (ಉಚಿತ ಚಿಕಿತ್ಸೆ ಸೇರಿದಂತೆ) ಸಾಕಷ್ಟು ಆರ್ಥಿಕ ಪರಿಹಾರ ನೀಡಬೇಕು.
2. ಈ ಘಟನೆಯ ಮತ್ತು ಹಿಂದಿನ ದುರಂತಗಳ ದುಷ್ಕರ್ಮಿಗಳಿಗೆ ತನಿಖೆಯೆಂಬ ಕುಂಟುನೆಪ ನೀಡದೆ ಅನುಕರಣೀಯ ಶಿಕ್ಷೆಯನ್ನು ನೀಡಬೇಕು.

**ಪ್ರವಾಶ್ ಘೋಷ್**
**ಪ್ರಧಾನ ಕಾರ್ಯದರ್ಶಿಗಳು**
**28.05.2024**



**ದಾವಣಗೆರೆ ಜಿಲ್ಲೆಯ ಕದರಪ್ಪನ ಹಟ್ಟಿಗೆ ರಸ್ತೆ, ಕುಡಿಯುವ ನೀರು ಮೊದಲಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಒತ್ತಾಯಿಸಿ ಎಐಕೆಕೆಎಂಎಸ್ ನೇತೃತ್ವದಲ್ಲಿ ಪಂಚಾಯತ್ ಕಚೇರಿ ಮುಂದೆ ಪ್ರತಿಭಟನೆ.**

## ಆದಿವಾಸಿಗಳ ಯಶಸ್ವಿ ಹೋರಾಟ



ಹೆಗ್ಗಡದೇವನಕೋಟೆ ತಾಲೂಕಿನ ಡಿ.ಬಿ ಕುಪ್ಪೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗೋಳೂರು ಹಾಡಿಯಲ್ಲಿ ಅಳವಡಿಸಿರುವ ಸೋಲಾರ್ ದೀಪವು ಕೆಟ್ಟು ಹೋಗಿದ್ದು ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಬಹುತೇಕ ಹಾಡಿಗಳ ಜನಗಳು ಕತ್ತಲೆಯಲ್ಲಿ ಬದುಕುವ ಪರಿಸ್ಥಿತಿ ಇದೆ. ದುರಸ್ತಿ ಮಾಡುವ ಕಂಪನಿಗೆ ಸಹ ಎಷ್ಟೇ ಬಾರಿ ಕರೆ ಮಾಡಿ ದೂರು ನೀಡಿದರೂ ಸಹ ಜನಗಳ ಸಮಸ್ಯೆಗೆ ಸ್ಪಂದಿಸುತ್ತಿಲ್ಲ. ಜೊತೆಗೆ ಹಾಡಿ ಜನಗಳನ್ನು ಹೊರತುಪಡಿಸಿ ಉಳಿದೆಲ್ಲ ಜನರಿಗೆ ವಿದ್ಯುತ್ ಸಂಪರ್ಕವಿದ್ದು ಆದಿವಾಸಿಗಳಿಗೆ ಮಾತ್ರ ವಿದ್ಯುತ್ ಸಂಪರ್ಕವನ್ನು ನೀಡಿರುವುದಿಲ್ಲ, ಹಾಗಾಗಿ ಈ ಕೂಡಲೇ ಯಾವುದೇ ತಾರತಮ್ಯವಿಲ್ಲದೆ ಆದಿವಾಸಿ ಜನಗಳಿಗೂ ಸಹ ವಿದ್ಯುತ್ ಸಂಪರ್ಕ ಕಲ್ಪಿಸಿ, ಜೊತೆಗೆ ಇನ್ನುಳಿದ ಮೂಲಭೂತ ಸೌಕರ್ಯಗಳಾದ ಮನೆ, ಕುಡಿಯುವ ನೀರು, ಇನ್ನಿತರ ಸೌಕರ್ಯಗಳನ್ನು ಒದಗಿಸಬೇಕೆಂದು ಗೋಳೂರು ಹಾಡಿಯ ಜನ ಪ್ರತಿಭಟಿಸಿದರು. ಈ ಪ್ರತಿಭಟನೆಯ ವರದಿಯನ್ನು ಗಮನಿಸಿದ ಮುಖ್ಯಮಂತ್ರಿಗಳ ಕಾರ್ಯಾಲಯದ ಆದೇಶದ ನಂತರ ಸಂಬಂಧಿಸಿದ ಅಧಿಕಾರಿಗಳು ಹಾಡಿಗೆ ಭೇಟಿನೀಡಿ ಸೋಲಾರ್ ದೀಪದ ಸಮಸ್ಯೆಯನ್ನು ಬಗೆಹರಿಸಿದ್ದಾರೆ.

**Registered Newspaper**
Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)




ತಿಪಟೂರು: ಹಾಲ್ಕುರಿಕೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಹಾಲೇನಹಳ್ಳಿ, ಹೊಸೂರು ಮತ್ತು ಹಾಲೇನಹಳ್ಳಿ ಗೊಲ್ಲರಹಟ್ಟಿಯ ಷೇರುದಾರರನ್ನು ಅನುಮತಿ ಇಲ್ಲದೆ ವಿಭಜಿಸುವ ಧೋರಣೆಯನ್ನು ಖಂಡಿಸಿ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ (ಎಐಕೆಕೆಎಂಎಸ್) ವತಿಯಿಂದ ತಿಪಟೂರು ತಾಲೂಕು ಕಚೇರಿಯ ಮುಂದೆ ಪ್ರತಿಭಟನೆಯನ್ನು ನಡೆಸಲಾಯಿತು. ಸ್ಥಳಕ್ಕೆ ಆಗಮಿಸಿದ ಉಪ ವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್ ಪರವಾಗಿ ಗ್ರೇಡ್–2 ತಹಶೀಲ್ದಾರ್ ಜಗನ್ನಾಥ್ ಅವರು ಮನವಿಯನ್ನು ಸ್ವೀಕರಿಸಿದರು.



ನರೇಗಾ ಕಾರ್ಮಿಕರಿಗೆ ದಿನಕ್ಕೆ ಕೂಲಿ ಕನಿಷ್ಠ ರೂ. 349 ನ್ನು ಕೊಡಬೇಕು ಎಂದು ಆಗ್ರಹಿಸಿ ಬಳ್ಳಾರಿ ಜಿಲ್ಲೆಯ ಕೋಳೂರಿನಲ್ಲಿ ಎಐಕೆಕೆಎಂಎಸ್‌ಎಸ್ ನೇತೃತ್ವದ ಪ್ರತಿಭಟನೆ




ಬಿತ್ತನೆ ಬೀಜಗಳ ದರ ಹೆಚ್ಚಳದ ವಿರುದ್ಧ ಬಳ್ಳಾರಿ ಜಿಲ್ಲೆಯ ಕುರುಗೋಡಿನಲ್ಲಿ ಎಐಕೆಕೆಎಂಎಸ್ ವತಿಯಿಂದ ಪ್ರತಿಭಟನೆ

# ನೀಟ್ ಪ್ರವೇಶ ಪರೀಕ್ಷೆಯಲ್ಲಿ ಭ್ರಷ್ಟಾಚಾರ

## ವಿದ್ಯಾರ್ಥಿಗಳ ಜೀವನದೊಂದಿಗೆ ಚೆಲ್ಲಾಟ ನಿಲ್ಲಿಸಿ!

**ಈ ಕುರಿತು ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಕೆಳಗಿನ ಪತ್ರಿಕಾ ಪ್ರಕಟಣೆ ನೀಡಿದ್ದಾರೆ:**

ಜೂನ್ 4ರಂದು ಪ್ರಕಟಗೊಂಡ ನೀಟ್ ಪರೀಕ್ಷಾ ಫಲಿತಾಂಶದ ಪಾರದರ್ಶಕತೆಯ ಕುರಿತು ದೇಶವ್ಯಾಪಿ ವಿದ್ಯಾರ್ಥಿಗಳು ಹಾಗೂ ಪಾಲಕರು ಹಲವಾರು ಪ್ರಶ್ನೆಗಳನ್ನು ಎತ್ತಿದ್ದಾರೆ. ಯುಜಿಸಿ ಪರೀಕ್ಷಾ ಮಾರ್ಗಸೂಚಿ ಅನ್ವಯ ಅಂಕಗಳನ್ನು ನೀಡಿದ್ದಲ್ಲಿ ವಿದ್ಯಾರ್ಥಿಗಳು ಪಡೆಯಬಹುದಾದ ಅಂಕಗಳೊಂದಿಗೆ, ಪ್ರಸ್ತುತ ಒಂದಿಷ್ಟು ವಿದ್ಯಾರ್ಥಿಗಳು ಪಡೆದಿರುವ ಅಂಕಗಳು ಹೊಂದಿಕೆಯಾಗುತ್ತಿಲ್ಲ. ಕೆಲವು ವಿದ್ಯಾರ್ಥಿಗಳಿಗೆ ಹೆಚ್ಚುವರಿ ಅಂಕ ನೀಡಿರುವುದಾಗಿ ಎನ್‌ಟಿಎ ಸಮಜಾಯಿಸಿ ನೀಡಿದೆ. ಆದರೆ ಹೆಚ್ಚುವರಿ ಶುಲ್ಕಗಳನ್ನು ನೀಡಿರುವ ಮಾನದಂಡವು ಸಂಪೂರ್ಣವಾಗಿ ಪಕ್ಷಪಾತಿಯಾಗಿದೆ. ಈ ವರ್ಷ ಪ್ರಕಟಿಸಲಾಗಿದ್ದ ಮಾರ್ಗಸೂಚಿ ಅನ್ವಯ ಹೆಚ್ಚುವರಿ ಅಂಕಗಳನ್ನು ನೀಡಲು ಅವಕಾಶವಿಲ್ಲ. ಆಶ್ಚರ್ಯಕರವೆಂಬಂತೆ, ಒಂದೇ ಕೇಂದ್ರದಲ್ಲಿ ಪರೀಕ್ಷೆ ಬರೆದ ವಿದ್ಯಾರ್ಥಿಗಳು ಸಮಾನ ಅಂಕಗಳನ್ನು ಗಳಿಸಿದ್ದಾರೆ. ಇದರೊಂದಿಗೆ, ಪರೀಕ್ಷೆಗೂ ಮುನ್ನವೇ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗಿದ್ದವು ಅಥವಾ ಈ ಕುರಿತು ಸಮರ್ಪಕ ತನಿಖೆ ನಡೆಸಲಾಗಿಲ್ಲ ಎಂಬ ಆರೋಪವಿದೆ. ಅನಿರೀಕ್ಷಿತ ಕೆಟ್ಟ ಫಲಿತಾಂಶದಿಂದಾಗಿ ಈಗಾಗಲೇ ಕೆಲವು ವಿದ್ಯಾರ್ಥಿಗಳು ಆತ್ಮಹತ್ಯೆಗೆ ತುತ್ತಾಗಿದ್ದಾರೆ. ಒಟ್ಟಾರೆಯಾಗಿ, ನೀಟ್ ಪರೀಕ್ಷಾ ಪಲಿತಾಂಶದಲ್ಲಿನ ಪಾರದರ್ಶಕತೆಯ ಕೊರತೆ ಮತ್ತು ಭ್ರಷ್ಟಾಚಾರದ ಕುರಿತು ಸಾಕಷ್ಟು ಆರೋಪಗಳು ಕೇಳಿ ಬಂದಿವೆ. ಈ ಮುಂಚೆ, ರಾಜ್ಯಮಟ್ಟದಲ್ಲಿ ಜಂಟಿ ಪ್ರವೇಶ ಪರೀಕ್ಷೆಗಳು ಜಾರಿಯಲ್ಲಿದ್ದಾಗ, ಭ್ರಷ್ಟಾಚಾರದ ಕಾರಣ ಒಡ್ಡಿಯೇ ಅಖಿಲ ಭಾರತ ಮಟ್ಟದ ನೀಟ್ ಪರೀಕ್ಷೆಯನ್ನು ಪ್ರಾರಂಭಿಸಲಾಗಿತ್ತು. ಭ್ರಷ್ಟಾಚಾರದ ಕುರಿತು ತನಿಖೆ ನಡೆಸಿ ಸಂಬಂಧಪಟ್ಟವರಿಗೆ ಸೂಕ್ತ ಶಿಕ್ಷೆ ವಿಧಿಸುವುದರ ಬದಲಿಗೆ ಪರೀಕ್ಷಾ ಪದ್ಧತಿಯನ್ನು ಬದಲಾಯಿಸುವುದು ಪರಿಹಾರವಲ್ಲ ಎಂದು ನಾವು ಆ ಸಂದರ್ಭದಲ್ಲಿ ಎಚ್ಚರಿಕೆ ನೀಡಿದ್ದೆವು. ನಮ್ಮ ಎಚ್ಚರಿಕೆಯು ಇಂದು ನಿಜವಾಗಿದೆ. ಸರ್ಕಾರದ ನಿಷ್ಕಾಳಜಿ ಮತ್ತು ಪರೀಕ್ಷಾ ವ್ಯವಸ್ಥೆಯ ಸಂಪೂರ್ಣ ವ್ಯಾಪಾರೀಕರಣದಿಂದಾಗಿ, ಇಡೀ ವೈದ್ಯಕೀಯ ಪ್ರವೇಶ ಪರೀಕ್ಷೆಯು ಕುಸಿತಕ್ಕೊಳಗಾಗುತ್ತಿದೆ. ಮತ್ತು ಅಮಾಯಕ ವಿದ್ಯಾರ್ಥಿಗಳು ಇದರ ಬಲಿಪಶುಗಳಾಗಿದ್ದಾರೆ. ಈ ಹಿನ್ನೆಲೆಯಲ್ಲಿ, ಒಟ್ಟು ಪ್ರಕರಣದ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕು ಮತ್ತು ಇದರಲ್ಲಿ ಭಾಗಿಯಾದ ಎಲ್ಲ ವ್ಯಕ್ತಿಗಳಿಗೂ ಕಠಿಣ ಶಿಕ್ಷೆ ವಿಧಿಸಬೇಕೆಂದು ಎಐಡಿಎಸ್‌ಓ ಸರ್ಕಾರವನ್ನು ಆಗ್ರಹಿಸುತ್ತದೆ.

## ಎಐಕೆಕೆಎಂಎಸ್: ಸರ್ಕಾರ ಯುದ್ಧೋಪಾದಿಯಲ್ಲಿ ಬರ ಪರಿಹಾರ ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕೆಂದು ಆಗ್ರಹಿಸಿ ರೈತರಿಂದ ರಾಜ್ಯವ್ಯಾಪಿ ಪ್ರತಿಭಟನೆ




ಮೈಸೂರು




ಬಳ್ಳಾರಿ



ರಾಯಚೂರು




ಧಾರವಾಡ




ಹಲಕರ್ಟಿ, ಕಲಬುರ್ಗಿ ಜಿಲ್ಲೆ: ಉದ್ಯೋಗ ಖಾತ್ರಿ ಯೋಜನೆಯ ಕಾರ್ಮಿಕರ ಸಂಬಳ ಬಿಡುಗಡೆಗೆ ಒತ್ತಾಯಿಸಿ ಪ್ರತಿಭಟನೆ

Published by: K.Radhakrishna on behalf of **SOCIALIST UNITY CENTRE OF INDIA-COMMUNIST,** Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120 **Website: www.sucicommunist.org** **EDITOR: K.RADHAKRISHNA**